RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 90 ಪುಟ: 06 ಮಂಗಳವಾರ 04-03-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

ಬೆಂಗಳೂರು | ಬೆಂ.ಗ್ರಾಮಾಂತರ ತುಮಕೂರು ಚಿತ್ರದುರ್ಗ ಮೈಸೂರು ಮಂಡ್ಯ ರಾಮನಗರ ಚಾ.ನಗರ ಹಾಸನ ಚಿಕ್ಕಬಳ್ಳಾಪುರ ಕೋಲಾರ

Honourary Editor: Venkatesh



ಸ್ನೇಹಿತೆ ಲವ್ ಪ್ರಪೋಸಲ್ ಮುಂದಿಡಲು ಹೋಗಿ ಲವಲ್ಲಿ ಬಿದ್ದೆ

ಬ್ರಿಟಿಷರನ್ನು ಬೆರಗಾಗಿಸಿದ 8ರ ಬಾಲೆ

ದಾಖಲೆ ಬರೆದ ರಶ್ಮಿಕಾ ಮಂದಣ್ಣ ಪುಟ 6

# ಸ್ಮಗ್ಲಿಂಗ್: ನಟಿ ಬಂಧನ


## ದುಬೈನಿಂದ ಅಕ್ರಮವಾಗಿ ಚಿನ್ನ ಸಾಗಾಣೆ: ಕನ್ನಡದ ಹಿರೋಯಿನ್ ರನ್ಯಾರಾವ್ ಡಿಆರ್ಐ ವಶಕ್ಕೆ

**ಬೆಂಗಳೂರು:** ಅಕ್ರಮವಾಗಿ ದುಬೈನಿಂದ ಚಿನ್ನ ಸಾಗಾಟ ಮಾಡುತ್ತಿದ್ದ ಕನ್ನಡದ ನಟಿ ರನ್ಯಾ ರಾವ್ ಅವರನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ದುಬೈನಿಂದ ಬೆಂಗಳೂರಿಗೆ ಸುಮಾರು 15 ಕೆಜಿ ಚಿನ್ನವನ್ನು ಬಟ್ಟೆಯಲ್ಲಿ ಮುಚ್ಚಿಟ್ಟು ತರುತ್ತಿದ್ದ ನಟಿ ರನ್ಯಾರಾವ್ ಅವರನ್ನು ಬಂಧಿಸಿ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ.

'ಮಾಣಿಕ್ಯ' ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದ ಈಕೆ ಐಷರಾಮಿ ಜೀವನಕ್ಕಾಗಿ ಅಕ್ರಮವಾಗಿ ದುಬೈನಿಂದ ಚಿನ್ನ ಸಾಗಿಸುತ್ತಿದ್ದ ಬಗ್ಗೆ ಮಾಹಿತಿ ತಿಳಿದ ದೆಹಲಿ ಕಸ್ಟಮ್ಸ್ ಅಧಿಕಾರಿಗಳು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ನಟಿ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಮಗಳು ಎಂದು ಹೇಳಲಾಗಿದ್ದು, ಇದನ್ನೇ ಬಂಡವಾಳವಾಗಿಸಿಕೊಂಡಿದ್ದ ಈಕೆ ಆಗಾಗ್ಗೆ ದುಬೈಗೆ ತೆರಳಿ ಚಿನ್ನವನ್ನು ಅಕ್ರಮವಾಗಿ ಸ್ಮಗ್ಲಿಂಗ್ ಮಾಡುತ್ತಿದ್ದಳು ಎಂದು ತಿಳಿದುಬಂದಿದೆ.



ಕಳೆದ ಜನವರಿ-ಫೆಬ್ರವರಿಯಲ್ಲಿ ಈಕೆ ನಾಲ್ಕೈದು ಬಾರಿ ದುಬೈಗೆ ಹೋಗಿ ಬಂದಿದ್ದಳು. ಹೀಗೆ ಆಗಾಗ್ಗೆ ದುಬೈಗೆ ತೆರಳಿ ಅದೇ ದಿನ ವಾಪಸ್ ಬರುತ್ತಿದ್ದ ಬಗ್ಗೆ ಅಧಿಕಾರಿಗಳಿಗೆ ಸಂಶಯವಿತ್ತು. ಹಾಗಾಗಿ ಆಕೆಯ ಚಲನವಲನದ ಬಗ್ಗೆ ಕಸ್ಟಮ್ಸ್ ಅಧಿಕಾರಿಗಳು ನಿಗಾ ಇರಿಸಿದ್ದರು.

ಅದೇ ರೀತಿ ಸೋಮವಾರ ಬೆಳಿಗ್ಗೆಯೇ ಈಕೆ ದುಬೈಯಿಂದ ಬೆಂಗಳೂರಿಗೆ ವಾಪಸ್ಸಾಗುತ್ತಿರುವ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ದೊರೆತು, ದೆಹಲಿಯ ಕಸ್ಟಮ್ಸ್ ಅಧಿಕಾರಿಗಳು(ಡಿಆರ್ಐ) ಮಧ್ಯಾಹ್ನವೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದು ಆಕೆಯ ಬರುವಿಕೆಗೆ ಕಾದು ಕುಳಿತಿದ್ದಾರೆ.

ಅವರ ನಿರೀಕ್ಷೆಯಂತೆ ಸಂಜೆ ಸುಮಾರು 7.30ರವೇಳೆಗೆ ವಿಮಾನ ನಿಲ್ದಾಣಕ್ಕೆ ಬಂದಿಳಿದ ನಟಿಯನ್ನು ತಪಾಸಣೆಗೆ ಒಳಪಡಿಸಿದ್ದು, ಆ ವೇಳೆ ಬ್ಯಾಗ್‌ನಲ್ಲಿ ಸುಮಾರು 15 ಕೆಜಿ ಚಿನ್ನ ಪತ್ತೆಯಾಗಿದೆ. ಕೂಡಲೇ ಆಕೆಯನ್ನು ವಶಕ್ಕೆ ಪಡೆದುಕೊಂಡ ಅಧಿಕಾರಿಗಳ ತಂಡ, ವಿಚಾರಣೆಗೆ ಒಳಪಡಿಸಿದೆ. ಆ ವೇಳೆ ಆಕೆ ಅಕ್ರಮವಾಗಿ ಚಿನ್ನ ಸಾಗಿಸುತ್ತಿರುವುದು ಖಚಿತವಾಗಿದೆ. ಪುಟ 2

## ಅಪರಾಧ ಪ್ರಕರಣಗಳ ಸಂಖ್ಯೆ ಇಳಿಕೆ



**ಬೆಂಗಳೂರು:** ಸೈಬರ್ ಕ್ರೈಂಗಳನ್ನು ಹೊರತುಪಡಿಸಿದರೆ ರಾಜ್ಯದಲ್ಲಿ ಕಳೆದ 1 ವರ್ಷದಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ ವಿಧಾನಸಭೆಗೆ ಮಂಗಳವಾರ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಗುತ್ತಿದೆ. ಗಾಂಜಾ, ಅಫೀಮು, ಮಟ್ಕಾ, ದಂಧೆ, ಕಳ್ಳಭಟ್ಟಿ, ಸರಗಳ್ಳತನ, ವಾಹನ ಕಳವು ಹಾಗೂ ಮಾದಕವಸ್ತುಗಳ ಮಾರಾಟದ ಮೇಲೆ ನಿರಂತರವಾಗಿ ನಿಗಾ ವಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ರಾತ್ರಿ ಪಾಳಿಯ ಗಸ್ತುಗಳನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು. ಹರಿಹರ ನಗರದಲ್ಲಿ 2023 ರಿಂದ -.24 ರವರೆಗೆ ಈ ಸಂಬಂಧ 123 ಪ್ರಕರಣಗಳು ದಾಖಲಾಗಿವೆ. ಹರಿಹರ ನಗರ ಪೋಲೀಸ್ ಠಾಣೆಯಲ್ಲಿ 51 ಹುದ್ದೆಗಳು ಮಂಜೂರಾಗಿದ್ದು, ಅಷ್ಟೂ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಡಿವೈಎಸ್ಪಿ ಹುದ್ದೆ ಮಂಜೂರಾತಿ ಬಗ್ಗೆ ಪರಿಶೀಲಿಸಲಾಗುವುದು. ಈ ಸಂಬಂಧ ಪ್ರಸ್ತಾವನೆ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದರು.



ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸದಾಶಿವನಗರದ ನಿವಾಸದಲ್ಲಿ ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

## ರಾಜೀನಾಮೆ ನೀಡಿದ ಮುಂಡೆ

**ಮಹಾರಾಷ್ಟ್ರ:** ಮಹಾರಾಷ್ಟ್ರ ಸರ್ಕಾರದ ಸಚಿವ ಮತ್ತು ಎನ್‌ಸಿಪಿ ನಾಯಕ ಧನಂಜಯ್ ಮುಂಡೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಈ ಮಾಹಿತಿ ನೀಡಿದ್ದಾರೆ. ಧನಂಜಯ್ ಮುಂಡೆ ಅವರ ಆಪ್ತ ಸಹಾಯಕ ಪ್ರಶಾಂತ್ ಜೋಶಿ ಅವರು ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರ ಅಧಿಕೃತ ನಿವಾಸವನ್ನು ತಲುಪಿ ಮುಂಡೆ ಅವರ ರಾಜೀನಾಮೆ ಪತ್ರವನ್ನು ಹಸ್ತಾಂತರಿಸಿದರು.



ಮೂಲಗಳ ಪ್ರಕಾರ, ಧನಂಜಯ್ ಮುಂಡೆ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ ಎಂದು ಸಿಎಂ ದೇವೇಂದ್ರ ಫಡ್ನವೀಸ್ ಅವರು ಅಜಿತ್ ಪವಾರ್ ಮತ್ತು ಪ್ರಫುಲ್ ಪಟೇಲ್ ಅವರಿಗೆ ಪತ್ರ ಬರೆದಿದ್ದರು ಪುಟ

## ಅಕ್ರಮ ಮದ್ಯ ಮಾರಾಟ

### ಪಕ್ಷಬೇಧ ಮರೆತು ವಿಧಾನಸಭೆಯಲ್ಲಿ ಗಂಭೀರ ಚರ್ಚೆ

**ಬೆಂಗಳೂರು:** ಗ್ರಾಮೀಣ ಪ್ರದೇಶಗಳಲ್ಲಿ ಅನಧಿಕೃತ ಸ್ಥಳಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ವಿಚಾರ ವಿಧಾನಸಭೆಯಲ್ಲಿಂದು ಪ್ರತಿಧ್ವನಿಸಿ ಪಕ್ಷಬೇಧ ಮರೆತು ಗಂಭೀರ ಚರ್ಚೆಗೆ ಎಡೆಮಾಡಿಕೊಟ್ಟಿತು. ಶಾಸಕ ಕೌಜಲಗಿ ಮಹಂತೇಶ್ ಶಿವಾನಂದ್ ಅವರ ಪ್ರಶ್ನೆಗೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಉತ್ತರ ನೀಡುತ್ತಿದ್ದ ಸಂದರ್ಭದಲ್ಲಿ ಪ್ರತಿಪಕ್ಷಗಳ ಸದಸ್ಯರು ಅಕ್ರಮ ಮದ್ಯ ಮಾರಾಟ ನಿಯಂತ್ರಿಸುವಂತೆ ಆಗ್ರಹಿಸಿದರು.

ಅಕ್ರಮ ಮದ್ಯ ಮಾರಾಟದಿಂದ ವಿದ್ಯಾರ್ಥಿಗಳು ಮದ್ಯವ್ಯಸನಿಗಳಾಗುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಪ್ರಾಪ್ತ ವಯಸ್ಕರಿಗೆ ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಅಂತಹ ಕೃತ್ಯದಲ್ಲಿ ತೊಡಗುವವರ ವಿರುದ್ಧ ಕಾನೂನು ಕ್ರಮ



ಜರುಗಿಸಲು ಇಲಾಖೆಯಿಂದ ಅಗತ್ಯ ಸೂಚನೆಗಳನ್ನು ನೀಡಲಾಗುತ್ತಿದೆ. ಅಕ್ರಮ ಮದ್ಯ ಮಾರಾಟ ತಡೆಯಲು ಅಬಕಾರಿ ಇಲಾಖೆಯಿಂದ ವಲಯ ವ್ಯಾಪ್ತಿಯ ಮಾರ್ಗಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ಗಸ್ತಿನ ಸಂದರ್ಭದಲ್ಲಿ ಮಹಿಳೆಯರು, ಪುಟ 2

## ಗಣಿತ ಪರೀಕ್ಷೆಗೆ 12 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಗೈರು

**ಬೆಂಗಳೂರು:** ಸೋಮವಾರ ನಡೆದ ದ್ವಿತೀಯ ಪಿಯುಸಿ ಗಣಿತ ಪರೀಕ್ಷೆಗೆ ಕರ್ನಾಟಕದಾದ್ಯಂತ 12,533 ವಿದ್ಯಾರ್ಥಿಗಳು ಗೈರುಹಾಜರಾಗಿದ್ದಾರೆ. ಯಾವುದೇ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ಎಸಗಿದ ಅಥವಾ ದುಷ್ಕೃತ್ಯ ಎಸಗಿದ ಪ್ರಕರಣಗಳು ವರದಿಯಾಗಿಲ್ಲ. 2024 ರ ಪರೀಕ್ಷೆಗಳಿಂದ ಜಾರಿಗೆ ತರಲಾದ ಪರೀಕ್ಷೆಗಳ ಪುಟ 2

## ಶಿಕ್ಷಕ ಪೊಲೀಸರ ವಶಕ್ಕೆ

**ಮೈಸೂರು:** ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆಯ ಸರ್ಕಾರಿ ಶಾಲೆಯಲ್ಲಿ ನಡೆದಿದ್ದ ಶಿಕ್ಷಕನಿಂದ ವಿದ್ಯಾರ್ಥಿನಿಯರ ಮೇಲೆ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಕ್ಷಕ ಗಿರೀಶ್ ವಿರುದ್ದ ಪೋಕ್ಸೋ ಪ್ರಕರಣ ದಾಖಲಾಗಿದ್ದು ಆರೋಪಿ ಶಿಕ್ಷಕ ನಾಪತ್ತೆಯಾಗಿದ್ದಾನೆ. ಈ ಸಂಬಂಧ ಕರ್ತವ್ಯ ಲೋಪ ತೋರಿದ ಆರೋಪದ ಮೇಲೆ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಕಾಮುಕ ಶಿಕ್ಷಕ ಗಿರೀಶ್ ನಾಪತ್ತೆ ಪ್ರಕರಣಕ್ಕೆ ಪುಟ 2

## ಶೀಘ್ರದಲ್ಲೇ ಕೈ ಸೇರಲಿದೆ ಗೃಹಲಕ್ಷ್ಮಿ ಹಣ

**ಬೆಂಗಳೂರು:** ಕಳೆದ ನವೆಂಬರ್ ತಿಂಗಳಿನಿಂದ ಸ್ಥಗಿತವಾಗಿರುವ ಗೃಹಲಕ್ಷ್ಮಿ ಹಣ ಶೀಘ್ರದಲ್ಲೇ ಫಲಾನುಭವಿಗಳ ಕೈ ಸೇರಲಿದೆ. ಹೌದು, ಬಾಕಿ ಉಳಿದಿರುವ 4 ತಿಂಗಳ ಪೈಕಿ 2 ತಿಂಗಳ ಹಣವನ್ನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಫಲಾನುಭವಿಗಳ ಖಾತೆಗೆ ನೇರ ವರ್ಗಾವಣೆ ಮಾಡಲು ಮುಂದಾಗಿದೆ. ಪುಟ 2

## 8 ಕೋಟಿ ಪ್ರವಾಸಿಗರು ಕರಾವಳಿಗೆ ಭೇಟಿ

**ಬೆಂಗಳೂರು:** ಕರಾವಳಿ ಪ್ರವಾಸೋದ್ಯಮ ಹೆಚ್ಚು ಜನಪ್ರಿಯವಾಗಿದ್ದು, ವಾರ್ಷಿಕ 8 ಕೋಟಿ ಪ್ರವಾಸಿಗರು ಕರಾವಳಿ ಜಿಲ್ಲೆಗಳಿಗೆ ಭೇಟಿ ನೀಡಿದ್ದಾರೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಗುರುರಾಜ ಶೆಟ್ಟಿ ಘಂಟಿಹೊಳೆ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಕರಾವಳಿ ಭಾಗವೂ ಒಳಗೊಂಡಂತೆ ಒಟ್ಟಾರೆ ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ನ್ನು ಜಾರಿಗೆ ತರಲಾಗಿದೆ ಎಂದರು.

ಕರಾವಳಿ ಭಾಗಕ್ಕೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ತರುವ ಪ್ರಸ್ತಾವನೆ ಇಲ್ಲ. ಪ್ರವಾಸೋದ್ಯಮ ನೀತಿಯಲ್ಲೇ ಕರಾವಳಿ ಭಾಗದಲ್ಲಿನ ಎಲ್ಲಾ ವರ್ಗದ ಪ್ರವಾಸೋದ್ಯಮವನ್ನು



ಅಭಿವೃದ್ಧಿಪಡಿಸಲು ಅವಕಾಶಗಳನ್ನು ಕಲ್ಪಿಸಲಾಗಿದೆ. ಕರಾವಳಿ ಹಾಗೂ ಕಡಲತೀರ ಪ್ರದೇಶಕ್ಕೆ ವಿಶೇಷ ಮಹತ್ವ ನೀಡಲಾಗಿದೆ ಎಂದು ಹೇಳಿದರು.

ಕರಾವಳಿ ಅಭಿವೃದ್ಧಿ ಮಂಡಳಿ ರಚನೆ ಮಾಡುತ್ತೇವೆ. ಭೂ ಬ್ಯಾಂಕ್ ಮಾಡುತ್ತೇವೆ. ಕಂಬಳಕ್ಕೆ ತಲಾ 5 ಲಕ್ಷ ರೂ. ಅನುದಾನ ನೀಡಲಾಗುತ್ತಿದೆ. 320 ಕಿ.ಮೀ. ಉದ್ದದ ಕರಾವಳಿಯಲ್ಲಿ ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಹಕ್ಕುಗಳ ವರ್ಗಾಯಿಸಲು ಅನುವು ಮಾಡಿಕೊಡಲಾಗಿದೆ. ಸಾಹಸ, ಪರಿಸರ ಸ್ನೇಹಿ ವಸತಿ, ಸಂಸ್ಕೃತಿ ಸೇರಿದಂತೆ ಪ್ರವಾಸಿಗರಿಗೆ ಪೂರೈಸುವ ಸೌಲಭ್ಯಗಳನ್ನು, ಸಮಗ್ರ ಕರಾವಳಿ ಪ್ರವಾಸೋದ್ಯಮ ವಲಯಗಳು ಒಳಗೊಂಡಿವೆ. ಕರಾವಳಿಯಲ್ಲಿ ಕನಿಷ್ಠ 10 ಬೃಹತ್ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ಯೋಜನೆ ಮಾಡಲಾಗುತ್ತಿದೆ. ಕರಾವಳಿ ಉತ್ಸವಗಳಿಗೆ ಉತ್ತೇಜನ ನೀಡಲಾಗುತ್ತಿದೆ.

ಕಡಲ ತೀರಗಳಿಗೆ ಬ್ಲ್ಯೂಬ್ಲಾಗ್ ಪ್ರಮಾಣ ಪತ್ರ ಪಡೆಯುವ ಗುರಿಯನ್ನು ಹೊಂದಲಾಗಿದೆ. ಕರಾವಳಿ ಕರ್ನಾಟಕದ ಯೋಜಿತ ಅಭಿವೃದ್ಧಿ ಯೋಜನೆ ಮತ್ತು ಸಿಆರ್‌ಜೆಡ್ ಮಾನದಂಡಗಳೊಂದಿಗೆ ಹೊಂದಾಣಿಕೆಗೆ ಒತ್ತು ನೀಡಲಾಗಿದೆ. ಹೀಗೆ 20 ಅಂಶಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪುಟ 2

## ಮೇಲ್ಮನೆಯಲ್ಲಿ ಶ್ರದ್ಧಾಂಜಲಿ

**ವಿಧಾನಪರಿಷತ್:** ಬೀದರ್ ಜಿಲ್ಲೆಯ ಹೆಸರಾಂತ ಪತ್ರಕರ್ತ, ಸಜ್ಜನ ರಾಜಕಾರಣಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಖಾಜಿ ಅರ್ಷದ್ ಅಲಿ ಅವರು ಮುತ್ಸದ್ದಿ ರಾಜಕಾರಣಿ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ವಿಧಾನಪರಿಷತ್ತಿನಲ್ಲಿ ಸಂತಾಪ ಸೂಚನೆ ನಿರ್ಣಯದ ಮೇಲೆ ಮಾತನಾಡಿದ ಅವರು, ವೃತ್ತಿಯಲ್ಲಿ ಪತ್ರಕರ್ತರಾಗಿದ್ದ ಖಾಜಿ ಅಲಿ ಅವರು ಹಿಂದಿಯಲ್ಲಿ ಬೀದರ್ ಕಿ ಅವಾಜ್ ಮತ್ತು ಉರ್ದು ಭಾಷೆಯಲ್ಲಿ ಸುರ್ಖ್ ಝುಮೀನ್ ಎಂಬ ಎರಡು ಪತ್ರಿಕೆಗಳ ಸಂಪಾದಕರು ಮತ್ತು ಪ್ರಕಾಶಕರಾಗಿದ್ದರು. ನಾಡಿನ ವಿವಿಧ ಪತ್ರಿಕೆಗಳಿಗೆ ಲೇಖನಗಳನ್ನೂ ಬರೆಯುತ್ತಿದ್ದರು ಎಂದು ತಿಳಿಸಿದರು.



ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಬೀದರ್ ನಗರದ ಅಭಿವೃದ್ಧಿಗೆ ಶ್ರಮಿಸಿದ್ದ ಅಲಿ ಪುಟ 2

## ಕರ್ನಾಟಕ ಬಂದ್ ಅಗತ್ಯವಿಲ್ಲ

ಬೆಂಗಳೂರು: ಮಹಾರಾಷ್ಟ್ರ ಮತ್ತು ಕರ್ನಾಟಕದ ಬಸ್ ಸಂಚಾರ ಸುಗಮವಾಗಿದ್ದು ಕಾನೂನು ಸುವ್ಯವಸ್ಥೆ ಉತ್ತಮವಾಗಿದೆ. ಈ ಹಂತದಲ್ಲಿ ಕರ್ನಾಟಕ ಬಂದ್ ಅಗತ್ಯವಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ



ಮಾತನಾಡಿದ ಅವರು, ಕನ್ನಡ ಪರ ಸಂಘಟನೆಗಳು ಕರ್ನಾಟಕ ಬಂದ್‌ಗೆ ಕರೆ ನೀಡಿರುವುದಕ್ಕೆ ಪ್ರತಿಕ್ರಿಯಿಸಿದರು.

ಕರ್ನಾಟಕದ ಸಾರಿಗೆ ಸಂಸ್ಥೆ ನಿರ್ವಾಹಕನ ಮೇಲೆ ಹಲ್ಲೆಯಾದ ಘಟನೆ ನಡೆದ 8 ದಿನ ಆಗಿದೆ. ಆರಂಭದಲ್ಲಿ ಪುಟ 2

## ಹಾಡಹಗಲೇ ದಂಪತಿ-ಮಗು ಕಿಡ್ನಾಪ್

**ಚಾಮರಾಜನಗರ:** ಹಾಡಹಗಲೇ ದಂಪತಿ ಮತ್ತು ಮಗುವನ್ನು ದುಷ್ಕರ್ಮಿಗಳು ಕಿಡ್ನಾಪ್ ಮಾಡಿದ ಘಟನೆ ಬಂಡೀಪುರದಲ್ಲಿ ನಡೆದಿದೆ. ಬೆಂಗಳೂರು ಮೂಲದ ನಿಶಾಂತ್, ಪತ್ನಿ ಹಾಗೂ ಮಗುವನ್ನ ದುಷ್ಕರ್ಮಿಗಳು ಅಪಹರಣ ಮಾಡಿದ್ದಾರೆ.

ಬಂಡೀಪುರದ ಮಂಗಲ ಬಳಿ ಇರುವ ಕಂಟ್ರಿ ಕ್ಲಬ್ ರೆಸಾರ್ಟ್ ನಲ್ಲಿ ದಂಪತಿ ವಾಸ್ತವ್ಯ ಹೂಡಿದ್ದರು. ನಿನ್ನೆ ಬಂದು ವಾಸ್ತವ್ಯ ಹೂಡಿದ್ದ ನಿಶಾಂತ್ ದಂಪತಿ ಇಂದು ಚೆಕ್ ಔಟ್ ಆಗಬೇಕಿತ್ತು. ಆದರೆ ಕಿಡ್ನಾಪರ್ಸ್ ಗಳು ಕಂಟ್ರಿ ಕ್ಲಬ್ ರೆಸಾರ್ಟ್ ಸಮೀಪದಲ್ಲೇ ಪುಟ 2

## ಸರ್ಕಾರಕ್ಕೆ ಶಸ್ತ್ರಾಸ್ತ್ರ ಮರಳಿಸಿದ ಜನ



**ಇಂಫಾಲ(ಮಣಿಪುರ):** ಕಲಹಪೀಡಿತ ಮಣಿಪುರದಲ್ಲಿ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸುವಂತೆ ನೀಡಲಾದ ಸೂಚನೆಯ ಬೆನ್ನಲ್ಲೇ ಇದೀಗ ಐದು ಜಿಲ್ಲೆಗಳಲ್ಲಿ ಸಾರ್ವಜನಿಕರು ತಮ್ಮ ಬಳಿ ಇದ್ದ 33 ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಪುಟ 2

## ನೆಲ, ಜಲ, ಭಾಷೆಯ ವಿಷಯ ಬಂದಾಗ ಚಿತ್ರರಂಗ ದನಿಗೂಡಿಸಬೇಕು

**ಬೆಂಗಳೂರು:** ಕನ್ನಡ ಚಲಚಿತ್ರರಂಗದ ವಿಚಾರ ಚರ್ಚೆಯಾಗಲಿ ಎಂಬ ಕಾರಣಕ್ಕಾಗಿಯೇ ತಾವು ನಟ್ಟು, ಬೋಲ್ಟು ವಿಷಯ ಪ್ರಸ್ತಾಪಿಸಿದ್ದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಲನಚಿತ್ರರಂಗದವರಿಗೆ ತಾವು ಎಚ್ಚರಿಕೆ ನೀಡಿದ್ದಕ್ಕೆ ಸಂಬಂಧಪಟ್ಟಂತೆ ಟೀಕೆಗಳಾಗುತ್ತಿವೆ. ಟೀಕೆಗಳು, ಚರ್ಚೆಗಳು ನಡೆಯಬೇಕು, ನನ್ನ ಹೇಳಿಕೆಗೆ ಟೀಕಾತಕ ಪ್ರತಿಕ್ರಿಯೆಗಳು ಬರುತ್ತವೆ ಎಂಬುದು ನನಗೆ ಗೊತ್ತಿತ್ತು. ಅದಕ್ಕೆ ನನಗೆ ಯಾವ ಬೇಜಾರು ಇಲ್ಲ ಎಂದು ಹೇಳಿದ್ದಾರೆ.

ಚರ್ಚೆಗಳಾದರೆ ತಾನೆ ತಪ್ಪು ಯಾರದು ಎಂದು ಗೊತ್ತಾಗಲು ಸಾಧ್ಯ. ಸಿನಿಮಾ ಇಲ್ಲದೆ ಬದುಕುವ ಶಕ್ತಿ ನಮಗೆ ಇದೆ.



ಸಿನಿಮಾದವರಿಗೆ ಸರ್ಕಾರ ಮತ್ತು ಜನ ಬೇಕು ಎಂದು ಮಾರ್ಮಿಕವಾಗಿ ಹೇಳಿದರು.

ನಾನು ಚಿತ್ರರಂಗದವರಿಗೆ ಎಷ್ಟು ಸಹಾಯ ಮಾಡಿದ್ದೇನೆ ಎಂಬುದು ಗೊತ್ತಿದೆ. ಸಹಾಯ ಪಡೆದುಕೊಂಡವರಿಗೂ ಅದರ ಅರಿವಿದೆ. ನೆಲ, ಜಲ, ಭಾಷೆಯ ವಿಷಯ ಬಂದಾಗ ಚಿತ್ರರಂಗ ದನಿಗೂಡಿಸಬೇಕು. ಅಂತಾರಾಷ್ಟ್ರೀಯ ಪುಟ 2

# ರೈತರಿಂದ ಖರೀದಿಸುವ ಆಹಾರ ಧಾನ್ಯಗಳ ಗುಣಮಟ್ಟ ಕಾಪಾಡಿ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸುವ ಆಹಾರ ಧಾನ್ಯಗಳ ಗುಣಮಟ್ಟವನ್ನು ಕಾಪಾಡಬೇಕು ಲೋಪವೆಸಗಿದ್ದಲ್ಲಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಆಹಾರ ಸಚಿವ ಕೆಹೆಚ್. ಮುನಿಯಪ್ಪ ಎಚ್ಚರಿಕೆ ನೀಡಿದರು.

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆಹೆಚ್. ಮುನಿಯಪ್ಪ ಅವರು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಹಾಗೂ ಆಹಾರ ಇಲಾಖೆಯ ಉಪ ನಿರ್ದೇಶಕರು, ಜಿಲ್ಲೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಖರೀದಿ ಎಜೆಸ್ಸಿ ಮುಖ್ಯಸ್ಥರೊಂದಿಗೆ ವಿಡಿಯೋ ಸಂವಾದದ ಮೂಲಕ ಸಭೆ ನಡೆಸಿದರು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸುವ ರಾಗಿ ,ಜೋಳ, ಭತ್ತದ ಗುಣಮಟ್ಟವನ್ನು ಕಾಪಾಡಬೇಕು ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯೇ ಒಖಕಯ ಅಧ್ಯಕ್ಷರಿದ್ದು ಆಹಾರ ಧಾನ್ಯಗಳು ಗುಣಮಟ್ಟದಲ್ಲಿ ವ್ಯತ್ಯಾಸವಿದ್ದಲ್ಲಿ ಅಧಿಕಾರಿಗಳನ್ನು ಸ್ಥಳದಲ್ಲಿಯೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂಗಳನ್ನು ಹಾಗೂ ಜೋಳ ಪ್ರತಿ ಕ್ವಿಂಟಾಲ್ ಹೈಬ್ರೀಡ್ ಜೋಳ 3371 ಹಾಗೂ ಮಾಲದಂಡಿ ಜೋಳ 3421 ಭತ್ತಕ್ಕೆ ಸಾಮಾನ್ಯವಾಗಿ ಪ್ರತಿ ಕ್ವಿಂಟಾಲ್ 2300. ಗ್ರೇಡ್ ಎ 2320 ದರ ನಿಗದಿಯಾಗಿದ್ದು ಈ ದರದಲ್ಲಿ ರೈತರಿಂದ ಖರೀದಿಸಿ ಅವರಿಗೆ ಸರಿಯಾದ ಸಮಯಕ್ಕೆ ಹಣ ಸಂಧಾಯ ಮಾಡಬೇಕು ಎಂದರು.

ಜಿಲ್ಲಾಧಿಕಾರಿಗಳು ಖರೀದಿ ಕೇಂದ್ರಗಳ ಸ್ಥಳಗಳಲ್ಲಿ ರೈತರಿಗೆ ಕುಡಿಯುವ ನೀರು ಹಾಗೂ ಶಾಮಿಯಾನದ ವ್ಯವಸ್ಥೆಯನ್ನು ಕಲ್ಪಿಸಬೇಕು ಏಕೆಂದರೆ ಮಾರ್ಚ್ ತಿಂಗಳಲ್ಲಿ ಹೆಚ್ಚಿನ ಬಿಸಿಲಿರುವುದರಿಂದ ರೈತರಿಗೆ ಅನುಕೂಲಕರವಾದ ವಾತಾವರಣ ನಿರ್ಮಿಸಬೇಕು ಎಂದರು.

ಅನ್ನಭಾಗ್ಯ ಯೋಜನೆಯಡಿ ಈ ತಿಂಗಳಿಂದ ಪ್ರತಿ ಫಲಾನುಭವಿಗೆ 10 ಕೆಜಿ ಅಕ್ಕಿಯನ್ನು ನೀಡುವುದರೊಂದಿಗೆ ಫೆಬ್ರವರಿ ತಿಂಗಳ 5 ಕೆಜಿ ಅಕ್ಕಿಯನ್ನು ಸೇರಿಸಿ 15 ಕೆಜಿ ಅಕ್ಕಿ ವಿತರಿಸಲು ತೀರ್ಮಾನಿಸಿದ್ದು ಅರ್ಹ ಫಲಾನುಭವಿಗಳಿಗೆ ವಿತರಿಸಲು ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು.

ಜಿಲ್ಲಾಧಿಕಾರಿಗಳೇ ನೇರವಾಗಿ ಸ್ಥಳಕ್ಕೆ ಭೇಟಿ ಮಾಡಿ ಪರಿಶೀಲನೆ ಮಾಡಬೇಕು. ರಾಗಿಯನ್ನು ಖರೀದಿಸುವ ಕೇಂದ್ರಗಳಲ್ಲಿ ತೂಕದಲ್ಲಿ ವ್ಯತ್ಯಾಸಗಳು ಕಾಣದಂತೆ ನಿಗಾವಹಿಸಬೇಕು ಲೋಪವೆಸಗಿದ್ದಲ್ಲಿ ಅಧಿಕಾರಿಗಳನ್ನು ಸ್ಥಳದಲ್ಲಿಯೇ ಅಮಾನತ್ತು ಮಾಡಬೇಕು ಎಂದು ಜಿಲ್ಲಾಧಿಕಾರಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಸರ್ಕಾರದ ಕಾರ್ಯದರ್ಶಿ ಮನೋಜ್ ಜೈನ್,ಆಯುಕ್ತರಾದ ವಾಸಿ ರೆಡ್ಡಿ ವಿಜಯಜ್ಯೋತ್ಸ್ನಾ, ನಿಗಮ ನಿರ್ದೇಶಕ ಚಂದ್ರಕಾತ್,ಸಚಿವರ ಆಪ್ತ ಕಾರ್ಯದರ್ಶಿ ನಟರಾಜ್, ಕಾನೂನು ಮಾಪನ ಶಾಸ್ತ್ರ ಇಲಾಖೆ ನಿಯಂತ್ರಕರಾದ ಎಂ ಎಸ್ ಎನ್ ಬಾಬು. ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# 9 ಹೈಡ್ರೋಜನ್ ಇಂಧನ ಕೇಂದ್ರಗಳ ಸ್ಥಾಪನೆಗೆ ಅನುಮೋದನೆ

**ನವದೆಹಲಿ:** ಇಂಧನ ಕ್ಷೇತ್ರದಲ್ಲಿ ಆತ್ಮನಿರ್ಭರತೆ ಜತೆಗೆ ಜಾಗತಿಕ ನಾಯಕತ್ವದತ್ತ ದಾಪುಗಾಲಿಟ್ಟ ಭಾರತ ಇದೀಗ ದೇಶದ ಹತ್ತು ಮಹಾನ್ ನಗರಗಳಲ್ಲಿ ಹಸಿರು ಹೈಡ್ರೋಜನ್ (ಜಲಜನಕ) ಇಂಧನ ಆಧಾರಿತ ವಾಹನಗಳನ್ನು ಓಡಿಸಲು ಸಜ್ಜಾಗಿದೆ.

ಸಾರಿಗೆ ವಲಯವನ್ನು ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ಹೆಜ್ಜೆ ಹಾಕಿದ ಭಾರತ ವಿದ್ಯುತ್ ಚಾಲಿತ ವಾಹನಗಳಿಗೆ ಚಾಲನೆ ನೀಡಿದ ಬೆನ್ನಲ್ಲೇ ಈಗ ಜಲಜನಕ ಇಂಧನ ಚಾಲಿತ ಸಾರಿಗೆಗೆ ಹೆದ್ದಾರಿ ತೋರಿದೆ.

2023ರ ಪ್ರಥಮದಲ್ಲೇ "ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್" ಆರಂಭಿಸಿ ಇದಕ್ಕೆ ಮುನ್ನುಡಿ ಬರೆದಿದ್ದ ಭಾರತ ಎರಡೇ ವರ್ಷದಲ್ಲಿ ಹಸಿರು ಹೈಡ್ರೋಜನ್ ತುಂಬಿದ ವಾಹನ ಸಾರಿಗೆಗೆ ಚಾಲನೆ ನೀಡುವ ಅಭೂತಪೂರ್ವ ಸಾಧನೆಯತ್ತ ಹೆಜ್ಜೆ ಹಾಕಿದೆ.

ಜಲಜನಕದ 5 ಪೈಲಟ್ ಯೋಜನೆ: ದೇಶದಲ್ಲಿ ಮಾತ್ರವಲ್ಲ, ಜಾಗತಿಕವಾಗಿಯೇ ನವೀಕರಿಸಬಹುದಾದ ಇಂಧನಕ್ಕೆ ಒತ್ತು ಕೊಟ್ಟು ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಶನ್ ಸ್ಥಾಪಿಸಿದ್ದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಓಆಂ ಸರ್ಕಾರ, ಈಗ ಈ ಮಿಶನ್ ನ ಒಂದು ಭಾಗವಾಗಿ 208 ಕೋಟಿ ಆರ್ಥಿಕ ನೆರವು ಕಲ್ಪಿಸಿ ಜಲಜನಕ ಇಂಧನ ಚಾಲಿತ 5 ಹೊಸ ಪೈಲಟ್ ಯೋಜನೆಗಳಿಗೆ ಚಾಲನೆ ನೀಡಿದೆ.

ಸಾರಿಗೆ ವಲಯದಲ್ಲಿ ಪ್ರಮುಖವಾಗಿ ಬಸ್ ಮತ್ತು ಟ್ರಕ್‌ಗಳಲ್ಲಿ ಇಂಧನವಾಗಿ ಹಸಿರು ಹೈಡ್ರೋಜನ್ ಬಳಕೆ ಮತ್ತು ಹೈಡ್ರೋಜನ್ ಇಂಧನ ತುಂಬುವ ಕೇಂದ್ರಗಳ ಸ್ಥಾಪನೆಗೆ ಮುಂದಡಿ ಇಟ್ಟಿರುವ ಸರ್ಕಾರ, ಹಸಿರು ಹೈಡ್ರೋಜನ್ ವಲಯದಲ್ಲಿ ವಾಣಿಜ್ಯಿಕವಾಗಿ ಕಾರ್ಯ ಸಾಧುವಾಗುವಂತಹ ತಂತ್ರಜ್ಞಾನ ಅಳವಡಿಸಿ, ಅಗತ್ಯ ಮೂಲಸೌಕರ್ಯದೊಂದಿಗೆ ಮತ್ತಷ್ಟು ಅಭಿವೃದ್ಧಿಪಡಿಸಲು ಸಹ ಕಾರ್ಯ ಯೋಜನೆ ರೂಪಿಸಿದೆ.

ಮೊದಲು ದೇಶದ 10 ಮಾರ್ಗಗಳಲ್ಲಿ ಜಲಜನಕ ಇಂಧನ ಚಾಲಿತ ವಾಹನ: ದೇಶದ ಹತ್ತು ಮಹಾ ನಗರಗಳ ಮಧ್ಯೆ ಜಲಜನಕ ಇಂಧನ ಪೂರಿತ ವಾಹನಗಳನ್ನು ಚಲಾಯಿಸಲು ಸರ್ಕಾರ ಮುಂದಾಗಿದೆ. ಇನ್ನೆರಡು ವರ್ಷದೊಳಗೆ ದೇಶಾದ್ಯಂತ 10 ವಿಭಿನ್ನ ಮಾರ್ಗಗಳಲ್ಲಿ ಈ ವಾಹನ ಚಲಿಸಲಿವೆ. ಗ್ರೇಟರ್ ನೋಯ್ಡಾ – ದೆಹಲಿ – ಆಗ್ರಾ, ಭುವನೇಶ್ವರ – ಕೊನಾರ್ಕ್ – ಪುರಿ, ಅಹಮದಾಬಾದ್ – ವಡೋದರಾ – ಸೂರತ್, ಸಾಹಿಬಾಬಾದ್ – ಫರಿದಾಬಾದ್ – ದೆಹಲಿ, ಪುಣೆ – ಮುಂಬೈ, ಜಮ್ಶೆಡ್ಪುರ – ಕಳಿಂಗ ನಗರ, ತಿರುವನಂತಪುರಂ – ಕೊಚ್ಚಿ, ಕೊಚ್ಚಿ – ಎಡಪ್ಪಳ್ಳಿ, ಜಾಮ್ನಗರ – ಅಹಮದಾಬಾದ್ ಮತ್ತು ಓಊ–16 ವಿಶಾಖಪಟ್ಟಣ – ಬಯ್ಯವರಂ ಮಾರ್ಗಗಳನ್ನು ಆಯ್ಕೆ ಮಾಡಲಾಗಿದೆ.



ಆರಂಭದಲ್ಲಿ 37 ಹೈಡ್ರೋಜನ್ ವಾಹನ: ವಿವಿಧ ರಾಜ್ಯಗಳ ಈ ಮಹಾನ್ ನಗರಗಳಲ್ಲಿ ಮೊದಲ ಹಂತದಲ್ಲಿ ಒಟ್ಟು 37 ಹೈಡ್ರೋಜನ್ ಇಂಧನ ತುಂಬಿದ ಬಸ್ ಮತ್ತು ಟ್ರಕ್ ಗಳು ಸಂಚರಿಸಲಿವೆ. ಪ್ರಾಯೋಗಿಕವಾಗಿ 15 ಹೈಡ್ರೋಜನ್ ಇಂಧನ ಕೋಶ ಆಧಾರಿತ ಮತ್ತು 22 ಹೈಡ್ರೋಜನ್ ಆಂತರಿಕ ಎಂಜಿನ್ ಆಧಾರಿತ ವಾಹನಗಳು ಸೇರಿವೆ.

9 ಹೈಡ್ರೋಜನ್ ಇಂಧನ ಕೇಂದ್ರ ಸ್ಥಾಪನೆ: ಈ 37 ವಾಹನಗಳಿಗೆ ಹೈಡ್ರೋಜನ್ ಇಂಧನ ತುಂಬಲು 9 ಕಡೆ ಹಸಿರು ಹೈಡ್ರೋಜನ್ ಇಂಧನ ಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಸಚಿವ ಪ್ರಲ್ಹಾದ ಜೋಶಿ ಅವರ ಮಾರ್ಗದರ್ಶನದಂತೆ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಈ ಪಂಚ (5) ಪೈಲಟ್ ಯೋಜನೆಗಳನ್ನು ಅನುಮೋದಿಸಿದೆ.

ಎಂಟು ಪ್ರಮುಖ ಕಂಪನಿಗಳಿಗೆ ಹೊಣೆ: ದೇಶದ ಹತ್ತು ಮಾರ್ಗಗಳಲ್ಲಿ ಹಸಿರು ಹೈಡ್ರೋಜನ್ ಇಂಧನ ಚಲಾಯಿಸುವ 5 ಪೈಲಟ್ ಯೋಜನೆಗಳ ಹೊಣೆಯನ್ನು ಖಿಂಖಿಂ ಮೋಟಾರ್ಸ್ ಲಿಮಿಟೆಡ್, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಓಖಿಕಅ, ಂಓಇಖಖಿ, ಅಶೋಕ್ ಲೇಲ್ಯಾಂಡ್, ಊಕಅಐ, ಃಕಅಐ ಮತ್ತು ಖಔಅಐ ನಂತಹ ಪ್ರಮುಖ ಕಂಪನಿಗಳಿಗೆ ನೀಡಲಾಗಿದೆ.

ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಶನ್ ಅಡಿ ಸಾರಿಗೆ ವಲಯದಲ್ಲಿ ಪೈಲಟ್ ಯೋಜನೆಗಳ ಅನುಷ್ಠಾನಕ್ಕೆ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಈ ಹಿಂದೆಯೇ ಮಾರ್ಗಸೂಚಿ ಹೊರಡಿಸಿತ್ತು. ವಿವಿಧ ರೀತಿಯ ಹೈಡ್ರೋಜನ್ ಆಧಾರಿತ ವಾಹನಗಳು, ಮಾರ್ಗಗಳು ಮತ್ತು ಇಂಧನ ಕೇಂದ್ರಗಳಿಗೆ ಪ್ರಸ್ತಾವನೆ ಸಹ ಆಹ್ವಾನಿಸಿತ್ತು. ಈ ಕಂಪನಿಗಳ ಕ್ಷಿಪ್ರ ಕಾರ್ಯಾಚರಣೆಗೆ ಗಡುವು ನೀಡಿದ್ದು, ಮುಂದಿನ 18 ರಿಂದ 24 ತಿಂಗಳುಗಳಲ್ಲಿ "ಹಸಿರು ಹೈಡ್ರೋಜನ್ ಚಾಲಿತ ವಾಹನ"ಗಳ ಸಂಚಾರ ಆರಂಭಗೊಳ್ಳುವ ಸಾಧ್ಯತೆಯಿದೆ.

ರಾಷ್ಟ್ರೀಯ ಹೈಡ್ರೋಜನ್ ಮಿಶನ್ ಗೆ 19,744 ಕೋಟಿ ಅನುದಾನ: ದೇಶದಲ್ಲಿ 2023ರ ಜನವರಿ 4 ರಂದು ಸ್ಥಾಪಿಸಿದ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಗೆ 2029–30ರ ಹಣಕಾಸು ವರ್ಷದವರೆಗೆ 19,744 ಕೋಟಿ ಅನುದಾನ ಒದಗಿಸಿದೆ ಮೋದಿ ಸರ್ಕಾರ. ಇದು ಶುದ್ಧ ಇಂಧನದ ಮೂಲಕ ಆತ್ಮನಿರ್ಭರ್ ಆಗುವ ಭಾರತದ ಗುರಿಗೆ ಅನನ್ಯ ಕೊಡುಗೆ ನೀಡಲಿದೆ. ಜಾಗತಿಕ ಶುದ್ಧ ಇಂಧನ ಪರಿವರ್ತನೆಗೆ ಸ್ಫೂರ್ತಿಯಾಗಿ ಈ ಮಿಶನ್ ಕಾರ್ಯ ನಿರ್ವಹಿಸುತ್ತದೆ. ಭಾರತ ಜಾಗತಿಕವಾಗಿ ಹಸಿರು ಹೈಡ್ರೋಜನ್‌ನಲ್ಲಿ ತಂತ್ರಜ್ಞಾನ ಮತ್ತು ಮಾರುಕಟ್ಟೆ ನಾಯಕತ್ವ ವಹಿಸಿಕೊಳ್ಳಲು ಪೂರಕವಾಗಿದೆ.

ಸಾರಿಗೆ ವಲಯದಲ್ಲಿ ಪ್ರಮುಖವಾಗಿ

ಬಸ್ ಮತ್ತು ಟ್ರಕ್‌ಗಳಲ್ಲಿ ಹಂತ ಹಂತವಾಗಿ ಹಸಿರು ಹೈಡ್ರೋಜನ್ ಅನ್ನು ಇಂಧನವಾಗಿ ನಿಯೋಜಿಸಿ ಬೆಂಬಲಿಸುವುದು ರಾಷ್ಟ್ರೀಯ ಹೈಡ್ರೋಜನ್ ಮಿಶನ್ ನ ಉದ್ದೇಶಗಳಲ್ಲಿ ಒಂದಾಗಿದೆ. ಅದರಂತೆ ಈಗ ಚಾಲನೆ ನೀಡಲಾಗಿರುವ ಹೈಡ್ರೋಜನ್ ಆಧಾರಿತ ವಾಹನಗಳು ಮತ್ತು ಇಂಧನ ತುಂಬುವ ಕೇಂದ್ರಗಳ ಪೈಲಟ್ ಯೋಜನೆ ಪರಿಣಾಮಕಾರಿ ಆಗಿರಲಿದೆ ಮತ್ತು ತಾಂತ್ರಿಕ ಕಾರ್ಯಸಾಧ್ಯತೆ, ನೈಜ ಕಾರ್ಯಕ್ಷಮತೆಯನ್ನು ಮೌಲ್ಯೀಕರಿಸಲಿದೆ.

# ಕಾಡುಬೀಸನಹಳ್ಳಿ ಮೆಟ್ರೋ ನಿಲ್ದಾಣ: ಒಆರ್‌ಆರ್‌ನಲ್ಲಿ ಅಭಿವೃದ್ಧಿಪಡಿಸಲು ಆರ್‌ಇಐಟಿ 100 ಕೋಟಿ ರೂ.

ಬೆಂಗಳೂರು: ಹೊರ ವರ್ತುಲ ರಸ್ತೆಯ ಕಾಡುಬೀಸನಹಳ್ಳಿ ಮೆಟ್ರೋ ನಿಲ್ದಾಣಕ್ಕೆ 100 ಕೋಟಿ ರೂ.ಗಳ ಹೂಡಿಕೆ ಮಾಡಲು ಆರ್‌ಇಐಟಿ ಬದ್ಧವಾಗಿದೆ.



ಹೊರ ವರ್ತುಲ ರಸ್ತೆಯಲ್ಲಿ ಕಾಡುಬೀಸನಹಳ್ಳಿ ಮೆಟ್ರೋ ನಿಲ್ದಾಣ ನಿರ್ಮಾಣಕ್ಕೆ ಈ ಹೂಡಿಕೆಯು ಕೊಡುಗೆ ನೀಡಲಿದೆ, ಇದನ್ನು ಅದರ ವಾಣಿಜ್ಯ ಕಾರ್ಯಾಚರಣೆಯ ದಿನಾಂಕದಿಂದ 30 ವರ್ಷಗಳ ಅವಧಿಗೆ ಎಂಬೆಸಿ ಟೆಕ್ ವಿಲೇಜ್ ಕಾಡುಬೀಸನಹಳ್ಳಿ ಮೆಟ್ರೋ ನಿಲ್ದಾಣ ಎಂದು ಹೆಸರಿಸಲಾಗುವುದು ಎಂದು ಆರ್‌ಇಐಟಿ ತಿಳಿಸಿದೆ.

ಹೊರ ವರ್ತುಲ ರಸ್ತೆಯ ಕಾರಿಡಾರ್ ಉದ್ದಕ್ಕೂ ಈ ಹೊಸ ಮೆಟ್ರೋ ನಿಲ್ದಾಣ ಅಭಿವೃದ್ಧಿಪಡಿಸಲು ರಾಯಭಾರ ಕಚೇರಿ ಆರ್‌ಇಐಟಿ ಮತ್ತು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಒಪ್ಪಂದಕ್ಕೆ ಸಹಿ ಹಾಕಿವೆ.

ಬೆಂಗಳೂರು ಮೆಟ್ರೋದ ಹೊರ ವರ್ತುಲ ರಸ್ತೆ ಕಾರಿಡಾರ್ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ನಿಂದ ಕೆ.ಆರ್.ಪುರದವರೆಗೆ 17 ಕಿ.ಮೀ. 16 ನಿಲ್ದಾಣಗಳನ್ನು ಒಳಗೊಂಡಿರುವ ಈ ಕಾರಿಡಾರ್, ಹೆಗ್ಗುರುತು ಎಂಬೆಸಿ ಟೆಕ್ ವಿಲೇಜ್ ಬಿಸಿನೆಸ್ ಪಾರ್ಕ್ ಸೇರಿದಂತೆ ಬೆಂಗಳೂರಿನ ಪ್ರಮುಖ ವ್ಯಾಪಾರ ಸ್ಥಳಗಳಲ್ಲಿ ಸಾವಿರಾರು ಪ್ರಯಾಣಿಕರಿಗೆ ಸಂಪರ್ಕವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ರಾಯಭಾರ ಕಚೇರಿ ಆರ್‌ಇಐಟಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿತ್ವಿಕ್ ಭಟ್ಟಾಚಾರ್ಜಿ ಮಾತನಾಡಿ, "ಚಲನಶೀಲತೆ ಪರಿಹಾರಗಳಲ್ಲಿ ಕಾರ್ಯತಂತ್ರದ ಮತ್ತು ದೀರ್ಘಕಾಲೀನ ಹೂಡಿಕೆಗಳ ಮೂಲಕ ಪ್ರಮುಖ ನಗರ ಸವಾಲುಗಳನ್ನು ಪರಿಹರಿಸಲು ರಾಂಬುಭಾರ ಆರ್‌ಇಐಟಿ ಬದ್ಧವಾಗಿದೆ. ಈ ಹಿಂದೆ, ರಾಯಭಾರ ಮಾನ್ಯತಾ ಬಿಸಿನೆಸ್ ಪಾರ್ಕ್‌ನಲ್ಲಿ ಫ್ಲೈಓವರ್ ನಿರ್ಮಿಸಲು ನಾವು 180 ಕೋಟಿ ರೂ.ಗಳನ್ನು ಹೂಡಿಕೆ ಮಾಡಿದ್ದೇವೆ, ಇದು ಈ ಪ್ರದೇಶದ ಸಂಚಾರ ದಟ್ಟಣೆಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ. ಹೆಚ್ಚುವರಿಯಾಗಿ, ಸುರಕ್ಷಿತ ಸಂಚಾರಕ್ಕಾಗಿ ಪಾದಚಾರಿ ಪಾದಚಾರಿ ಸೇತುವೆಯಲ್ಲಿ ನಾವು ಸುಮಾರು 30 ಕೋಟಿ ರೂ.ಗಳ ಹೂಡಿಕೆ ಮಾಡಿದ್ದೇವೆ. ಮೆಟ್ರೋ ವಿಸ್ತರಣೆಗೆ ನಮ್ಮ ನಿರಂತರ ಬೆಂಬಲವು ನಗರದ ಮೂಲಸೌಕರ್ಯದಲ್ಲಿ ಅರ್ಥಪೂರ್ಣ ಬದಲಾವಣೆಯನ್ನು ತರಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ನಮ್ಮ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ ರಾವ್ ಮಾತನಾಡಿ, ಹೊರ ವರ್ತುಲ ರಸ್ತೆ ಕಾರಿಡಾರ್ ಬೆಂಗಳೂರಿನ ಪ್ರಮುಖ ಸಂಚಾರ ಮಾರ್ಗವಾಗಿದ್ದು, ಪ್ರಮುಖ ವಾಣಿಜ್ಯ ಕೇಂದ್ರಗಳು, ಐಟಿ ಪಾರ್ಕ್‌ಗಳು ಮತ್ತು ವಸತಿ ಪ್ರದೇಶಗಳನ್ನು ಸಂಪರ್ಕಿಸುತ್ತದೆ. ಇಂತಹ ಪಾಲುದಾರಿಕೆಗಳು ಮೂಲಸೌಕರ್ಯ ಬೆಳವಣಿಗೆಯನ್ನು ವೇಗಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಮತ್ತು ನಗರಕ್ಕೆ ಹೆಚ್ಚು ಪ್ರವೇಶಿಸಬಹುದಾದ ಮತ್ತು ಸುಸ್ಥಿರ ಮೆಟ್ರೋ ಜಾಲವನ್ನು ನಿರ್ಮಿಸಲು ಒಟ್ಟಾಗಿ ಕೆಲಸ ಮಾಡಲು ನಾವು ಎದುರು ನೋಡುತ್ತಿದ್ದೇವೆ ಎಂದರು.

# ಖಾಸಗಿ ಬಡಾವಣೆಗಳ ಅನುಮೋದನೆ ಇನ್ನು ಮುಂದೆ ಸರ್ಕಾರದ ಸಹಮತಿ ಅಗತ್ಯ: ಸಚಿವ ಬೈರತಿ ಸುರೇಶ

**ಬೆಂಗಳೂರು:** ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಮತ್ತು ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲಿ ಬರುವ ಖಾಸಗಿ ಬಡಾವಣೆಗಳ ಅನುಮೋದನೆಯನ್ನು ಇನ್ನು ಮುಂದೆ ಸರ್ಕಾರದ ಸಹಮತಿ ಪಡೆಯಬೇಕು ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಶ್ರೀ ಬಿ. ಎಸ್. ಸುರೇಶ (ಬೈರತಿ) ಅವರು ಸೂಚಿಸಿದ್ದಾರೆ.



ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು ಸಾಧಿಸಿರುವ ಪ್ರಗತಿ ಕುರಿತಂತೆ ವಿಕಾಸಸೌಧದಲ್ಲಿ ಇಂದು ಪರಿಶೀಲನಾ ಸಭೆ ನಡೆಸಿದ ಸಚಿವ ಬಿ. ಎಸ್. ಸುರೇಶ (ಬೈರತಿ) ಅವರು ಖಾಸಗಿಯವರು ಭೂಮಿಯನ್ನು ಹೊಂದಿ/ಖರೀದಿಸಿ ಬಡಾವಣೆಗಳನ್ನು ನಿರ್ಮಿಸಲು ಸಾಧ್ಯವಾಗುತ್ತಿರುವಾಗ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಅದು ಏಕೆ ಸಾಧ್ಯವಾಗುತ್ತಿಲ್ಲವೆಂದು ಅಧಿಕಾರಿಗಳನ್ನು ಅವರು ಪ್ರಶ್ನಿಸಿದರು.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ನು ರಚಿಸಿರುವುದು ಪ್ರಾಧಿಕಾರಗಳು ಬಡಾವಣೆಗಳನ್ನು ನಿರ್ಮಿಸಿ ರಾಜ್ಯದ ಜನ ಸಾಮಾನ್ಯರಿಗೆ ಕೈಗೆಟುಕುವ ಬೆಲೆಯಲ್ಲಿ ನಿವೇಶನಗಳು ಸಿಗುವಂತಾಗಲಿ ಎನ್ನುವ ಉದ್ದೇಶದಿಂದಲೇ ಹೊರತು ಖಾಸಗಿ ಬಡಾವಣೆಗಳ ನಿರ್ಮಾಣ ಮತ್ತು ನಕ್ಷೆ ಅನುಮೋದನೆ ನೀಡಲು ಅಲ್ಲ ಎಂದು ಸಚಿವರು ಖಾರವಾಗಿ ನುಡಿದರು

ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ಒಂದು ರೀತಿಯ ನಿಯಮಗಳು ಅನ್ವಯಿಸಿದರೆ ಸರ್ಕಾರದ ವತಿಯಿಂದ (ನಗರಾಭಿವೃದ್ಧಿ ಪ್ರಾಧಿಕಾರಗಳ ವತಿಯಿಂದ) ನಿರ್ಮಾಣಕ್ಕೆ ಒಂದು ರೀತಿಯ ನಿಯಮಗಳಿವೆ. ಇದು ತಾರತಮ್ಯದಿಂದ ಕೂಡಿದೆ ಹೀಗಾಗಿ ಎಲ್ಲದಕ್ಕು ಅನ್ವಯವಾಗುವಂತೆ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೆ ಮಾನ್ಯ ಸಚಿವರು ಸೂಚಿಸಿದರು.

ರೈತರ ಮನ ಒಲಿಸಿ ಅವರಿಂದ ಜಮೀನು ಪಡೆದು 50:50 ಅನುಪಾತದ ಅಡಿಯಲ್ಲಿ ಅಭಿವೃದ್ಧಿ ಪಡಿಸಿ ಸಾಮಾನ್ಯ ಜನರಿಗೆ ಲಭ್ಯವಾಗುವಂತೆ ಮಾಡುವುದು ಪ್ರಾಧಿಕಾರಗಳ ಕೆಲಸ ಅದನ್ನು ಬಿಟ್ಟು ಖಾಸಗಿ ಬಡಾವಣೆ ನಿರ್ಮಾಣ ಮತ್ತು ನಕ್ಷೆ ಅನುಮೋದನೆ ನೀಡುವುದಷ್ಟೆ ಕೆಲಸವಲ್ಲ ಎಂದು ಸಚಿವರು ಕಿಡಿಖಾರಿದರು.

## ಮೊದಲ ಪುಟದಿಂದ

## ನಟಿ ಬಂಧನ

ನಂತರ ಚಿನ್ನದೊಂದಿಗೆ ಆಕೆಯನ್ನು ವಶಕ್ಕೆ ಪಡೆದುಕೊಂಡು ನಿನ್ನೆ ರಾತ್ರಿಯಿಂದಲೇ ವಿಚಾರಣೆಗೊಳಪಡಿಸಿದ್ದಾರೆ. ನಟಿ ಆಗಾಗ್ಗೆ ಬ್ಯುಸಿನೆಸ್‌ಕಾರಣ ಹೇಳಿ ಎಮರೇಟ್ಸ್ ವಿಮಾನದಲ್ಲಿ ದುಬೈಗೆ ತೆರಳಿ ವಾಪಸ್ಸಾಗುತ್ತಿದ್ದಳು ಎಂಬುದು ತನಿಖೆಯ ವೇಳೆ ತಿಳಿದುಬಂದಿದೆ.ಈಕೆಯನ್ನು ಹೆಚ್‌ಬಿಆರ್ ಬಡಾವಣೆಯಲ್ಲಿರುವ ಡಿಆರ್‌ಐ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಲಾಗಿದ್ದು, ಸಂಜೆ ವೇಳೆಗೆ ಬೆಂಗಳೂರಿನ 82ನೇ ಸಿಸಿಹೆಚ್ ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದಾರೆ ಎಂದು ಹೇಳಲಾಗಿದೆ.ಈಕೆಯಿಂದ ವಶಪಡಿಸಿಕೊಳ್ಳಲಾಗಿರುವ ಚಿನ್ನದ ಮೌಲ್ಯ 12 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

## ಅಕ್ರಮ ಮದ್ಯ ಮಾರಾಟ

ಮಹಿಳಾ ಸಂಘಗಳು ಸಾರ್ವಜನಿಕರಿಂದ ದೂರು ಸ್ವೀಕೃತವಾದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಸ್ಥಳಗಳ ಮೇಲೆ ದಾಳಿ ನಡೆಸಿ ಅಕ್ರಮ ಕಂಡುಬಂದಲ್ಲಿ ಅಬಕಾರಿ ನಿಯಮಗಳ ಪ್ರಕಾರ ಪ್ರಕರಣ ದಾಖಲಿಸಲಾಗುತ್ತಿದೆ ಎಂದು ಹೇಳಿದರು.

ಉತ್ತರ ನೀಡಿದ ಸಚಿವರು, ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ವ್ಯಕ್ತಿಗಳು ಸ್ವ ಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವ ಪ್ರಕರಣಗಳು ಗಮನಕ್ಕೆ ಬಂದಿವೆ. ನಿಯಂತ್ರಣ ಮಾಡುವ ಕೆಲಸವನ್ನು ಇಲಾಖೆಯಿಂದ ಮಾಡುತ್ತಿದ್ದೇವೆ. ಕಾನೂನು ಉಲ್ಲಂಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. 2024–25ನೇ ಅಬಕಾರಿ ಸಾಲಿನಲ್ಲಿ ಜನವರಿ ಅಂತ್ಯದವರೆಗೂ 17,390 ಮೊಕದ್ದಮೆಗಳನ್ನು ದಾಖಲಿಸಿ 18,253 ಆರೋಪಿತರನ್ನು ದಸ್ತಗಿರಿಗೆ ಒಳಪಡಿಸಲಾಗಿದೆ ಎಂದರು.

ಮಾಸಿಕವಾಗಿ ಎಲ್ಲಾ ಮದ್ಯ ಮಾರಾಟ ಸನ್ನದುದ್ದಗಳನ್ನು ನಿಯಮಿತವಾಗಿ ಪರಿಶೀಲಿಸಿ ಷರತ್ತು ಉಲ್ಲಂಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆ ನಡೆಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಮಾರಾಟ ತಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮದ್ಯವ್ಯಸನ ಮತ್ತು ಮಾರಾಟದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಈ ಉತ್ತರದಿಂದ ತೃಪ್ತರಾಗದ ಪ್ರತಿಪಕ್ಷಗಳ ಶಾಸಕರು, ಅಕ್ರಮ ಮದ್ಯ ಮಾರಾಟ ತಡೆಯಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು ಮಾತನಾಡಿ, ಪ್ರತಿ ಮದ್ಯ ಮಾರಾಟದ ಅಂಗಡಿಗೆ ಗುರಿ ನಿಗದಿಪಡಿಸಿರುವುದರಿಂದ ಕಿರಾಣಿ ಅಂಗಡಿಗಳಲ್ಲೂ ಮದ್ಯ ಮಾರಾಟ ಮಾಡುವಂತಾಗಿದೆ ಎಂದರು. ಬಿಜೆಪಿಯ ಹಿರಿಯ ಶಾಸಕ ಅರಗ ಜ್ಞಾನೇಂದ್ರ ಮಾತನಾಡಿ, ಕಿರಾಣಿ ಅಂಗಡಿಗೆ ಮದ್ಯ ಸರಬರಾಜಾಗುತ್ತಿವೆ. ಇದನ್ನು ತಡೆಯಬೇಕು. ಎಸ್‌ಸಿ/ಎಸ್‌ಟಿ ಕಾಲೋನಿಗಳಲ್ಲಿ ಹೆಚ್ಚು ಮದ್ಯವ್ಯಸನಿಗಳಾಗುತ್ತಿದ್ದಾರೆ. ಇದನ್ನು ತಡೆಯಲು ಕಾನೂನು ರೀತಿ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕು ಎಂದರು.

ಇದಕ್ಕೆ ಆಕ್ಷೇಪವೆತ್ತಿದ ಆಡಳಿತ ಪಕ್ಷದ ಶಾಸಕ ನಾರಾಯಣಸ್ವಾಮಿ, ಎಸ್‌ಸಿ/ಎಸ್‌ಟಿಯವರು ಮಾತ್ರ ಕುಡಿಯುತ್ತಾರಾ?, ನೀವು ಕುಡಿಯುವುದಿಲ್ಲವೇ? ಎಂದು ಛೇಡಿಸಿದರು. ಬಿಜೆಪಿ ಶಾಸಕ ಸುನೀಲ್‌ಕುಮಾರ್ ಮಾತನಾಡಿ, ಸರ್ಕಾರ ಗುರಿ ನಿಗದಿಪಡಿಸಿರುವುದರಿಂದ ಅಕ್ರಮ ಮಾರಾಟಕ್ಕೆ ದಾರಿ ಮಾಡಿಕೊಟ್ಟಂತಾಗಿದೆ ಎಂದು ಆರೋಪಿಸಿದರು. ಬಿಜೆಪಿಯ ಮತ್ತೊಬ್ಬ ಶಾಸಕ ಸಿದ್ದು ಸವದಿ ಮಾತನಾಡಿ, ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವವರ ಮಾಹಿತಿ ಅಬಕಾರಿ ಇನ್ಸ್‌ಪೆಕ್ಟರ್‌ಗಳಿಗೆ ಇರುತ್ತವೆ. ಇಂತಹ ಕಾರ್ಯಕ್ಕೆ ಉತ್ತೇಜನ ನೀಡುವ ಅಧಿಕಾರಿಯನ್ನು ಅಮಾನತು ಮಾಡಿ ಎಂದು ಆಗ್ರಹಿಸಿದರು. ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್‌ರವರು, ಎಲ್ಲೆಲ್ಲಿ ಮದ್ಯ ಅಕ್ರಮವಾಗಿ ಮಾರಾಟವಾಗುತ್ತದೆ ಎಂಬ ಮಾಹಿತಿ ಶಾಸಕರಿಗೆ ಇರುತ್ತದೆ. ಅದರ ಪಟ್ಟಿ ಕೊಟ್ಟು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿ, ಒಂದು ವೇಳೆ ಕ್ರಮ ಕೈಗೊಳ್ಳದಿದ್ದರೆ ಅಧಿಕಾರಿಯ ಮೇಲೆ ಕ್ರಮ ಜರುಗಿಸಿ ಎಂದು ಸಲಹೆ ಮಾಡಿದರು. ಹಿಂದೆ ಎಷ್ಟು ಗುರಿ ನಿಗದಿ ಮಾಡಲಾಗಿತ್ತು?, ಈಗ ಎಷ್ಟು ಗುರಿ ಮಾಡಿದ್ದಾರೆ ಎಂಬ ಮಾಹಿತಿ ಒದಗಿಸಲು ಸಚಿವರಿಗೆ ಸೂಚಿಸಿದರು.ವಿರೋಧಪಕ್ಷದ ಶಾಸಕರು ಈ ಬಗ್ಗೆ ಹೆಚ್ಚು ಚರ್ಚೆಗೆ ಒತ್ತಾಯಿಸಿದಾಗ ಮಧ್ಯಪ್ರವೇಶಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯಪಾಲರ ಭಾಷಣ ಸಂದರ್ಭದಲ್ಲಿ ಹೆಚ್ಚು ಪ್ರಸ್ತಾಪ ಮಾಡಬಹುದು. ಅರಗ ಜ್ಞಾನೇಂದ್ರ ಗೃಹಸಚಿವರಾಗಿದ್ದರು. ಅವರ ಕಾಲದಲ್ಲಿ ಎಷ್ಟು ಅಕ್ರಮ ಮದ್ಯ ಮಾರಾಟ ಮಾಡುವ ಅಂಗಡಿಗಳನ್ನು ಮುಚ್ಚಿಸಿದ್ದಾರೆ ಹೇಳಲಿ?, ಸೂಕ್ತ ಸಲಹೆ ನೀಡಲಿ ಎಂದು ತಿರುಗೇಟು ನೀಡಿದರು.

## ರಾಜೀನಾಮೆ :ಮುಂಡೆ

ಎನ್ನಲಾಗಿದೆ. ಧನಂಜಯ್ ಮುಂಡೆ ಅವರ ಆಪ್ತ ಸಹಚರ ವಾಲ್ಮೀಕ್ ಕರಡ್ ಮತ್ತು ಅವರ ಆರು ಮಂದಿ ಸಹಾಯಕರನ್ನು ಈ ವರ್ಷದ ಜನವರಿಯಲ್ಲಿ ಮಹಾರಾಷ್ಟ್ರ ಪೊಲೀಸರು ಒಅಔಅಂ (ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ, 1999) ಅಡಿಯಲ್ಲಿ ಬಂಧಿಸಿದ್ದರು.

## ಶ್ರದ್ಧಾಂಜಲಿ

ಅವರು,ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿ,ದ್ದರು. ಕಲ್ಯಾಣ ಕರ್ನಾಟಕದ ಮತ್ತು ನಾಡಿನ ಅಭಿವೃದ್ಧಿಗಾಗಿ ಚಿಂತಿಸುತ್ತಿದ್ದರು. ಅರ್ಷದ್ ಅಲಿ ಅವರಿಗೆ ಪತ್ನಿ, ಪುತ್ರ ಹಾಗೂ ಮೂವರು ಪುತ್ರಿಯರು ಮತ್ತು ಅಪಾರ ಅಭಿಮಾನಿಗಳಿದ್ದಾರೆ. ಅವರೆಲ್ಲರಿಗೂ ಈ ಅಗಲಿಕೆಯ ನೋವು ಸಹಿಸಿಕೊಳ್ಳುವ ಶಕ್ತಿಯನ್ನು ಭಗವಂತ ನೀಡಲಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುವುದಾಗಿ ಈಶ್ವರ ಖಂಡ್ರೆ ಸಂತಾಪ ಸೂಚಿಸಿದರು.

## ಕರಾವಳಿಗೆ ಭೇಟಿ

ಅಲ್ಲದೆ ಸಮುದ್ರದ ಮೇಲೆ ವಿಮಾನಗಳು ಇಳಿಸುವ ಬಗ್ಗೆ ಚಿಂತನೆ ನಡೆದಿದ್ದು, ರಷ್ಯಾದವರು ಆಸಕ್ತಿ ತೋರಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ಕರಾವಳಿಯಲ್ಲಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣ, ಬಂದರುಗಳಿದ್ದು, ಆರೋಗ್ಯ, ಶಿಕ್ಷಣ, ಧಾರ್ಮಿಕ ಪ್ರವಾಸೋದ್ಯಮಕ್ಕೆ ಅವಕಾಶವಿದೆ. ಆದರೆ ಸೌಹಾರ್ದತೆಗೆ ಒತ್ತು ಕೊಡುವ ಕೆಲಸವನ್ನು ಶಾಸಕರು, ನಾವು, ನೀವೆಲ್ಲಾ ಮಾಡಬೇಕು. ಜನರನ್ನು ಪ್ರೀತಿಯಿಂದ ಬರುವಂತೆ ಮಾಡಬೇಕು. ಭಯ ಪಡಿಸುವಂತಾಗಬಾರದು ಎಂದು ಸಲಹೆ ಮಾಡಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಕರಾವಳಿಯಲ್ಲಿ 7 ಗಂಟೆ ನಂತರ ಚಟುವಟಿಕೆಗಳು ಸ್ಥಗಿತವಾಗುತ್ತವೆ. ಧಾರ್ಮಿಕ ಕಾರ್ಯಕ್ರಮಗಳು ಮಾತ್ರ ನಡೆಯುತ್ತವೆ. 2 ವರ್ಷದಿಂದ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿದೆ. ಅತೀ ಹೆಚ್ಚು ಇಂಜಿನಿಯರ್ ಮತ್ತು ಮೆಡಿಕಲ್ ಕಾಲೇಜುಗಳಿವೆ. ಶಿಕ್ಷಣ ಪಡೆದವರು ಮುಂಬೈ, ಬೆಂಗಳೂರು ಕಡೆ ಹೋಗುತ್ತಿದ್ದಾರೆ. ಇದನ್ನು ಸರಿಪಡಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಕೊಡಿ. ಕರಾವಳಿ ಭಾಗದ ಶಾಸಕರ ಜೊತೆ ಪ್ರತ್ಯೇಕ ಸಭೆ ನಡೆಸುವುದಾಗಿ ಭರವಸೆ ನೀಡಿದರು.

## ದಂಪತಿ–ಮಗು ಕಿಡ್ನಾಪ್

ದೊಣ್ಣೆ, ಮಾರಕಾಸ್ತ್ರಗಳನ್ನು ಹಿಡಿದು ದಂಪತಿಯನ್ನ ಅಪಹರಿಸಿದ್ದಾರೆ.

ನಿಶಾಂತ್ ಬಿಬಿಎಂಪಿ ನೌಕರನಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಅಪಹರಣಕಾರರು ನಿಶಾಂತ್ ಬಂದಿದ್ದ ಕಾರನ್ನು ಕದ್ದೊಯ್ದಿದ್ದಾರೆ ಎನ್ನಲಾಗಿದೆ. ಸ್ಥಳಕ್ಕೆ ಎಸ್ಪಿ ಡಾ.ಬಿ.ಟಿ.ಕವಿತಾ ಸೇರಿ ಪೊಲೀಸ್ ಅಧಿಕಾರಿಗಳು ದೌಡಾಯಿಸಿದ್ದು, ಶ್ವಾನದಳ, ಬೆರಳಚ್ಚು ತಂಡದಿಂದ ತನಿಖೆ ಮುಂದುವರೆದಿದೆ.

## ಗೃಹಲಕ್ಷ್ಮಿ ಹಣ

ಫೆಬ್ರವರಿ ಸೇರಿದಂತೆ 4 ತಿಂಗಳ ಹಣ ಪಾವತಿಯನ್ನ ಸರ್ಕಾರ ಬಾಕಿ ಉಳಿಸಿಕೊಂಡಿದ್ದು, ಪ್ರತಿಪಕ್ಷಗಳ ಟೀಕೆ ,ಮಹಿಳೆಯರ ಆಕ್ರೋಶಕ್ಕೆ ಮಣಿದಿರುವ ಸರ್ಕಾರ ಇದೀಗ ಕೊನೆಗೂ ಹಂತ ಹಂತವಾಗಿ ಹಣ ಬಿಡುಗಡೆಗೆ ಮುಂದಾಗಿದೆ.

ಈಗ ನವೆಂಬರ್, ಡಿಸೆಂಬರ್ ತಿಂಗಳ ಗೃಹಲಕ್ಷ್ಮಿ ಯೋಜನೆ ಹಣ ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಿದ್ದು, 2 ತಿಂಗಳೂ ಸೇರಿ 1.26 ಕೋಟಿ ಮಹಿಳೆಯರಿಗೆ ಸುಮಾರು 5000 ಕೋಟಿ ಪಾವತಿ ಮಾಡುತ್ತಿದೆ. ಇನ್ನು ಜನವರಿ, ಫೆಬ್ರವರಿ ತಿಂಗಳ ಬಾಕಿಯನ್ನು ಮಾರ್ಚ್, ಏಪ್ರಿಲ್ ತಿಂಗಳಲ್ಲಿ ನೀಡುವುದಾಗಿ ಸರ್ಕಾರ ಭರವಸೆ ನೀಡಿದೆ.

## ಬಿಇಓ ಪೊಲೀಸರ ವಶಕ್ಕೆ

ಸಂಬಂಧಿಸಿದಂತೆ ಬಿಇಓ ಕಾಂತರಾಜ್, ಸಿಆರ್‌ಪಿ ದೀಪಾ, ಇಅಔ ಜಯರಾಂ ಅವರನ್ನು ಅಮಾನತು ಮಾಡಿ ಡಿಡಿಪಿಐ ಜವರೇಗೌಡ ಆದೇಶ ಹೊರಡಿಸಿದ್ದಾರೆ.

ಇನ್ನು ಹೆಚ್.ಡಿ.ಕೋಟೆ ಠಾಣಾ ಪೊಲೀಸರು ಬಿಇಓ ಕಾಂತರಾಜು ಅವರನ್ನ ವಶಕ್ಕೆ ಪಡೆದು ಕರೆದೊಯ್ದು ವಿಚಾರಣೆಗೊಳಪಡಿಸಿದ್ದಾರೆ.

ಹೆಚ್.ಡಿ ಕೋಟೆಯ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಗಿರೀಶ್ ಎಂಬಾತ ಜಂತುಹುಳ ಮಾತ್ರೆ ಅಂತ ಮತ್ತು ಬರುವ ಮಾತ್ರೆ ಕೊಟ್ಟು ವಿದ್ಯಾರ್ಥಿನಿಯರ ಮೇಲೆ ಅತ್ಯಾಚಾರವೆಸಗಿರುವ ಆರೋಪ ಕೇಳಿ ಬಂದಿದೆ.

ಮುಖ್ಯ ಶಿಕ್ಷಕ ಗಿರೀಶ್ ಹಲವು ದಿನಗಳಿಂದ ಇದೇ ದುರ್ವರ್ತನೆ ತೋರಿಸುತ್ತಿದ್ದು ಸಾಕಷ್ಟು ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದನು ಎನ್ನಲಾಗಿದೆ. ಈ ಸಂಬಂಧ ಅದೇ ಶಾಲೆಯ ಶಿಕ್ಷಕರ ಬಳಿ ವಿದ್ಯಾರ್ಥಿನಿಯರು ದೂರು ಹೇಳಿದ್ದು ಪೋಷಕರಿಗೂ ಮಾಹಿತಿ ನೀಡಿದ್ದರು. ಹೆಚ್.ಡಿ ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಕರಣದ ಬಳಿಕ ಗಿರೀಶ್ ನಾಪತ್ತೆಯಾಗಿದ್ದಾನೆ.

## ವಿದ್ಯಾರ್ಥಿಗಳು ಗೈರು

ವೆಬ್ ಸ್ಟ್ರೀಮಿಂ ಹಾಗೂ ಇತರ ಕಟ್ಟುನಿಟ್ಟಿನ ಕ್ರಮಗಳು ಅಕ್ರಮವನ್ನು ತಡೆಗಟ್ಟುವಲ್ಲಿ ನೆರವಾಗಿವೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.ಮೂರು ಪರೀಕ್ಷೆಗಳ ಆಯ್ಕೆ ಇರುವುದರಿಂದ ಗೈರುಹಾಜರಾದವರ ಸಂಖ್ಯೆ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಪರೀಕ್ಷಾ ತಯಾರಿಯ ಬಗ್ಗೆ ವಿಶ್ವಾಸ ಹೊಂದಿಲ್ಲದಿದ್ದರೆ ಇನ್ನೂ ಎರಡು ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿರುವುದರಿಂದ, ಅವರು ಪರೀಕ್ಷೆಗಳಿಗೆ ಗೈರಾಗುತ್ತಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿರುವುದಾಗಿ 'ಡೆಕ್ಕನ್ ಹೆರಾಲ್ಡ್' ವರದಿ ಮಾಡಿದೆ.

ಯಾವ ಜಿಲ್ಲೆಯಲ್ಲಿ ಎಷ್ಟು ವಿದ್ಯಾರ್ಥಿಗಳು ಗೈರು?

ಬೆಂಗಳೂರು ದಕ್ಷಿಣದಿಂದ ಅತಿ ಹೆಚ್ಚು ವಿದ್ಯಾರ್ಥಿಗಳು (1,510) ಗೈರುಹಾಜರಾಗಿದ್ದು, ರಾಯಚೂರು ಜಿಲ್ಲೆಯಲ್ಲಿ 1,058 ಮತ್ತು ವಿಜಯಪುರ 1,010 ಮಂದಿ ಗೈರಾಗಿದ್ದರು. ಬೆಂಗಳೂರು ಗ್ರಾಮಾಂತರದಲ್ಲಿ 79, ಚಾಮರಾಜನಗರದಲ್ಲಿ 80 ಮತ್ತು ಹಾಸನದಲ್ಲಿ119 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರುಹಾಜರಾಗಿದ್ದರು.

## ದನಿಗೂಡಿಸಬೇಕು

ಚಲನಚಿತ್ರೋತ್ಸವವನ್ನು ನಮಗಾಗಿ ಮಾಡಿಕೊಳ್ಳಲಿಲ್ಲ. ಚಿತ್ರರಂಗದ ಬೆಳವಣಿಗೆಗಾಗಿ ಮಾಡಲಾಯಿತು. ಅವರ ಕಾರ್ಯಕ್ರಮವನ್ನು ಅವರೇ ಪ್ರಚಾರ ಮಾಡಿಕೊಳ್ಳದೆ ದಿನ ಬೆಳಿಗ್ಗೆ, ಸಂಜೆ ನಾವು ಪ್ರಚಾರ ಮಾಡಬೇಕೇ? ಎಂದು ಪ್ರಶ್ನಿಸಿದರು.

ಆಹ್ವಾನ ಪತ್ರಿಕೆ ತಲುಪಿಲ್ಲ ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಚಿತ್ರರಂಗದ ಕಾರ್ಯಕ್ರಮ ಎಲ್ಲರೂ ಒಟ್ಟಾಗಿ ಮಾಡಬೇಕು. ಚರ್ಚೆಗಳಾಗಲಿ, ಯಾರದು ತಪ್ಪು, ಸರಿ ಎಂದು ವಿಮರ್ಶೆಯಾಗಿ ತಿದ್ದುಪಡಿಯಾಗಲಿ ಎಂದರು. ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಬಂದು ತಮನ್ನು ಭೇಟಿ ಮಾಡಿದ್ದರು. ತಮ ಉಸ್ತುವಾರಿಯಲ್ಲಿರುವ ಬೆಂಗಳೂರು ನಗರಾಭಿವೃದ್ಧಿ ಮತ್ತು ಜಲಸಂಪನೂಲ ಇಲಾಖೆಗಳಲ್ಲೇ 1.20 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಹಿಂದಿನ ಬಿಜೆಪಿ ಸರ್ಕಾರ ಅನುಮೋದನೆ ನೀಡಿದೆ. ನಮಗೆ ವಾರ್ಷಿಕ ಬಿಲ್ ಪಾವತಿಗೆ ಅವಕಾಶ ಇರುವುದು 6 ಸಾವಿರ ಕೋಟಿ ರೂ. ಮಾತ್ರ. ಅವರು ಕೇಂದ್ರ ಸರ್ಕಾರದಿಂದ ಜಲಸಂಪನೂಲ ಇಲಾಖೆ ಭದ್ರಮೇಲ್ದಂಡೆ ಯೋಜನೆಗೆ 2,300 ಕೋಟಿ ರೂ. ಬರಬೇಕು. ಹಣ ಬಂದ ತಕ್ಷಣ ಸಣ್ಣ ಸಣ್ಣ ಬಿಲ್‌ಗಳನ್ನು ಜೇಷ್ಠತೆ ಮತ್ತು ಆದ್ಯತೆ ಮೇರೆಗೆ ಬಿಡುಗಡೆ ಮಾಡಲಾಗುವುದು ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಮ ಪಕ್ಷದ ವರೀಷ್ಠರು. ಅವರನ್ನು ಭೇಟಿ ಮಾಡದೆ ಬಿಜೆಪಿಯವರನ್ನು ಭೇಟಿ ಮಾಡಲು ಸಾಧ್ಯವೇ? ನಮ ರಾಜ್ಯಕ್ಕೆ ಬಂದಾಗ ಅವರಿಗೆ ಗೌರವ ಕೊಡುವುದು ನಮ ಕರ್ತವ್ಯ. ಹೊಸ ಕಚೇರಿಗಳ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಅವರ ಜೊತೆ ಚರ್ಚೆ ಮಾಡಿದ್ದೇನೆ ಎಂದು ಹೇಳಿದರು. ತೆರಿಗೆ ಪಾವತಿಸದ ಕಂಪನಿಗಳಿಗೆ ನೋಟೀಸ್ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸವಾಲು ಬೃಹತ್ ಪ್ರಮಾಣದಲ್ಲಿದೆ. ಹೀಗಾಗಿ ತೆರಿಗೆ ವಸೂಲಿ ಮಾಡುವುದು ಅಧಿಕಾರಿಗಳ ಕರ್ತವ್ಯ ಎಂದರು.

## ಮರಳಿಸಿದ ಜನ

ಚುರಾಚಂದ್‌ಪುರ, ತೌಬಾಲ್, ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ ಮತ್ತು ಬಿಷ್ಣುಪುರ ಜಿಲ್ಲೆಗಳಲ್ಲಿ ಶಸ್ತ್ರಾಸ್ತ್ರಗಳನ್ನು ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಣಿಪುರ ಹಿಂಸಾಚಾರ ಭುಗಿಲೆದ್ದ ಬಳಿಕ ಪೊಲೀಸ್ ಠಾಣೆಗಳಿಂದ ಲೂಟಿ ಮಾಡಿದ್ದ ಅಕ್ರಮ ಶಸ್ತ್ರಾಸ್ತ್ರಗಳ ಶರಣಾಗತಿ ಗಡುವನ್ನು ಇತ್ತೀಚೆಗೆ ಮಾರ್ಚ್ 6ರವರೆಗೆ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ವಿಸ್ತರಿಸಿದ್ದರು. ಇದಕ್ಕೂ ಮುನ್ನ ಫೆಬ್ರವರಿ 20ರಂದು ಭಲ್ಲಾ ಅವರು ಲೂಟಿ ಮಾಡಿದ ಮತ್ತು ಅಕ್ರಮವಾಗಿ ಹೊಂದಿರುವ ಶಸ್ತ್ರಾಸ್ತ್ರಗಳನ್ನು ಏಳು ದಿನಗಳೊಳಗೆ ಸ್ವಯಂಪ್ರೇರಿತವಾಗಿ ಮರಳಿಸುವಂತೆ ತಿಳಿಸಿದ್ದು, ಯಾವುದೇ ಕ್ರಮಕ್ಕೆ ಮುಂದಾಗುವುದಿಲ್ಲ ಎಂದು ಭರವಸೆ ನೀಡಿದ್ದರು. ಮುಖ್ಯ ಕಾರ್ಯದರ್ಶಿ ಪಿ.ಕೆ.ಸಿಂಗ್ ಕೂಡ ಸಾರ್ವಜನಿಕರು ಸ್ವಯಂಪ್ರೇರಣೆಯಿಂದ ಬಂದೂಕು, ಶಸ್ತ್ರಾಸ್ತ್ರಗಳನ್ನು ಮರಳಿಸಲು ಏಳು ದಿನದ ಗಡುವು ಸಾಕು ಎಂದಿದ್ದರು.

## ಬಂದ್ ಅಗತ್ಯವಿಲ್ಲ

ಒಂದೆರೆಡು ದಿನ ಪ್ರತಿಭಟನೆಗಳಾಗಿದ್ದವು. ಯಾವುದೇ ಹಾನಿಯಾಗಿಲ್ಲ. ಮಹಾರಾಷ್ಟ್ರದಲ್ಲೂ ನಮ್ಮ ಚಾಲಕರಿಗೆ ಹಾಗೂ ನಿರ್ವಾಹಕರಿಗೆ ಮಸಿ ಬಳಿದಿದ್ದರು. ಅದಕ್ಕೂ ಪ್ರತಿಭಟನೆಗಳು ನಡೆದಿವೆ ಎಂದು ಹೇಳಿದರು.

ನೆಲ, ಜಲ, ಭಾಷೆ ವಿಚಾರದಲ್ಲಿ ಹೋರಾಟಗಳಿಗೆ ನಮ್ಮ ಬೆಂಬಲವಿದೆ. ಆದರೆ ಈ ಸಂದರ್ಭದಲ್ಲಿ ಬಂದ್ ಅಗತ್ಯವಿಲ್ಲ ಎಂದರು.

# ಲೋಕ್ ಅದಾಲತ್ ಸದುಪಯೋಗಕ್ಕಾಗಿ ನ್ಯಾ.ನೇರಳೆ ವೀರಭದ್ರಯ್ಯ ಭವಾನಿ ಮನವಿ

**ಚಿಕ್ಕಬಳ್ಳಾಪುರ:** ಜಿಲ್ಲೆಯ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಬಾಕಿ ಇದ್ದು ರಾಜಿಯಾಗಬಲ್ಲ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಕಕ್ಷಿದಾರರ ಸಮ್ಮುಖದಲ್ಲಿ ಮಾ.08 ರಂದು 2025ರ ಮೊದಲ ಲೋಕ ಅದಾಲತ್ನಲ್ಲಿ ಇತ್ಯರ್ಥ ಪಡಿಸಲಾಗುತ್ತಿದ್ದು, ಸಾರ್ವಜನಿಕರು ಈ ಅದಾಲತ್ನ ಪ್ರಯೋಜನ ಪಡೆದುಕೊಳ್ಳಬೇಕೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನೇರಳೆ ವೀರಭದ್ರಯ್ಯ ಭವಾನಿ ಅವರು ಮನವಿ ಮಾಡಿದರು.

ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಆಯೋಜಿಸಿದ್ದ ರಾಷ್ಟ್ರೀಯ ಲೋಕ ಅದಾಲತ್ ಕುರಿತ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ನಿರಂತರವಾಗಿ ರಾಜಿ ಪಂಚಾಯಿತಿ ಮೂಲಕ ವ್ಯಾಜ್ಯ ಪೂರ್ವ ಮತ್ತು ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜಿಯಾಗಬಲ್ಲ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಾ ಬರಲಾಗುತ್ತಿದೆ, ಈ ಬಾರಿ ಅದಾಲತ್ನಲ್ಲಿ ಜಿಲ್ಲಾ ನ್ಯಾಯಾಲಯವೂ ಸೇರಿದಂತೆ ಜಿಲ್ಲೆಯ ತಾಲ್ಲೂಕು ಹಂತದ ನ್ಯಾಯಾಲಯಗಳಲ್ಲಿ ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ಜಿಲ್ಲಾ ಗ್ರಾಹಕರ ಪರಿಹಾರ ಆಯೋಗದಲ್ಲಿನ ಪ್ರಕರಣಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಪ್ರಕರಣಗಳು, ವಿಚ್ಛೇಧನವನ್ನು ಹೊರತುಪಡಿಸಿ ವೈವಾಹಿಕ ಕುಟುಂಬ ನ್ಯಾಯಾಲಯದ ಪ್ರಕರಣಗಳನ್ನು ಕಕ್ಷಿದಾರರು ಹಾಗೂ ವಕೀಲರ ಸಹಕಾರದೊಂದಿಗೆ ಇತ್ಯರ್ಥಪಡಿಸಲಾಗುವುದು ಎಂದರು.

ಅಲ್ಲದೇ, ಚೆಕ್ಕು ಅಮಾನ್ಯ ಪ್ರಕರಣಗಳು, ಸಾಲ ವಸೂಲಾತಿ ನ್ಯಾಯಾಧಿಕರಣದ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ಪ್ರಕರಣಗಳು, ವಿದ್ಯುತ್ ಹಾಗೂ ನೀರಿನ ಶುಲ್ಕಗಳು, ಕಾರ್ಮಿಕರ ವಿವಾದಗಳು, ಭೂಸ್ವಾಧೀನ ಪ್ರಕರಣಗಳು ಹಾಗೂ ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪ್ರಕರಣಗಳು ಹಾಗೂ ಸಿವಿಲ್ ಪಿಂಚಣಿ ಪ್ರಕರಣಗಳನ್ನು ರಾಜಿ ಮೂಲಕ ಇಬ್ಬರೂ ಕಕ್ಷಿದಾರರ ಮನವೊಲಿಸಿ ಇತ್ಯರ್ಥ ಪಡಿಸಲಾಗುವುದು. ಜೊತೆಗೆ ರಾಜಿಯಾಗಬಲ್ಲ ಸಿವಿಲ್ ಹಾಗೂ




ಖಾಯಂ ಜನತಾ ನ್ಯಾಯಾಲಯದಲ್ಲಿನ ಪ್ರಕರಣಗಳನ್ನೂ ಇತ್ಯರ್ಥ ಪಡಿಸಲಾಗುವುದು. ನ್ಯಾಯಾಲಯಗಳಲ್ಲಿನ ಪ್ರಕರಣಗಳನ್ನು ಉಭಯ ಕಕ್ಷಿದಾರರು ರಾಜಿ ಮಾಡಿಕೊಳ್ಳಲು ಸೂಕ್ತ ಕಾನೂನು ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಲಾಗುವುದು ಎಂದರು.

ಲೋಕ ಅದಾಲತ್ನಲ್ಲಿ ಪ್ರಕರಣಗಳನ್ನು ಸ್ವಯಂಪ್ರೇರಿತರಾಗಿ ಇತ್ಯರ್ಥಪಡಿಸಿಕೊಳ್ಳಲು ಎರಡೂ ಕಡೆಯವರಿಗೂ ಒಪ್ಪಿಗೆಯಾಗುವಂತೆ ಪ್ರಕರಣ ತೀರ್ಮಾನವಾಗುವುದರಿಂದ ಇಬ್ಬರ ನಡುವಿನ ಬಾಂಧವ್ಯ ಉಳಿದು ವಿವಾದವು ಸುಖಾಂತ್ಯಗೊಳ್ಳುತ್ತದೆ. ನ್ಯಾಯಾಲಯದಲ್ಲಿ ದಾಖಲಾಗದೇ ಇರುವ ವ್ಯಾಜ್ಯ ಪೂರ್ವ ಪ್ರಕರಣಗಳನ್ನೂ ಸಹ ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶವಿರುತ್ತದೆ. ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ನ್ಯಾಯಾಲಯ ಶುಲ್ಕವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಲಾಗುವುದು. ಸಂಧಾನಕಾರರು ಸೂಚಿಸುವ ಪರಿಹಾರ ಸಮ್ಮತಿಯಾದಲ್ಲಿ ಮಾತ್ರ ರಾಜಿ ಮಾಡಿಕೊಳ್ಳಬಹುದು. ಕಡಿಮೆ ಖರ್ಚಿನಲ್ಲಿ ಶೀಘ್ರ ತೀರ್ಮಾನಕ್ಕಾಗಿ ಲೋಕ ಅದಾಲತ್ ವಿಶೇಷ ಅವಕಾಶವಾಗಿರುತ್ತದೆ ಎಂದರು.

ಪ್ರಸ್ತುತ ಜಿಲ್ಲೆಯ ನ್ಯಾಯಾಲಯಗಳಲ್ಲಿ ಒಟ್ಟು 43,385 ಪ್ರಕರಣಗಳು ಬಾಕಿಯಿರುತ್ತವೆ ಈ ಪೈಕಿ ಶೇ 50ರಷ್ಟು ಪ್ರಕರಣಗಳು ರಾಜಿಯಾಗಬಲ್ಲಂತಹ ಪ್ರಕರಣಗಳಾಗಿವೆ, ಅಂತಹ ಪ್ರಕರಣಗಳಲ್ಲಿ 4020 ಪ್ರಕರಣಗಳನ್ನು ಮಾರ್ಚ್ 8ರ ಅದಾಲತ್ನಲ್ಲಿ ಇತ್ಯರ್ಥ ಪಡಿಸಲು ಈಗಾಗಲೇ ಈಗಾಗಲೇ ಗುರುತಿಸಲಾಗಿದೆ. ಗುರುತಿಸಿರುವ ಪ್ರಕರಣಗಳಲ್ಲಿ ಬಹುತೇಕ ಪ್ರಕರಣಗಳು ಇತ್ಯರ್ಥವಾಗಲಿವೆ. ಮಾರ್ಚ್ 08 ರವರೆಗೂ ಪ್ರಕರಣಗಳ ಸಂಖ್ಯೆ ಮತ್ತಷ್ಟು ಲಭ್ಯವಾಗುವ ಸಾಧ್ಯತೆ ಇದ್ದು, ಕಳೆದ ಬಾರಿಗಿಂತ ಹೆಚ್ಚಿನ ಪ್ರಕರಣಗಳನ್ನು ಅದಾಲತ್ನಲ್ಲಿ ವಿಲೇವಾರಿ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದರು. ಲೋಕ ಅದಾಲತ್ನಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದರಿಂದ ಪದೇ ಪದೇ ನ್ಯಾಯಾಲಯಕ್ಕೆ ಅಲೆಯುವುದು ತಪ್ಪುತ್ತದೆ. ಕಕ್ಷಿದಾರರ ಸಮಯ ಮತ್ತು ಹಣ ಉಳಿತಾಯವಾಗಿ ಇಬ್ಬರಿಗೂ ನ್ಯಾಯ ದೊರೆತಂತಾಗಿ ನೆಮ್ಮದಿಯೂ ದೊರೆಯುತ್ತದೆ. ಅಲ್ಲದೇ ನ್ಯಾಯಾಲಯದ ಅಮೂಲ್ಯ ಸಮಯವೂ ಉಳಿತಾಯವಾಗಿ ಆ ಸಮಯವನ್ನು ಬಾಕಿ ಇರುವ ಇತರೆ ಪ್ರಕರಣಗಳ ವಿಚಾರಣೆ ಮತ್ತು ಇತ್ಯರ್ಥಕ್ಕೆ ನೀಡಲು ಸಹಕಾರಿಯಾಗುತ್ತದೆ. ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳುವುದರಿಂದ ಕಕ್ಷಿದಾರರ ನಡುವಿನ ವೈಮನ್ಯಸ್ಸು,ಭಿನ್ನಾಭಿಪ್ರಾಯ, ದ್ವೇಷ ಕಡಿಮೆಯಾಗಿ ಇಬ್ಬರ ನಡುವೆ ಸಾಮರಸ್ಯ, ಸೌಹಾರ್ದತೆಯ ವಾತಾವರಣ ನಿರ್ಮಾಣವಾಗಿ ಸಮಾಜದಲ್ಲಿ ಶಾಂತಿ ನೆಮ್ಮದಿಯೂ ನಿರ್ಮಾಣವಾಗುತ್ತದೆ ಎಂದರು.

ಮಾರ್ಚ್ 08 ರ ಅದಾಲತ್ನಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಸಾರ್ವಜನಿಕರು ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕುಗಳ ಕಾನೂನು ಸೇವಾ ಸಮಿತಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು. ಈ ವೇಳೆ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಿಲ್ಪ ರವರು ಉಪಸ್ಥಿತರಿದ್ದರು.

# ತಾಲ್ಲೂಕಿನಲ್ಲಿ ಹಕ್ಕಿಜ್ವರ ಸಂಬಂಧಿತ ಯಾವುದೇ ಪ್ರಕರಣ ಪತ್ತೆಯಾಗಿಲ್ಲ

**ಶಿಡ್ಲಘಟ್ಟ:** ಚಿಕ್ಕಬಳ್ಳಾಪುರ ತಾಲ್ಲೂಕಿನ ವರದಹಳ್ಳಿ ಗ್ರಾಮದಲ್ಲಿ ಹಕ್ಕಿಜ್ವರ ಪ್ರಕರಣಗಳು ವರದಿಯಾಗಿರುವ ಹಿನ್ನೆಲೆಯಲ್ಲಿ, ಜಿಲ್ಲಾ ವ್ಯಾಪ್ತಿಯ ಎಲ್ಲಾ ತಾಲ್ಲೂಕುಗಳ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲಿಸಬೇಕಾದ ಮಾರ್ಗಸೂಚಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹೊರಡಿಸಿದ್ದಾರೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶಮೂರ್ತಿ ಮಾಹಿತಿ ನೀಡಿದರು.

ತಾಲ್ಲೂಕಿನಲ್ಲಿ ಈವರೆಗೆ ಹಕ್ಕಿಜ್ವರ ಸಂಬಂಧಿತ ಯಾವುದೇ ಪ್ರಕರಣ ಪತ್ತೆಯಾಗಿಲ್ಲ ಆದಾಗ್ಯೂ, ಮುನ್ನೆಚ್ಚರಿಕಾ ಕ್ರಮವಾಗಿ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ



ಸಂಪರ್ಕದಲ್ಲಿದ್ದೇವೆ ,ಕೋಳಿ ಸಾಕಾಣಿಕಾ ಕೇಂದ್ರಗಳಲ್ಲಿ ಯಾವುದೇ ಅಸಹಜ ಸಾವುಗಳು ಕಂಡುಬಂದಲ್ಲಿ ತಕ್ಷಣ ಅಧಿಸೂಚನೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಜೊತೆಗೆ, ಸೋಂಕು ಹರಡದಂತೆ ಆ ಪ್ರದೇಶದಲ್ಲಿ ತಕ್ಷಣ ತ್ಯಾಜ್ಯ ನಿರ್ವಹಣೆ ಮತ್ತು ಸೋಂಕು ನಿವಾರಕ ಕ್ರಮಗಳನ್ನು ಜಾರಿಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ.

ಹಕ್ಕಿಜ್ವರದ ಸೋಂಕಿತರಿಗೆ ಜ್ವರ, ಕೆಮ್ಮು, ತಲೆನೋವು, ಗಂಟಲು ಕೆರೆತ, ನೆಗಡಿ, ಸ್ನಾಯು ನೋವು, ಅಪಾರ ಆಯಾಸ, ವಾಂತಿ, ಭೇದಿ ಹಾಗೂ ಉಸಿರಾಟದ ತೊಂದರೆ ಕಾಣಿಸಿಕೊಳ್ಳಬಹುದು,ಈ ಲಕ್ಷಣಗಳು ಕಂಡುಬಂದ ಕೂಡಲೇ ಹತ್ತಿರದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ತಪಾಸಣೆ ಮಾಡಿಸಿಕೊಳ್ಳುವುದು ಅವಶ್ಯಕ ಎಂದರು.

ತಾಲ್ಲೂಕಿನಾದ್ಯಂತ ಪ್ರಸ್ತುತ ಹಕ್ಕಿಜ್ವರದ ಯಾವುದೇ ಆತಂಕವಿಲ್ಲ, ಆದರೂ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲಾಗುತ್ತಿದೆ ಜನತೆ ಆತಂಕ ಅಗತ್ಯವಿಲ್ಲ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ವೆಂಕಟೇಶಮೂರ್ತಿ ತಿಳಿಸಿದರು.


# ಕಂದಾಯಇಲಾಖೆಯ ಅಧಿಕಾರಿಗಳ ವಿರುದ್ಧ ಪ್ರತಿಭಟನೆ

**ದೇವನಹಳ್ಳಿ:** ಯಲಿಯೂರುಗ್ರಾಮದಲ್ಲಿ ಸ್ಮಶಾನಕ್ಕೆ ಹೋಗುವುದಕ್ಕೆದಾರಿಯಿಲ್ಲ. ಹಿಡುವಳಿ ಜಮೀನುಗಳಲ್ಲಿ ಓಡಾಡಬೇಕಿದೆ.ಈ ಬಗ್ಗೆ ಕಂದಾಯ ಇಲಾಖೆ ಸಚಿವ ಕೃಷ್ಣಬೈರೇಗೌಡ, ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್ ಅವರಿಗೆ ಹತ್ತು ಬಾರಿ ಮನವಿಗಳು ಕೊಟ್ಟಿದ್ದೇವೆ. ಆದರೂ ಏನೂ ಪ್ರಯೋಜನವಾಗಿಲ್ಲ. ಹೋಬಳಿಯ ಕಂದಾಯಇಲಾಖೆಯ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹೋಬಳಿಯ ಯಲಿಯೂರುಗ್ರಾಮಸ್ಥರು ಸೋಮವಾರ ನಾಡಕಚೇರಿಯ ಮುಂದೆ ಭಾರತೀಯಕಿಸಾನ್ ಸಂಘ ಕರ್ನಾಟಕ ಪ್ರದೇಶ ಸಂಘದ ಸಹಯೋಗದಲ್ಲಿ ಪ್ರತಿಭಟನೆ ನಡೆಸಿದರು.

ನಮ್ಮಗ್ರಾಮದ ಸ್ಮಶಾನಗಳಿಗೆ ದಾರಿಯಿಲ್ಲ, ಬೇಚಾರಕ್ ಗ್ರಾಮಕೊಮ್ಮಸಂದ್ರಕ್ಕೆ ಸೇರಿರುವಕುಂಟೆಯನ್ನುಒತ್ತುವರಿ ಮಾಡಿಕೊಳ್ಳುವುದಕ್ಕೆ ಕಂದಾಯಇಲಾಖೆಯ ಅಧಿಕಾರಿಗಳೇ ಕುಮ್ಮಕ್ಕು ನೀಡಿದ್ದಾರೆ. ಕುಂಟೆಯಜಾಗವನ್ನುಖಾಸಗಿಯವರಿಗೆಖಾತೆ ಮಾಡಿಕೊಟ್ಟಿದ್ದಾರೆ.ಅವರು ಈಗ ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿದ್ದಾರೆ.ನಾವು ಎಷ್ಟೇ ಬಾರಿಗೆ ಮನವಿ ಮಾಡಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲಎಂದು ಪ್ರತಿಭಟನೆ ನಡೆಸಿದರು. .

ಯಲಿಯೂರುಗ್ರಾಮ ಪಂಚಾಯಿತಿ ಸದಸ್ಯರಾದ ಆನಂದ್ರವರು ಮಾತನಾಡಿಯಲಿಯೂರುಗ್ರಾಮ ಪಂಚಾಯಿತಿ ಲೆಕ್ಕಾಧಿಕಾರಿಯನ್ನುಇದುವರೆಗೂ ವರುಷಗಳು ಉರುಳಿದರು ಯಾರುಆತನ ಮುಖವನ್ನು ನೋಡಿರುವುದಿಲ್ಲ ಹೀಗಿದ್ದಾಗಗ್ರಾಮಸ್ಥರ ಸಮಸ್ಯೆ ಕೇಳುವವರಾರು ಎಂದರು.

ರೈತತ್ಯಾಗರಾಜುರವರು ಮಾತನಾಡಿಗ್ರಾಮದಲ್ಲಿನ ಸ್ಮಶಾನಕ್ಕೆ ಹೋಗಲು ಜಾಗವಿಲ್ಲದೆಕಂದಾಯ ಸಚಿವರು, ಜಿಲ್ಲಾಧಿಕಾರಿಗಳು, ತಹಸಿಲ್ದಾರ್ ರವರುಗಳಿಗೆ ಮನವಿಗಳನ್ನು ನೀಡಿದ್ದು ಅವರುಗಳಿಂದಲೂ ಸಾಕಷ್ಟು ಸೂಚನೆ ಬಂದಿದ್ದರೂ ಸಹ, ಇಲ್ಲಿನ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲವೆಂದು ಹೀಗಿದ್ದಾಗ ಸರಕಾರಿ



ಸಂಬಳ ತೆಗೆದುಕೊಂಡುಇಲ್ಲಿರುವುದಕ್ಕಿಂತರಾಜೀನಾಮೆ ನೀಡಿ ಹೊಲಗದ್ದೆಗಳಲ್ಲಿ ನಮ್ಮಂತೆ ನೀರುಕಟ್ಟುವ ಕೆಲಸ ಮಾಡುವುದುಉಚಿತವೆಂದು ತಿಳಿಸಿದರು.

ರೈತ ವೇಣುಗೋಪಾಲ್ ಮಾತನಾಡಿಯಲಿಯೂರುಗ್ರಾಮ ಪೋಡಿ ಮುಕ್ತ ಗ್ರಾಮವೆಂದುಘೋಷಣೆಯಾಗಿದ್ದರೂ ಸಹ ಇನ್ನು ಹಲವಾರು ಜಮೀನುಗಳು ಪೋಡಿಆಗದೆ ಉಳಿದುಕೊಂಡಿದ್ದು ಕೂಡಲೇ ಆ ಜಮೀನುಗಳಿಗೆ ಪೋಡಿ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಾಡಕಚೇರಿ ಉಪತಹಸಿಲ್ದಾರ್ ಸುರೇಶ್ರವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ ಸ್ಮಶಾನಕ್ಕೆ ಹೋಗುವ ಜಾಗಕ್ಕೆರೈತರೇಒಬ್ಬರುಅಡ್ಡಿ ಮಾಡುತ್ತಿದ್ದುಕೂಡಲೇ ತಹಸಿಲ್ದಾರ್ ಬಳಿಗೆ ಹೋಗಿ ಇದರ ಬಗ್ಗೆ ತೀರ್ಮಾನಿಸಿ ನಿಮ್ಮೆಲ್ಲರ ಸಹಕಾರದೊಂದಿಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು, ಯಲಿಯೂರುಗ್ರಾಮದಲ್ಲಿಕಾರ್ಯ ನಿರ್ವಹಿಸದೆಇರುವಗ್ರಾಮ ಲೆಕ್ಕಾಧಿಕಾರಿಗೆ ಈಗಾಗಲೇ ಸೂಚನೆ ನೀಡಲಾಗಿದ್ದು ವಾರದಲ್ಲಿ ಮೂರು ದಿನ ಯಲಿಯೂರುಗ್ರಾಮ ಪಂಚಾಯಿತಿಕಚೇರಿಯಲ್ಲಿಕಾರ್ಯನಿರ್ವಹಿಸಿ ಜಿಪಿಆರ್ಎಸ್ ಫೋಟೋಗಳನ್ನು ತೆಗೆದು ಕಳುಹಿಸಬೇಕೆಂದು ಇದಕ್ಕೆತಪ್ಪಿದಲ್ಲಿಅವರ ವಿರುದ್ಧ ಸರ್ಕಾರಕ್ಕೆದೂರು ಸಲ್ಲಿಸಲಾಗುವುದೆಂದು ತಿಳಿಸಿದರು .

ನಮಗೆ ಸಾಗುವಳಿ ಚೀಟಿಗಳನ್ನು ಕೊಟ್ಟಿದ್ದರೂ ನಮ್ಮ ಜಮೀನುಗಳಿಗೆ ಪೋಡಿ ಮಾಡಿಕೊಡುತ್ತಿಲ್ಲ. ಎಂದು ಕೆಲ ರೈತರುಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಕಂದಾಯಇಲಾಖೆಯ ಅಧಿಕಾರಿಗಳು, ಹಾಗೂ ರೈತರ ನಡುವೆ ಮಾತಿನ ಚಕಮಕಿ ನಡೆಯಿತು.

ಯಲಿಯೂರುಗ್ರಾಮದ ಮುಖಂಡತ್ಯಾಗರಾಜ್, ಗ್ರಾಮ ಪಂಚಾಯಿತಿ ಸದಸ್ಯರಾದಆನಂದ್, ಲಕ್ಷ್ಮಮ್ಮ, ಮುಖಂಡಚಿಕ್ಕಣ್ಣ, ಮುನಿರಾಜು, ರಾಮಕೃಷ್ಣ, ಆಂಜಿನಪ್ಪ, ನಾಗರಾಜ್, ತಿಮ್ಮರಾಯಪ್ಪ, ಮಟ್ಟಬಾರ್ಲುಆಂಜಿನಪ್ಪ, ಚನ್ನಕೃಷ್ಣ, ವಿಜಯಕುಮಾರ್, ಕೆಂಪೇಗೌಡ, ಪಿಳ್ಳಣ್ಣ, ಆಂಜಿನೇಯಗೌಡ, ವೇಣುಗೋಪಾಲ್, ಮುಂತಾದವರು ಹಾಜರಿದ್ದರು.

# ಪಟ್ಟಣದ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಸಹಕರಿಸಿ: ಮುಖ್ಯಾಧಿಕಾರಿ ಮಹೇಶ್‌ಕುಮಾರ್



**ಯಳಂದೂರು:** ಪಟ್ಟಣದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಎಲ್ಲರೂ ಪಟ್ಟಣ ಪಂಚಾಯಿತಿಯೊಂದಿಗೆ ಸಹಕರಿಸಬೇಕು ಎಂದು ಪಪಂ ಮುಖ್ಯಾಧಿಕಾರಿ ಎಂ.ಪಿ. ಮಹೇಶ್‌ಕುಮಾರ್ ಕರೆ ನೀಡಿದರು.

ಅವರು ಈಚೆಗೆ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪಂಚಾಯಿತಿಯ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ನಮ್ಮ ಪಂಚಾಯಿತಿ ಚಿಕ್ಕದಾಗಿದೆ. ಇಲ್ಲಿಗೆ ಆದಾಯದ ಮೂಲಗಳು ಕಡಿಮೆ ಇದೆ. ಇದನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯರು, ಸಾರ್ವಜನಿಕರು ಸೂಕ್ತ ಸಲಹೆ, ಸೂಚನೆಗಳನ್ನು ನೀಡಬೇಕು, ಪಟ್ಟಣದಲ್ಲಿರುವ ಹಳೆಯ ಕಚೇರಿಯ ಕಟ್ಟಡದಲ್ಲಿ ಮಳಿಗೆಗಳ ನಿರ್ಮಾಣ, ಓವರ್ ಹೆಡ್ ಟ್ಯಾಂಕ್ ಇದ್ದ ಕಡೆ ಮಳಿಗೆ ನಿರ್ಮಾಣ, ಮಾರುಕಟ್ಟೆ ಅಭಿವೃದ್ಧಿ, ಸೂಕ್ತ ವಾಹನ ನಿಲುಗಡೆಗೆ ಸ್ಥಳಾವಕಾಶ, ದ್ವಿಪಥ ರಸ್ತೆಯಲ್ಲಿ ವಿದ್ಯುತ್ ಬಲ್ಬ್‌ಗಳ ಅಳವಡಿಕೆ, ಪಾರ್ಕ್ ನಿರ್ಮಾಣ, ಇ-ಸ್ವತ್ತು ಯೋಜನೆ ಖಾತೆ ಮಾಡಿಸಿಕೊಳ್ಳಲು ಸರ್ಕಾರ ತಂದಿರುವ ಹೊಸ ಮಾರ್ಗಸೂಚಿಗಳನ್ನು ಮನೆಮನೆಗಳಿಗೆ ತಲುಪಿಸಿ ಇಲ್ಲಿಂದ ಆದಾಯ ಕ್ರೂಢೀಕರಿಸುವುದು, ಪಟ್ಟಣ ಪಂಚಾಯಿತಿ ವತಿಯಿಂದ ಸುಸಜ್ಜಿತ ನೂತನ ಹೋಟೆಲ್ ಕಟ್ಟಡ ನಿರ್ಮಾಣ ಮಾಡುವುದು, ಸೇರಿದಂತೆ ಎಲ್ಲರೂ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಇವೆಲ್ಲವನ್ನೂ ಪರಿಗಣಿಸಿ ಸರ್ಕಾರದಿಂದ ಮಗೆ ಲಭಿಸುವ ಅನುದಾನಗಳ ಲಭ್ಯತೆ, ಅವುಗಳ ವಿನಿಯೋಗ ಹೊಸ ಯೋಜನೆಗಳಿಗೆ ಬೇಕಾಗುವ ಅನುದಾನಗಳ ಅಂದಾಜು ಪಟ್ಟಿ ತಯಾರಿಕೆ, ಪಂಚಾಯಿತಿಗೆ ಬರುವ ಆದಾಯ, ಹೊಸದಾಗಿ ಬರಬಹುದಾದ ಆದಾಯದ ಮೂಲಗಳನ್ನು ಪಟ್ಟಿ ಮಾಡಿ ಬಜೆಟ್ ತಯಾರಿಸಿ ಪಟ್ಟಣದ ಅಭಿವೃದ್ಧಿಗೆ ಪೂಕರವಾಗಿರುವ ಬಜೆಟ್ ಮಂಡಿಸಲಾಗುವುದು ಎಂದರು.

ಪಪಂ ಅಧ್ಯಕ್ಷೆ ಲಕ್ಷ್ಮಿಮಲ್ಲು ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು ಸದಸ್ಯರಾದ ಮಹೇಶ್, ವೈ.ಜಿ. ರಂಗನಾಥ, ಸವಿತಾ ಬಸವರಾಜು, ಮಂಜು, ಬಿ. ರವಿ, ನಾಮ ನಿರ್ದೇಶಿತ ಸದಸ್ಯರಾದ ಲಿಂಗರಾಜಮೂರ್ತಿ, ಮುನವ್ವರ್ ಬೇಗ್, ಶ್ರೀಕಂಠಸ್ವಾಮಿ ಮುಖಂಡರಾದ ನಿರಂಜನಸ್ವಾಮಿ, ಪ್ರಕಾಶ್, ನಾರಾಯಣಸ್ವಾಮಿ, ಸಿದ್ದರಾಜು, ನಾಗರಾಜು ಪಪಂನ ಸಿಬ್ಬಂಧಿಗಳಾದ ದೊಡ್ಡ ಬಸವಣ್ಣ, ಜಯಲಕ್ಷ್ಮಿ, ಲಕ್ಷ್ಮಿ, ಭಾಗ್ಯ, ವಿಜಯ, ಮಲ್ಲಿಕಾರ್ಜುನ ಸೇರಿದಂತೆ ಅನೇಕರು ಇದ್ದರು.

## ನಾಲ್ಕುಮರಿಗೆ ಜನ್ಮ ನೀಡಿದ ಕುರಿ

**ಶಿಡ್ಲಘಟ್ಟ:** ತಾಲ್ಲೂಕಿನ ಹಂಡಿಗನಾಳ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಅಪ್ಪೇಗೌಡನಹಳ್ಳಿಯ ಕೋಟೆ ಕೃಷ್ಣಪ್ಪ ಅವರ ಮನೆಯಲ್ಲಿ ಕುರಿಯು ನಾಲ್ಕು ಮರಿಗಳನ್ನು ಹಾಕಿದ್ದು ನಾಲ್ಕು ಮರಿಗಳು ಒಂದೇ ಸಮನಾದ ಗಾತ್ರದಲ್ಲಿದ್ದು ಆರೋಗ್ಯವಾಗಿವೆ. ಚಳ್ಳಕೆರೆ ಕುರಿಯ ಕ್ರಾಸ್ ಬೀಡು ಕುರಿ ಇದಾಗಿದ್ದು ಮೊದಲನೇ ಬಾರಿ ಒಂದು ಮರಿ, ಎರಡನೇ ಬಾರಿ ಎರಡು ಮರಿ, ಮೂರನೇ ಬಾರಿ ಮೂರು ಮರಿಗಳನ್ನು ಹಾಕಿತ್ತು ಈಗ ನಾಲ್ಕನೇ ಬಾರಿ ನಾಲ್ಕು ಮರಿ ಹಾಕಿದ್ದು ಅದರಲ್ಲಿ ಮೂರು ಗಂಡು ಮರಿ, ಒಂದು ಹೆಣ್ಣು ಮರಿಇದೆ ಎಂದು ರೈತರಾದ ಅಪ್ಪೇಗೌಡನಹಳ್ಳಿ ಕೋಟೆ ಕೃಷ್ಣಪ್ಪ ತಿಳಿಸಿದರು.



# ಬೆಳೆವಿಮೆ ತಿರಸ್ಕೃತಗೊಂಡ ಪ್ರಸ್ತಾವಣೆಗೆ ಆಕ್ಷೇಪಣೆ ಸಲ್ಲಿಸಲು ಸೂಚನೆ

**ದೇವನಹಳ್ಳಿ:** ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮೆ) ಯೋಜನೆಯಡಿಯಲ್ಲಿ 2024-25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಮಾರ್ಗದರ್ಶನದಂತೆ ಬೆಳೆ ಸಮೀಕ್ಷೆಯ ದತ್ತಾಂಶಗಳನ್ನು ಬೆಳೆ ನೋಂದಾಣಿಯಾದ ಪ್ರಸ್ತಾವನೆಗಳೊಂದಿಗೆ ಹೋಲಿಕೆ ಮಾಡಿದ್ದು, ತಾಳೆಯಾಗದಿರುವ ಪ್ರಸ್ತಾವನೆ ಬಗ್ಗೆ ನೋಂದಾಯಿತ ರೈತರು ಆಕ್ಷೇಪಣೆ ಸಲ್ಲಿಸಲು ದೇವನಹಳ್ಳಿ ಕೃಷಿ ಇಲಾಖೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಬೆಳೆ ಸಮೀಕ್ಷೆಯ ದತ್ತಾಂಶಗಳನ್ನು ಬೆಳೆ ನೋಂದಣೆಯಾದ ಪ್ರಸ್ತಾವನೆಗಳೊಂದಿಗೆ ಹೋಲಿಕೆ ಮಾಡಿ ತಾಳೆಯಾಗದಿರುವ ಪ್ರಸ್ತಾವನೆಗಳನ್ನು ಸರ್ಕಾರದ ಆದೇಶದಂತೆ ಸಂಬಂಧ ಪಟ್ಟ ತಾಲ್ಲೂಕು ಕೃಷಿ, ತೋಟಗಾರಿಕೆ ಬ್ಯಾಂಕ್ ಇನ್‌ಸೋರ್ಟ್ಸ್ ಮಟ್ಟದ ಅಧಿಕಾರಿಗಳು ಈ ಪ್ರಸ್ತಾವನೆಗಳನ್ನು ಪರಿಶೀಲಿಸಿ ವಿಮೆ ಸಂಸ್ಥೆಯವರಾದ ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಅವರಿಗೆ ವರ್ಗಾಯಿಸಿದ್ದು, ಅಲ್ಲಿ ಹಲವು ಪ್ರಸ್ತಾವನೆಗಳನ್ನು ತಿರಸ್ಕೃತಗೊಂಡಿವೆ. ತಿರಸ್ಕೃತಗೊಂಡ ಪ್ರಸ್ತಾವನೆಗಳ ಪಟ್ಟಿಯನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಗ್ರಾಮಪಂಚಾಯತಿಗಳಲ್ಲಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಸೂಚನೆ ಫಲಕದಲ್ಲಿ ಪ್ರಕಟಿಸಲಾಗಿದೆ.

ಸಂಬಂಧಿಸಿ ರೈತರು ಅವರ ವಿಮೆ ಅರ್ಜಿ ತಿರಸ್ಕೃತಗೊಂಡ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಮರು ಪರಿಶೀಲಿಸಲು ಬೆಳೆ ವಿಮೆ ನೋಂದಣಿಯಾಗಿರುವ ಬೆಳೆಯನ್ನು ಬೆಳೆದಿರುವ ಕುರಿತು ಅಗತ್ಯ ದಾಖಲೆಗಳೊಂದಿಗೆ 15 ದಿನಗಳ ಒಳಗೆ ಮನವಿ ಸಲ್ಲಿಸಲು ಕೋರಿದೆ. ಅಂತಹ ಮನವಿಗಳನ್ನು ತಾಲ್ಲೂಕು ಮಟ್ಟದ ದೂರು ನಿವಾರಣೆ ಸಮಿತಿಯಲ್ಲಿ ಮಂಡಿಸಿ ಕೂಲಂಕುಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಹಾಗೂ ತಾಲ್ಲೂಕು ಮಟ್ಟದ ಸಮಿತಿಯ ನಿರ್ಣಯವನ್ನು ರೈತರು ಒಪ್ಪದಿದ್ದಲ್ಲಿ ಜಿಲ್ಲಾ ಮಟ್ಟದ ಸಮಿತಿಗೆ ಮೇಲ್ಮನವಿ ಸಲ್ಲಿಸಬಹುದು. ದೇವನಹಳ್ಳಿ ಸಹಾಯಕ ಕೃಷಿ ನಿರ್ದೇಶಕಿ ಸುಶೀಲಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಲ್ಲಾ ವೇದಿಕೆಗಳಲ್ಲೂ ಕಾಂಗ್ರೆಸ್ ಪಕ್ಷ ಒಂದೇ

**ಶಿಡ್ಲಘಟ್ಟ:** ಕಳೆದ ವಿಧಾನಸಭಾ ಕ್ಷೇತ್ರದ ಚುನಾವಣೆಯು ಮಾಜಿ ಸಚಿವರಾದ ವಿ.ಮುನಿಯಪ್ಪ ಹಾಗೂ ಶಶಿಧರ್ ಮುನಿಯಪ್ಪ ಅವರ ನೇತೃತ್ವದಲ್ಲಿ ನಡೆಯಿತು ಅದೇ ರೀತಿ ಮುಂದಿನ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಯೂ ಸಹ ಅವರ ನೇತೃತ್ವದಲ್ಲಿ ನಡೆಯುತ್ತದೆ ಎಂದು ಕೋಲಾರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್‌ನ ಪರಾಜಿತ ಅಭ್ಯರ್ಥಿ ಕೆ.ವಿ.ಗೌತಮ್ ತಿಳಿಸಿದರು.

ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಕಾಳನಾಯಕನ ಹಳ್ಳಿಯಲ್ಲಿ ಖಾಸಗಿ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.ಕಳೆದ ಲೋಕಸಭಾ



ಚುನಾವಣೆಗೆ ಬಣ ರಾಜಕೀಯ ಮುಕ್ತಾಯಗೊಂಡಿದೆ ಈಗ ಶಿಡ್ಲಘಟ್ಟದಲ್ಲಿ ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸುತ್ತಿದ್ದಾರೆ. ಎಲ್ಲಾ ವೇದಿಕೆಗಳಲ್ಲೂ ಕಾಂಗ್ರೆಸ್ ಪಕ್ಷ ಒಂದೇ ಎಂಬದನ್ನು ಹೇಳಿಕೊಂಡು ಗುರುತಿಸಿ ಕೊಳ್ಳುತ್ತಿದ್ದಾರೆ ಎಂದರು.

ಇದೇ ವೇಳೆ ಯುವ ಕಾಂಗ್ರೆಸ್ ಪದಾಧಿಕಾರಿಗಳಿಗೆ ಅಭಿನಂದನೆ ತಿಳಿಸಿದ ಅವರು ಗೆದ್ದಿರುವ ಎಲ್ಲಾ ಪದಾಧಿಕಾರಿಗಳ ಮೇಲೆ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಜವಾಬ್ದಾರಿ ಹಾಗೂ ಪಕ್ಷವನ್ನು ಕಟ್ಟುವ ಜವಾಬ್ದಾರಿ ಹೆಚ್ಚಾಗಿರುತ್ತದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಆಂಜಿನಪ್ಪ (ಪುಟ್ಟು) ಯೂತ್ ಕಾಂಗ್ರೆಸ್ ಅಧ್ಯಕ್ಷ ದರ್ಶನ್,ವರದರಾಜು ಬಳುವನಹಳ್ಳಿ ಮೂರ್ತಿ, ದಾಮೋದರ್, ದೇವರಾಜ್, ಆನೆಮಡಗು ಹರೀಶ್ ಮುಂತಾದ ವರು ಹಾಜರಿದ್ದರು.

# ಅಧ್ಯಕ್ಷರು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು

**ಶಿಡ್ಲಘಟ್ಟ:** ಗ್ರಾಮ ಪಂಚಾಯತಿ ಅಧ್ಯಕ್ಷರಾದಂತವರಿಗೆ ಚೆಕ್‌ಗೆ ಸಹಿ ಮಾಡುವ ಅಧಿಕಾರ, ಅಭಿವೃದ್ಧಿ ಬಗ್ಗೆ ನೇರ ತೀರ್ಮಾನಗಳನ್ನು ತೆಗೆದುಕೊಳ್ಳುವಂತಹ ಸ್ಥಳೀಯ ಸರ್ಕಾರಗಳು ಇವಾಗಿದ್ದು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಬಿಜೆಪಿ ಮುಖಂಡರಾದ ಸೀಕಲ್ ರಾಮಚಂದ್ರಗೌಡ ತಿಳಿಸಿದರು.

ನಗರದ ಮಯೂರ ವೃತ್ತದ 'ಬಿಜೆಪಿ ಸೇವಾಸೌಧ' ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೆಂಚಾರ್ಲಹಳ್ಳಿ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷ ಕೆ.ಎನ್.ಕೃಷ್ಣಾರೆಡ್ಡಿ (ಬ್ಯಾಂಕ್) ಹಾಗು ಉಪಾಧ್ಯಕ್ಷೆ ಗಂಗಮ್ಮ ಅವರನ್ನು ಅಭಿನಂದಿಸಿ ಅವರು ಮಾತನಾಡಿದರು.

ಮನ್ನರೇಗಾ ಸೇರಿದಂತೆ ಅನೇಕ ಯೋಜನೆಗಳ ಮೂಲಕಗ್ರಾಮಾಂತರ ಜನಸಾಮಾನ್ಯರಿಗೆ ಅನೇಕ ಸವಲತ್ತುಗಳನ್ನು ನೇರವಾಗಿ ಕಲ್ಪಿಸುವ ಅಧಿಕಾರವನ್ನು ಪಂಚಾಯತಿಗಳು ಹೊಂದಿದ್ದು ಜನರ ಕೆಲಸ ಕಾರ್ಯಗಳನ್ನು ಹತ್ತಿರದಿಂದ ಮಾಡುವ ಅವಕಾಶ ಪಂಚಾಯತಿ ಸದಸ್ಯರಿಗೆ ಹೆಚ್ಚಾಗಿರಲಿದೆ ಎಂದು




ಹೇಳಿದರು. ಈ ಸಂದರ್ಭದಲ್ಲಿ ಗ್ರಾಮಾಂತರ ನಗರಸಭೆ ಸದಸ್ಯ ನಾರಾಯಣಸ್ವಾಮಿ,ಕಂಬದಹಳ್ಳಿ ಮಂಡಲ ಅಧ್ಯಕ್ಷರಾದ ಸೀಕಲ್ ಆನಂದಗೌಡ, ಎಸ್.ಸುರೇಂದ್ರಗೌಡ ಮತ್ತೀತರರು ಹಾಜರಿದ್ದರು.

# ಕೊರಟಗೆರೆ ಪಟ್ಟಣದಲ್ಲಿ ಕರವೇ ರಾಜ್ಯಾಧ್ಯಕ್ಷ ಗುಡುಗು

**ಕೊರಟಗೆರೆ:** ಕನ್ನಡಧ್ವಜಸ್ತಂಭದತೆರವು ವಿಚಾರಕರ್ನಾಟಕರಾಜ್ಯವ್ಯಾಪ್ತಿಚರ್ಚೆಯಾಗಿ ಹೋರಾಟದ ಹಾದಿ ಬೇರೆ ಸ್ವರೂಪ ಪಡೆಯುವ ಮುನ್ನಾತೆರವು ಮಾಡಿದ ಸ್ಥಳದಲ್ಲೇ ಕೊರಟಗೆರೆಯಅಧಿಕಾರಿವರ್ಗ ಮತ್ತೇಅಲ್ಲೇಕನ್ನಡಧ್ವಜಸ್ತಂಭ ಪ್ರತಿಷ್ಠಾಪನೆ ಮಾಡ್ಬೇಕು. ಇಲ್ಲವಾದ್ರೇ ನೀವು ಹೋದಕಡೆಯೆಲ್ಲ ನಾಡದ್ರೋಹಿ ಎಂಬ ಪಟ್ಟಕಟ್ಟಿಕಾರ್ಯಕರ್ತರು ಹೋರಾಟ ಮಾಡ್ತಾರೇಹುಷಾರ್ಎಂದುಕರವೇರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡಎಚ್ಚರಿಕೆ ನೀಡಿದರು.

ಕೊರಟಗೆರೆ ಪಟ್ಟಣದ ಸರಕಾರಿ ಬಸ್ ನಿಲ್ದಾಣದಿಂದ ಪಪಂ ಕಚೇರಿಯ ವರೇಗೆಕರವೇಯಿಂದ ಸೋಮವಾರ ನಡೆದ ಬೃಹತ್ ಪ್ರತಿಭಟನೆಯ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸರಳಸಜ್ಜನ ರಾಜಕಾರಣಿಗೃಹಸಚಿವ ಡಾ.ಜಿ.ಪರಮೇಶ್ವರ ಸ್ವಕ್ಷೇತ್ರದಲ್ಲೇರಾತ್ರೋರಾತ್ರಿಕನ್ನಡಧ್ವಜಸ್ತಂಭದತೆರವು ನಡೆದುಕನ್ನಡಿಗರ ಸ್ವಾಭಿಮಾನಕ್ಕೆಧಕ್ಕೆಯಾಗಿದೆ.ಸಿಎಂ ಸಿದ್ದರಾಮಯ್ಯ ಮತ್ತುಗೃಹಸಚಿವ ಡಾ.ಜಿ.ಪರಮೇಶ್ವರಜೊತೆ ನಾನೇ ಖುದ್ದಾಗಿ ಮಾತನಾಡ್ತೀನಿ. ಕನ್ನಡಧ್ವಜಸ್ತಂಭದತೆರವು ಕೆಲಸವನ್ನಕನ್ನಡಿಗ ಅಧಿಕಾರಿಗಳೇ ಮಾಡ್ತಿದ್ರೇ ನಾವು ಯಾರ ವಿರುದ್ದ ಹೋರಾಟ ಮಾಡ್ಬೇಕು.ಹೆತ್ತತಾಯಿಯ ಕರುಳನ್ನು ಕುಯ್ಯುವ ಕೆಲಸವನ್ನುಅಧಿಕಾರಿವರ್ಗ ಮಾಡಿದೆಎಂದುಆರೋಪ ಮಾಡಿದರು.

ಸಂಗೊಳ್ಳಿ ರಾಯಣ್ಣನ ಬ್ರೀಟಿಷರಿಗೆ ಹಿಡಿದುಕೊಟ್ಟ ಮೀರ್ ಸಾಧಕರ ಸಂತತಿಇನ್ನೂಕೊರಟಗೆರೆಯಲ್ಲೇ ಉಳಿದಿದೆ ಅನ್ನೋದಿಕ್ಕೆಕನ್ನಡಧ್ವಜದತೆರವಿನ ಘಟನೆಯೇ ಪ್ರಮುಖ ಸಾಕ್ಷಿ.ನಾವು ತಮಿಳುನಾಡು, ಕೇರಳ, ಮಹಾರಾಷ್ಟ್ರದ ವಿರುದ್ದ ಹೋರಾಟ ಮಾಡಬೇಕಾಅಥವಾ ನಮ್ಮ ಅಧಿಕಾರಿಗಳ ವಿರುದ್ದ ಮಾಡಬೇಕಾ. ಹೆತ್ತತಾಯಿಗೆದ್ರೋಹ ಮಾಡೋದುಒಂದೇ ನಾಡಧ್ವಜವನ್ನುಕಿತ್ತು ಹಾಕೋದುಒಂದೇಅಲ್ವಾ.ಪಾಕಿಸ್ತಾನ ಗಡಿಯಲ್ಲಿರಾಷ್ಟ್ರಧ್ವಜ ತೆಗೆಸಿದ ರೀತಿ ನಮ್ಮ ಕೊರಟಗೆರೆಯಲ್ಲಿಕನ್ನಡಧ್ವಜ ತೆಗೆಸಿ ಖುಷಿ ಪಡ್ತೀರಾಎಂದುಕಿಡಿಕಾರಿದರು.

ನನ್ನಿಬ್ಬರು ಮಕ್ಕಳು ಹುಟ್ಟುವಾಗ್ಲೂ ನನಗೇ ಜೈಲಿಗೆ ಹಾಕಿದ್ರು.ಯಡಿಯೂರಪ್ಪ, ಸಿದ್ದರಾಮಯ್ಯ ಮತ್ತುದೇವೇಗೌಡರಕಾಲದಲ್ಲೂಜೈಲಿಗೆ ಹೋಗಿದ್ದೆ.ಕನ್ನಡ ನೆಲ-ಬಾಷೆಗಾಗಿ ಇನ್ನೂ ನೂರು ಸಲ ಜೈಲಿಗೆ ಹೋಗಲು ನಾನು ಸದಾಸಿದ್ದ.ಕೋರ್ಟ್ ಮತ್ತುಜೈಲಿಗೆ ಹೋಗಲು ಹೆದರುವ ಮಗನಲ್ಲ ನಾನು. ಕನ್ನಡಾಂಬೆಯರಕ್ಷಣೆ ಮಾಡಲು ಹೋದ ನನಗೇ 16ಪ್ರಕರಣ ಹಾಕಿ 18ದಿನ ಜೈಲಲ್ಲಿ ಹಾಕಿದ್ರು.ಕನ್ನಡ ನೆಲ ಮತ್ತು ಭಾಷೆಗೆ ಕುತ್ತು ಬಂದರೇಯಾರು ಸಹಿಸಿಕೊಬಾದ್ರು ಎಂದರು.

ಪ್ರತಿಭಟನೆಯಲ್ಲಿ ಕರವೇ ರಾಜ್ಯ ಪ್ರಧಾನ ಕಾರ್ಯದರ್ಶಿ ಸಣ್ಣೀರಪ್ಪ, ಉಪಾಧ್ಯಕ್ಷ ವೀರಭದ್ರಪ್ಪ, ಬೆಂಗಳೂರು ನಗರಧ್ಯಕ್ಷಧರ್ಮರಾಜ್, ಉಪಾಧ್ಯಕ್ಷ ಪುಟ್ಟೇಗೌಡ, ಕಾರ್ಯಧರ್ಶಿ ಮಲ್ಲಿಕಾರ್ಜುನ್, ಜಿಲ್ಲಾಧ್ಯಕ್ಷರಂಗಸ್ವಾಮಿ, ಮಹಿಳಾ ಅಧ್ಯಕ್ಷೆ ಸುನಿತಾಮೂರ್ತಿ, ಮಧುಗಿರಿ ಶಿವಕುಮಾರ್, ಶಿರಾ ಕಿಶೋರ್, ಕುಣಿಗಲ್ ಮಂಜುನಾಥ್, ಚಿಕ್ಕನಾಯಕನಹಳ್ಳಿ ಪ್ರಕಾಶ್, ಕೊರಟಗೆರೆ ನಗರಧ್ಯಕ್ಷ ಸೈಪುಲ್ಲಾ ಸೇರಿದಂತೆ ನೂರಾರು ಜನಕರವೇಕಾರ್ಯಕರ್ತರುಇದ್ದರು.


**ಕರ್ನಾಟಕ ಬಂದ್‌ಗೆ ನನ್ನ ಬೆಂಬಲವಿಲ್ಲ.**

ಕರ್ನಾಟಕದಎಲ್ಲಾ ಸಮಸ್ಯೆಗಳಿಗೆ ಬಂದ್ ಮಾಡೋದೇ ಪರಿಹಾರವಲ್ಲ. ಮಾರ್ಚ್ ಮಾಹೆಯಲ್ಲಿ ಮಕ್ಕಳಿಗೆ ಪರೀಕ್ಷೆಗಳು ನಡೆಯಲಿವೆ. ಬಂದ್‌ಗೆಯಾವಾಗ ಬೇಕಾದ್ರುಕರೆಕೊಡಬಹುದು. ಆದರೇ ಮಕ್ಕಳ ಭವಿಷ್ಯದ ಪರೀಕ್ಷೆಯನ್ನು ಮುಂದೂಡುವಆದೇಶಕ್ಕೆಅರ್ಥವೇಇಲ್ಲ. ಆದ್ದರಿಂದ ಮಾ.23ರಂದು ಕರೆ ನೀಡಿರುವ ಬಂದ್‌ಗೆ ನನ್ನ ಬೆಂಬಲವಿಲ್ಲ ಎಂದುಕರವೇರಾಜ್ಯಾಧ್ಯಕ್ಷ ತಿಳಿಸಿದರು.

ರಾಜಕೀಯ ನಾಯಕರಒತ್ತಡದಿಂದ ಬಸ್ ಕಂಡಕ್ಟರ್ ಮೇಲೆ ಪ್ರಕರಣದಾಖಲು ಮಾಡ್ತಾರೇ. ನಾನು ಚೇನ್ನಮ್ಮ ವಿಗ್ರಹಕ್ಕೆ ಮಾಲಾರ್ಪಣೆ ಮಾಡುವುದರ ಒಳಗಡೆ ಪೊಲೀಸರುಕ್ರಮಕೈಗೊಂಡ್ರು.

**ಕರವೇಯಿಂದ ಬೃಹತ್ ಪ್ರತಿಭಟನೆ..**

ಸರಕಾರಿ ಬಸ್ ನಿಲ್ದಾಣದಿಂದ ಪಪಂಯ ಮುಂಭಾಗದ ವರೇಗೆಕರವೇರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ನೇತೃತ್ವದಲ್ಲಿ ನೂರಾರು ಕರವೇ ಕಾರ್ಯಕರ್ತರು ಕನ್ನಡ ಧ್ವಜಸ್ತಂಭಾ ತೆರವಿನ ವಿರುದ್ದ ದಿಕ್ಕಾರಕೂಗಿದರು. ವೇದಿಕೆ ಕಾರ್ಯಕ್ರಮ ಮುಗಿದ ನಂತರ ತಹಶೀಲ್ದಾರ್ ಮಂಜುನಾಥ್‌ಗೆಕರವೇಯಿಂದತೆರವು ಮಾಡಿದ ಸ್ಥಳದಲ್ಲೇ ಮತ್ತೇಕನ್ನಡಧ್ವಜಸ್ತಂಭ ನಿರ್ಮಾಣಕ್ಕೆ ಮನವಿ ಸಲ್ಲಿಸಿದರು.




**56ಅಡಿ ಎತ್ತರದ ಕನ್ನಡ ಧ್ವಜಸ್ತಂಭನಾ ನಾಕಬಂಧಿ ಹಾಕಿ ಮಧ್ಯರಾತ್ರಿತೆರವು ಮಾಡಿದ್ರು. ಅಧಿಕಾರಿಗಳಿಗೆ ನಾನು ತೆರವಿಗೆ ಮಾಡಿರುವ ಆದೇಶ ಪ್ರತಿ ಕೇಳಿದ್ರೇ ಇಲ್ಲಿವರ್ಗೆ ನೀಡಿಲ್ಲ. ನನ್ನ ಹೋರಾಟದ ಗುರುಗಳಾದ ನಾರಾಯಣ ಗೌಡ್ರು ನನಗೇ ನ್ಯಾಯ ಕೋಡಿಸ್ತಾರೇ. ಕರ್ನಾಟಕ ರಾಜ್ಯ ಮತ್ತು ತುಮಕೂರು ಜಿಲ್ಲೆಯ ಎಲ್ಲಾ ಕರವೇ ಕಾರ್ಯಕರ್ತರಿಗೆ ತುಂಬು ಹೃದಯದ ಧನ್ಯವಾದ.**

**ನಟರಾಜ್.ಕೆ.ಎನ್.**
। ಕರವೇ ಅಧ್ಯಕ್ಷ. ಕೊರಟಗೆರೆ

# ಕವಿಪ್ರನಿನಿ ನೌಕರರ ಸಂಘದ ನಿರ್ದೇಶಕರ ಚುನಾವಣೆ ಶ್ರೀನಿವಾಸ್ ತಂಡದ 16 ಅಭ್ಯರ್ಥಿಗಳು ಜಯ



**ಚಿಕ್ಕಬಳ್ಳಾಪುರ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ಚಿಕ್ಕಬಳ್ಳಾಪುರ, ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಘಂಟೆ ವರೆಗೆ ಕವಿಪ್ರನಿನಿ ನೌಕರರ ಸಂಘದ ಸ್ಥಳೀಯ ಕಚೇರಿಯಲ್ಲಿ ನಡೆಯಿತು. ಒಟ್ಟು 17 ನಿರ್ದೇಶಕರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಕವಿಪ್ರನಿ ನೌಕರರ ಸಂಘ ಬೆಸ್ಕಾಂ ಉಪಾಧ್ಯಕ್ಷ ಶ್ರೀನಿವಾಸ್ ರವರ ತಂಡದ 16 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಇನ್ನೊಂದು ತಂಡದಲ್ಲಿ ಒಂದು ಅಭ್ಯರ್ಥಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಎನ್.ವನಿತ ಕಾರ್ಯನಿರ್ವಹಿಸಿದ್ದು ನೂತನ ಆಯ್ಕೆಯಾದ 17 ನಿರ್ದೇಶಕರ ಹೆಸರು ಘೋಷಣೆ ಮಾಡಿದರು.

ಫಲಿತಾಂಶ ಘೋಷಣೆ ನಂತರ ನೂತನ ನಿರ್ದೇಶಕರಿಗೆ ಶುಭಾಶಯಗಳ ಮಹಾಪೂರ ಹರಿದು ಬಂದಿದ್ದು ಅಭಿಮಾನಿಗಳು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಈ ಚುನಾವಣೆಗೆ ಪಿಎಸ್‌ಐ ಗುಣವತಿ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಈ ವೇಳೆ ಮಾತನಾಡಿದ ಕವಿಪ್ರನಿನಿ ನೌಕರರ ಸಂಘ ಬೆಸ್ಕಾಂ ಉಪಾಧ್ಯಕ್ಷ ಶ್ರೀನಿವಾಸ್ ನಮ್ಮ ತಂಡದ 17 ಅಭ್ಯರ್ಥಿಗಳ ಪೈಕಿ 16 ಅಭ್ಯರ್ಥಿಗಳು ಆಯ್ಕೆಯಾಗಿದ್ದು ನಮ್ಮ ಗೆಲುವಿಗೆ ಸಹಕರಿಸಿದ ಎಲ್ಲಾ ಮತದಾರರಿಗೆ ಹಾಗೂ ಹಿರಿಯ ಮುಖಂಡರಿಗೆ ಸಂಘದ ಸದಸ್ಯರಿಗೆ ಧನ್ಯವಾದಗಳು ತಿಳಿಸುತ್ತೇನೆ ಎಂದು ಹೇಳಿದರು.

68 ವರ್ಷಗಳ ಇತಿಹಾಸ ಹೊಂದಿರುವ ಪತ್ತಿನ ಸಹಕಾರ ಸಂಘ ಇದಾಗಿದ್ದು ಸಂಘದ ಸದಸ್ಯರ ಅಬಿವೃದ್ಧಿ ಸಂಭಂದಪಟ್ಟಾಗಿ ಸಂಘ ಕಾರ್ಯೋನ್ಮುಖವಾಗಿದೆ,ಸದಸ್ಯರ ಏಳಿಗೆಗಾಗಿ ನಾವು ಸದಾ ಮುಂದಿದ್ದು ಅವರಿಗೆ ಉಪಯೋಗವಾಗುವಂತಹ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಹಾಗೂ ಹಲವಾರು ಕಾರ್ಯಕ್ರಮಗಳ ಮೂಲಕ ಸಂಘ ಸದಸ್ಯರಿಗಾಗಿ ಶ್ರಮಿಸುತ್ತಿದ್ದು ಸಹಕಾರ ಸಂಘದಿಂದ ಕಾಲಕಾಲಕ್ಕೆ ಸಾಲ ನೀಡಲಾಗುತ್ತಿದ್ದು, ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಿಲಾಗುತ್ತಿದೆಂದರು. ಇನ್ನು ನೂತನ ಆಡಳಿತ ಮಂಡಳಿ ನಿರ್ದೇಶಕರು ಅಬಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಿದ್ದಾರೆ ಎಂದು ತಿಳಿಸಿದರು.

ಈ ಸಂಧರ್ಭದಲ್ಲಿ ಮೂರ್ತಿ ಒಳಗೊಂದಂತೆ ಮತ್ತಿತರರು ಇದ್ದರು.

ಕವಿಪ್ರನಿನಿ ನೂತನ ನಿರ್ದೇಶಕರಾಗಿ ಆಯ್ಕೆ!! ಕೆ.ಶ್ರೀನಿವಾಸ್, ಆರೋಗ್ಯಸ್ವಾಮಿ, ವಿಶ್ವನಾಥ,ವಿ.ಮದನ್ ಕುಮಾರ್, ಬಾಲಸುಬ್ರಹ್ಮಣ್ಯ, ಅಬ್ದುಲ್ ಖುದ್ದುಸ್, ಎನ್.ಸುಕುಮಾರ್, ನರಸಿಂಹರೆಡ್ಡಿ,ಆರ್.ಮಂಜುನಾಥ್,ಎ.ಎನ್. ಶ್ರೀನಿವಾಸ್,ಕೆ.ಎ.ಭಾರತಿ, ಹೆಚ್.ಆರ್.ರುದ್ರೇಶ್, ರವಿ ಸಂಗಪ್ಪ, ಮಾಲಿಕ ಬಾನು, ಗೋವರ್ಧನ್ ಸಾಗರ್,ಶ್ರೀನಿವಾಸ್,ಬಿ.ಬಸವರಾಜು ಹಾಜರಿದ್ದರು.

# ಇಂಡಿಯಲ್ಲಿ ಗುರು ವಂದನೆ, ಸ್ನೇಹಿತರ ಸಮಾಗಮ, ಅವಿಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾದ ಜೆಆರ್‌ಜಿ ಕಾಲೇಜ್!

**ಇಂಡಿ:** ಸ್ನೇಹಿತರ ಸಮಾಗಮ, ಹಿರಿಯ ವಿದ್ಯಾರ್ಥಿಗಳಿಂದ ಗೌರವ, ಗುರುವಿಗೆ ಭಾವ ಪೂರ್ಣ ನಮನ, ಹಳೆಯ ನೆನಪುಗಳು ಹಾಗೂ ಶೈಕ್ಷಣಿಕ ಜೀವನದ ಅವಿಸ್ಮರಣೀಯ ಕ್ಷಣಗಳನ್ನು ಮೆಲಕು ಹಾಕುವ ಅಪರೂಪದ ಕಾರ್ಯಕ್ರಮವೊಂದಕ್ಕೆ ಇಂಡಿ ನಗರದ ಜೆಆರ್‌ಜಿ ಕಲಾ ಹಾಗೂ ವೈ.ಎ. ಪಾಟೀಲ ವಾಣಿಜ್ಯ ಮತ್ತು ಎಂ.ಎಫ್. ಜೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯ ಸಾಕ್ಷಿಯಾಯಿತು.

ಕಾಲೇಜಿನ 2004–07ನೇ ಸಾಲಿನ ವಿದ್ಯಾರ್ಥಿಗಳು ಭಾನುವಾರ ಹಮ್ಮಿಕೊಂಡಿದ್ದ 'ಗುರು ವಂದನಾ ಹಾಗೂ ಹಿರಿಯ ವಿದ್ಯಾರ್ಥಿಗಳ ಪುನರ್ಮಿಲನ' ಕಾರ್ಯಕ್ರಮ ಅಪರೂಪದಲ್ಲಿಯೇ ಅಪರೂಪ ಎನ್ನುವಂತೆ ನೆರವೇರಿತು.

ರಾಜ್ಯದ ನಾನಾ ಭಾಗಗಳಿಂದ ಬಂದ ನೂರಾರು ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ ಭಾವಪೂರ್ಣ ನಮನ ಸಲ್ಲಿಸುತ್ತಿದ್ದರೆ ನೆರೆದವರ ಕಣ್ಣಾಲೆಗಳು ತೇವಗೊಂಡವು. ನಿವೃತ್ತಿಯಾದರೂ ಸ್ಮರಿಸಿ ಗೌರವಿಸಿದ ವಿದ್ಯಾರ್ಥಿಗಳ ಪ್ರಿತ್ಯಾಧಾರಗಳಿಗೆ ಶಿಕ್ಷಕರು ಮನಸೋತರು. ಸಾರ್ಥಕ ಭಾವ ತುಂಬಿಕೊಂಡರು.

ಸಾನ್ನಿಧ್ಯ ವಹಿಸಿದ್ದ ತಡವಲಗಾ ಹಿರೇಮಠದ ಷಬ್ರ ಅಭಿನವ ರಾಚೋಟೇಶ್ವರ ಶಿವಾಚಾರ್ಯರು, ಹೆತ್ತ ತಂದೆ–ತಾಯಿ ಹಾಗೂ ಗುರುವಿನ ಋಣ ತೀರಿಸಲಾಗದಂಥದ್ದು. ಬದುಕು ಶ್ರೀಮಂತಗೊಳಿಸಿದ ಶಿಕ್ಷಕರನ್ನು ಸ್ಮರಿಸುವುದು ವಿದ್ಯಾರ್ಥಿಗಳಾದವರ ಭಾಗ್ಯ ಮತ್ತು ಪುಣ್ಯದ ಕಾರ್ಯ ಎಂದರು.



ಸಂಸ್ಥೆಯ ಉಪಾಧ್ಯಕ್ಷ ನೀಲಕಂಠಗೌಡ ಎಸ್.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಡಾ.ಎಸ್.ಬಿ. ಜಾಧವ ಮಾತನಾಡಿದರು. ಶಿಕ್ಷಕರಾದ ಡಿ.ಎ. ಢವಳಗಿಮಠ, ವಿ.ಎಚ್. ಬಿರಾದಾರ, ಎಸ್.ಎಸ್. ಬಿರಾದಾರ, ಎಂ.ಸಿ. ಮಂಗಳೂರು, ಆರ್.ವಿ. ದೇಶಪಾಂಡೆ, ಎನ್.ವಿ. ಹಂಜಗಿ, ಎಸ್.ಎಸ್. ಪಾಟೀಲ, ಎಸ್.ಜಿ. ಬೆಳಕಿಂಡಿ, ವಿ.ಎಸ್. ಲಾಳಸಂಗಿ, ಸಿ.ಎ. ಬಿರಾದಾರ ಮುಂತಾದವರನ್ನು ಸನ್ಮಾನಿಸಿ ಗೌರವಿಸಲಾಯಿತು.

ನೀಲಕಂಠಗೌಡ ಪಾಟೀಲ, ಪ್ರವೀಣ ಕುಲಕರ್ಣಿ, ಬಿರೇಶ ಡೋಣಿ, ಗುಂಡುಗೌಡ ಬಿರಾದಾರ, ಹಳೆಯ ವಿದ್ಯಾರ್ಥಿಗಳಾದ ಗುಂಡುಗೌಡ ಪಾಟೀಲ, ಕುಮಾರಗೌಡ ಪಾಟೀಲ, ಟೋಪನಗೌಡ ಪಾಟೀಲ, ಸಿದ್ದು ತಮಶೆಟ್ಟಿ, ಎಂ.ಎಸ್. ಬಿರಾದಾರ, ಉಮೇಶ ಲಚ್ಯಾಣ, ಉಮೇಶ ಹೊಸಮನಿ, ಸಿದ್ದು ಬಿರಾದಾರ, ಸುರೇಶ ಪೂಜಾರಿ, ನೀಜಗುಣಿ ದಾಶ್ಯಾಳ, ಸಂತೋಷ ಜಾಧವ ಮತ್ತಿತರರಿದ್ದರು. ಜೈಲರ್ ಸಿದ್ದು ನಾವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಕಾಶ ಕರಿಗಣ್ಣವರ ಹಾಗೂ ಚಿದಾನಂದಗೌಡ ಬಿರಾದಾರ ನಿರ್ವಹಿಸಿದರು. ನಾಗನಾಥ ಕೌಲಗಿ ವಂದಿಸಿದರು.

# ನಾಗಮಂಗಲದಲ್ಲಿ ಸಾರ್ವಜನಿಕರಿಗೆ ಶೌಚಾಲಯ ಸಮಸ್ಯೆ: ಪ್ರಯಾಣಿಕರಿಗೆ, ಮಹಿಳೆಯರಿಗೆ ಕಿರಿಕಿರಿ

**ನಾಗಮಂಗಲ:** ನಾಗಮಂಗಲದಲ್ಲಿಸಾವರ್ಜನಿಕರಿಗೆಮಹಿಳೆಯರಿಗೆಪ್ರಯಾಣಿಕರಿಗೆ ಶೌಚಾಲಯದ ಇಲ್ಲದೆ ಕಿರಿಕಿರಿಯಾಗಿದ್ದು ಸಾರ್ವಜನಿಕರ ಆರೋಪವಾಗಿದೆ.


ನಾಗಮಂಗಲದ ಟಿ.ಮರಿಯಪ್ಪ ವೃತ್ತದ ಬಸ್ ತಂಗುಧಾಣದ ಹಿಂಭಾಗದಲ್ಲಿದ್ದ ಸಾರ್ವಜನಿಕ ಶೌಚಾಲಯವಿದ್ದು ಈಗ ಆ ಜಾಗವನ್ನು ಪೂರ್ಣ ತೆರವುಗೊಳಿಸಿದ್ದು ಹೊರಭಾಗ ಬರುವ ಪ್ರಯಾಣಿಕರಿಗೆ ಸಾರ್ವಜನಿಕರು ಮಹಿಳೆಯರು ಶೌಚಾಲಯವಿಲ್ಲದೆ ಕಿರಿಕಿರಿ ಹೆಚ್ಚಾಗಿದೆ.

ಸಾರ್ವಜನಿಕ ಸಮಸ್ಯೆಯ ಸಮಸ್ಯೆಗೆ ಹಾಗೂ ಹೊರ ಭಾಗದಿಂದ ಬರುವ ಪ್ರಯಾಣಿಕರು ನಾಗಮಂಗಲದ ಈ ವ್ಯವಸ್ಥೆಯನ್ನ ನೋಡಿ ತಾಲೂಕಿನ ಆಡಳಿತ ವೈಖರಿಯ ಬಗ್ಗೆ ದೂರಿನ ಸುರಿಮಳೆಯನ್ನೇ ಹೇಳುತ್ತಿರದಾಗಿದೆ. ನಾಗಮಂಗಲ ಪಟ್ಟಣದ ಈ ವ್ಯವಸ್ಥೆ ಅವ್ಯವಸ್ಥೆಯ ಆಗರವಾಗಿದ್ದು ಇಂತಹ ಸಮಸ್ಯೆಯನ್ನು ಬದಲಿ ವ್ಯವಸ್ಥೆ ಮಾಡುವ ಮುಖಾಂತರ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಶೀಘ್ರವಾಗಿ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸುವರೆಂಬುದನ್ನು ಕಾದು ನೋಡಬೇಕಾಗಿದೆ.

# ಗೋಶಾಲೆಗಳ ನಿರ್ವಹಣೆಗೆ ಬೇಕಿದೆ ನೆರವು

ಶಿರಾ:ತಾಲ್ಲೂಕಿನ ಚಿಕ್ಕ ಬಾಣಗೆರೆ ಯಲ್ಲಿಸರಕಾರಿ ಗೋ ಶಾಲೆ ಪಶುಪಾಲನೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಸೇರಿದಂತೆ ನಾನಾ ಸವಾಲುಗಳಿರುವ ಹಿನ್ನೆಲೆದುಸ್ತರವಾಗಿದ್ದು ಇದರಿಂದ ಗೋವುಗಳ ಪರಿಸ್ಥಿತಿಯೂ ಹದಗೆಡುವಂತಾಗಿದೆ.

ಹಿಂದಿನಸರ್ಕಾರದ ಮಹತ್ವದ ಯೋಜನೆಯಾದ 'ಜಿಲ್ಲೆಗೊಂದು ಗೋಶಾಲೆ' ಯೋಜನೆ ಶಿರಾ ತಾಲ್ಲೂಕಿನಲ್ಲಿ ಸಮರ್ಪಕವಾಗಿ ಜಾರಿಯಾಗಿಲ್ಲ. ಗೋಶಾಲೆ ನಿರ್ಮಾಣಗೊಂಡು ವರ್ಷಗಳು ಕಳೆದರೂ ಸಿಬ್ಬಂದಿ ವರ್ಗದ ಕೊರತೆ ಜೊತೆಗೆ ಪಶುಪಾಲನೆ ಇಲಾಖೆಯಲ್ಲಿ ವೈದ್ಯಕೀಯಸಿಬ್ಬಂದಿ ಕೊರತೆ ಸೇರಿದಂತೆ ನಾನಾ ಸವಾಲು ಗಳಿಂದ ಸೊರಗಿದೆ ಜಾನುವಾರುಗಳು ಗೋವುಗಳನ್ನು ಅಕ್ರಮವಾಗಿ ಸಾಗಾಟ ಮಾಡುವ ವೇಳೆ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸುತ್ತಾರೆ. ಅಲ್ಲಿ ವಶಪಡಿಸಿಕೊಳ್ಳಲಾದ



ಗೋವುಗಳನ್ನು ತಂದು ಪೊಲೀಸರು ಇಂಥ ಗೋಶಾಲೆಗಳಿಗೆ ಬಿಡುತ್ತಿದ್ದಾರೆ. ಆದರೆ, ವಿಶಾಲವಾದ ಪ್ರದೇಶದಲ್ಲಿ ಒಣ ಮೇವು ಬಿಟ್ಟರೆ ಬೇರೆ ಇಲ್ಲ ವಿಶಾಲ ಪ್ರದೇಶದಲ್ಲಿ ಹಸಿ ಮೇವು ಬೆಳಯ ಬಹುದು ಅದರೆ ಇಲಾಖೆಯ ಸಮನ್ವಯ ಕೊರತೆಯಿಂದಾಗಿ ಅವುಗಳ ನಿರ್ವಹಣೆ ಕಷ್ಟವಾಗುತ್ತಿದೆ.



ಗೋವುಗಳು ಆಹಾರ ಆಶ್ರಯವಿಲ್ಲದೆ ನರಳುತ್ತಿರುವ ಗೋವುಗಳನ್ನು ಸಂರಕ್ಷಿಸುವ ಸಲುವಾಗಿ ರಾಜ್ಯ ಸರ್ಕಾರ ಯೋಜನೆಯನ್ನು ಜಾರಿಗೆ ತಂದಿದೆ. ಆ ಮೂಲಕ ಸಾರ್ವಜನಿಕರು ಗೋವುಗಳನ್ನು ದತ್ತು ಪಡೆದು ಅವುಗಳನ್ನು ಅವುಗಳನ್ನು ಸಲಹುವ ಅವಕಾಶವಿರುತ್ತದೆ. ಇದಕ್ಕೆ ಯೋಜನೆಯ ಮೂಲಕ ಸರ್ಕಾರದ ಅನುದಾನವೂ ಸಿಗುತ್ತದೆ. ಆದರೆ, ಇತ್ತೀಚೆಗೆ ಅನುದಾನ ಬಾರದಂತಾಗಿ ಈ ಯೋಜನೆ ಮುಂದುವರಿಯುವುದು ದುಸ್ತರವಾಗಿದ್ದು ಇದರಿಂದ ಗೋವುಗಳ ಪರಿಸ್ಥಿತಿಯೂ ಹದಗೆಡುವಂತಾಗಿದೆ.

ಈ ಗೋ ಶಾಲೆಯಲ್ಲಿ ಒಟ್ಟು 52 ಹಸುಗಳನ್ನು ಪಾಲನೆ ಮಾಡಲಾಗುತ್ತಿದೆ. ಸರಕಾರಿ ಗೋ ಶಾಲೆ ನಿರ್ಮಾಣ ಸ್ಥಳ ಎಲ್ಲವೂ ಸರಿಯಾಗಿ ಇದೆ ಅದರೆ ಪಶುಪಾಲನೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಸೇರಿದಂತೆ ನಾನಾ ಸವಾಲುಗಳಿರುವ ಹಿನ್ನೆಲೆ ಗೋ ಶಾಲೆ ಯಲ್ಲಿ ಎಲ್ಲವೂ ಇದೆ ಅದರೆ ಅದು ಪಾಲನೆ ಯಾಗುತ್ತಿರುವ ಯಾವ ಲಕ್ಷಣಗಳು ಕಾಣುತ್ತಿಲ್ಲ.

ರಾಜ್ಯ ಸರಕಾರ ಜಿಲ್ಲೆಗೊಂದು ಗೋ ಶಾಲೆ ಈಗಾಗಲೇ ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಗೋ ಶಾಲೆಗಳ ರಕ್ಷಣೆ ಮತ್ತು ಬಲವರ್ಧನೆಗೆ ಪೂರಕ ಅನುದಾನ ನೀಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ' ಹೀಗೆ, ಅನುದಾನ ಕೊರತೆಯಿಂದ ತೊಂದರೆಗೀಡಾಗಿರುವ ಗೋಶಾಲೆಯಲ್ಲಿ ಹಸಿ ಮೇವು ಇಲ್ಲದೆ ಅನ್ನಾಹಾರದ ಕೊರತೆಯಿಂದಾಗಿ ಹಸುಗಳು ಸೊರಗುತ್ತಿವೆ. ಬೀಡಾಡಿ ದನಗಳು, ಕಸಾಯಿ ಖಾನೆಗಳಿಗೆ




ಸಾಗಾಣಿಕೆಯಾಗುವಂಥ ಗೋವುಗಳು ಅಥವಾ ರಸ್ತೆಗಳಲ್ಲಿ ಯಾವುದೇ ಆರೈಕೆಯಿಲ್ಲದೆ ಬಿದ್ದಿರುವಂಥ ಹಸುಗಳನ್ನು ಜೋಪಾನ ಮಾಡಲೆಂದೇ ರಾಜ್ಯ ಸರ್ಕಾರ ಯೋಜನೆಯನ್ನು ಜಾರಿಗೆ ತಂದಿದೆ.



ಯೋಜನೆಯ ಆರಂಭದಲ್ಲಿ ಇದಕ್ಕೆ ಪ್ರೋತ್ಸಾಹ ಧನವನ್ನು ಸರ್ಕಾರದಿಂದ ನೀಡಲಾಯಿತಾದರೂ ಆನಂತರ ಎಲ್ಲವೂ ಕೊರತೆ ಉಂಟಾಗುತ್ತದೆ. ಒಟ್ಟಾರೆ ಹೇಳುವುದಾದರೆ ಅಧಿಕಾರಿಗಳು ಸಮನ್ವಯ ಕೊರತೆ ನಿರ್ವಹಣೆಗೆ ಹಣದ ಹರಿವು ಇಲ್ಲದೆ ಸಿಬ್ಬಂದಿ ವರ್ಗದ ನಿರ್ಲಕ್ಷ್ಯ ಸೊರಗಿದೆ ಗೋ ಶಾಲೆ... ಸರಕಾರದ ಆದೇಶ ಗಳು ಮಾತ್ರ ಕಾಗದದ ಮೇಲೆ ಮತ್ತು ಬಾಯಿಯಿಂದ ಬಾಯಿಗೆ ಹರಿದಿದೆ.. ಗೋ ಶಾಲೆಯಲ್ಲಿ ಸಕಾಲಕ್ಕೆ ಮೇವು,ನೀರು ಪೂರೈಸುವುದರ ಜತೆಗೆ ಬೇಸಿಗೆಯ ಸಂದರ್ಭದಲ್ಲಿ ಮೇವು ಕೊರತೆ ಎದುರಿಸುತ್ತಿವೆ. ಜೊತೆಗೆ ರಾತ್ರಿ ವೇಳೆಯಲ್ಲಿಪಾಲಕರ ನೆರವಿಗೆ ಸಿ ಸಿ ಟಿವಿ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ. ಮುಖ್ಯವಾಗಿ ಪಶುಗಳ ಆರೋಗ್ಯ ರಕ್ಷಣೆಗಾಗಿ ವಾರಕ್ಕೊಮ್ಮೆ ಗೋ ಶಾಲೆಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಬೇಕಾದ ಪಶು ವೈದ್ಯರು ನಿರ್ಲಕ್ಷ್ಯತೋರುತ್ತಿರುವ ಆರೋಪಗಳೂ ಕೇಳಿ ಬಂದಿವೆ. ಮೂಲಸೌಲತ್ತುಗಳ ಕೊರತೆ ಎದುರಿಸುತ್ತಿರುವ ಗೋ ಶಾಲೆಗಳತ್ತ ಆಡಳಿತ ಚಿತ್ತಹರಿಸಿ ಮೂಕ ಪ್ರಾಣಿಗಳ ರೋದನೆಯನ್ನು ತೀರಿಸಬೇಕಾಗಿದೆ.

# ಚೀನಾ ಸಂಸತ್ತಿನ ವಾರ್ಷಿಕ ಅಧಿವೇಶನ ಪ್ರಾರಂಭ

ಬೀಜಿಂಗ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಟಾರೀಫ್( ಸುಂಕ) ವಿಧಿಸಿರುವ ಕ್ರಮ ಮತ್ತು ದೇಶದ ಆರ್ಥಿಕತೆ ಕುಸಿತ ತಡೆಯುವ ದೃಢವಾದ ನೀತಿಗಳ ಕುರಿತ ಚರ್ಚೆಗಳು ಇಂದಿನಿಂದ ಆರಂಭವಾಗುವ ಚೀನಾ ಸಂಸತ್ತಿನ ವಾರ್ಷಿಕ ಅಧಿವೇಶನದಲ್ಲಿ ನಡೆಯಲಿವೆ.

ಈ ವರ್ಷ ದೇಶ ಮುನ್ನಡೆಸಲು ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷ ಚೀನಾ (ಸಿಪಿಸಿ) ಅಂತಿಮಗೊಳಿಸಿರುವ ಕಾರ್ಯಸೂಚಿ ಮತ್ತು ಶಾಸನಗಳ ಕುರಿತು ಚರ್ಚೆ ನಡೆಸಲು, ರಾಷ್ಟ್ರೀಯ ಪೀಪಲ್ಸ್ ಕಾಂಗ್ರೆಸ್ (ಎನ್ಪಿಸಿ) ಮತ್ತು ಸಲಹಾ ಸಂಸ್ಥೆಯಾದ ಚೈನೀಸ್ ಪೀಪಲ್ಸ್ ಪೊಲಿಟಿಕಲ್ ಕನ್ಸಲ್ಟೇಟಿವ್ ಕಾನ್ಫರೆನ್ಸ್ (ಸಿಪಿಪಿಸಿಸಿ)ನ ಐದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಸುಮಾರು ಎರಡು ವಾರಗಳ ಕಾಲ ನಡೆಯುವ ಅಧಿವೇಶನದಲ್ಲಿ ಪಾಲ್ಗೊಳ್ಳಲಿದ್ದಾರೆ.

ರಬ್ಬರ್ ಸ್ಟಾಂಪ್ ಶಾಸಕಾಂಗ ಎಂದು ಕರೆಯಲ್ಪಡುವ ಎಪಿಸಿ, ರಾಷ್ಟ್ರೀಯ ಸಲಹಾ ಸಂಸ್ಥೆ ಸಿಪಿಪಿಸಿಸಿ ಮತ್ತು ಚೀನಾ ಸಮಾಜದ ವಿವಿಧ ಸ್ತರಗಳ ಪ್ರತಿನಿಧಿಗಳನ್ನು ಒಳಗೊಂಡಿದ್ದು, ಆಡಳಿತ ಸುಧಾರಣೆಗೆ ಶಿಫಾರಸುಗಳ ಕುರಿತು ಚರ್ಚಿಸುತ್ತದೆ ಮತ್ತು ಅಗತ್ಯ ಸಲಹೆ ನೀಡುತ್ತದೆ.

ಪ್ರಧಾನಮಂತ್ರಿ ಲಿ ಕ್ವಿಯಾಂಗ್ ಅವರು ಕಳೆದ ವರ್ಷದ ಚೀನಾದ ಸಾಧನೆಯನ್ನು ವಿವರಿಸುವ ವರದಿ ಮತ್ತು ಬಜೆಟ್ ಮಂಡಿಸುವುದರೊಂದಿಗೆ ಎನ್ಪಿಸಿ ಬುಧವಾರದ ಅಧಿವೇಶನವನ್ನು ಪ್ರಾರಂಭಿಸಲಿದೆ. ಗ್ರೇಟ್ ಹಾಲ್ ಆಫ್ ಪೀಪಲ್ನಲ್ಲಿ ಜಂಟಿ ಅಧಿವೇಶನ, ಈ ವರ್ಷ ಅಮೆರಿಕಕ್ಕೆ ಚೀನಾದ 436 ಬಿಲಿಯನ್ ಡಾಲರ್ ರಫ್ತಿನ ಮೇಲೆ ಟ್ರಂಪ್ ಅವರ ಹಾಕಿರುವ ಸುಂಕದ ಕುರಿತು ಚರ್ಚೆ



ನಡೆಯಲಿದೆ. ಚೀನಾದ ಸರಕುಗಳ ಮೇಲೆ ಶೇ.10 ರಷ್ಟು ಹೊಸ ಸುಂಕಗಳು ಮಂಗಳವಾರ ಅಂದರೆ ಎನ್ಪಿಸಿ ಸಂಸತ್ ಅಧಿವೇಶನ ಪ್ರಾರಂಭವಾಗುವ ದಿನದಿಂದಲೇ ಜಾರಿಗೆ ಬರಲಿವೆ ಎಂದು ಟ್ರಂಪ್ ಹೇಳಿದ್ದಾರೆ. ಟ್ರಂಪ್ ತಮ್ಮ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡ ನಂತರ ಚೀನಾದ ಸರಕುಗಳ ಮೇಲೆ ಈಗಾಗಲೇ ಶೇ.10 ರಷ್ಟು ಟಾರೀಫ್ ವಿಧಿಸಿದ್ದಾರೆ.

ಯುಎಸ್ ಜನತೆಯ ವ್ಯಾಪಕ ಮಾದಕ ವ್ಯಸನಕ್ಕೆ ಕಾರಣವಾಗಿದ್ದ ಓಪಿಯಾಡ್ ಔಷಧ ಫೆಂಟಾನಿಲ್ ಬಗ್ಗೆ ಕಳವಳ ವ್ಯಕ್ತಪಡಿಸಿದ ಟ್ರಂಪ್, ತಮ್ಮ ಚುನಾವಣಾ ಪ್ರಚಾರದ ವೇಳೆ ಚೀನಾದ ಸರಕುಗಳ ಮೇಲೆ ಶೇ.60 ರಷ್ಟು ಸುಂಕ ವಿಧಿಸುವುದಾಗಿ ಎಚ್ಚರಿಕೆ ನೀಡಿದ್ದರು.

ಯುಎಸ್ ಹೊರತುಪಡಿಸಿ ಚೀನಾದ ಮತ್ತೊಂದು ಪ್ರಮುಖ ರಫ್ತು ಮಾರುಕಟ್ಟೆಯಾದ ಯುರೋಪಿಯನ್ ಯೂನಿಯನ್, ಚೀನಾದ ಇ-ವಾಹನಗಳು ಮತ್ತು ಬ್ಯಾಟರಿಗಳ ಮೇಲಿನ ಸುಂಕವನ್ನು ಹೆಚ್ಚಿಸಿದೆ. ಈ ಹಿನ್ನೆಲೆ ಬೀಜಿಂಗ್ ತನ್ನ ವಿದೇಶಿ ವ್ಯಾಪಾರವನ್ನು ಪುನರುಜ್ಜೀವನಗೊಳಿಸುವತ್ತ ಗಮನ ಹರಿಸುತ್ತಿದೆ.

ಪ್ರಧಾನಮಂತ್ರಿ ಲಿ ಕ್ವಿಯಾಂಗ್ ಅವರ ವರದಿಯು, ಅಮೆರಿಕದ ನಂತರ ರಕ್ಷಣೆಗೆ ಹೆಚ್ಚು ವೆಚ್ಚ ಮಾಡುವ ಎರಡನೇ ಅತಿದೊಡ್ಡ ದೇಶ ಎಂದು ಬಹಿರಂಗಪಡಿಸಲಿದೆ. ಕಳೆದ ವರ್ಷ, ಚೀನಾ ತನ್ನ ರಕ್ಷಣಾ ಬಜೆಟ್ ಅನ್ನು ಶೇ.7.2 ರಷ್ಟು ಹೆಚ್ಚಿಸಿದೆ. ಅಂದರೆ 232 ಬಿಲಿಯನ್ ಡಾಲರ್ (1.67 ಟ್ರಿಲಿಯನ್ ಯುವಾನ್). ಇದು ಭಾರತಕ್ಕಿಂತ ಮೂರು ಪಟ್ಟು ಹೆಚ್ಚು. ಅಮೆರಿಕದ ಮಿಲಿಟರಿಯನ್ನು ಮತ್ತಷ್ಟು ಬಲಪಡಿಸುವ ಕುರಿತು ಟ್ರಂಪ್ ಹೇಳಿಕೆಯ ನಡುವೆ, ಬೀಜಿಂಗ್ ಈ ವರ್ಷವೂ ತನ್ನ ರಕ್ಷಣಾ ಬಜೆಟ್ ಹೆಚ್ಚಿಸಬಹುದು ಎಂಬ ಊಹಾಪೋಹಗಳು ಹರಿದಾಡುತ್ತಿವೆ.

ಸಂಸತ್ತಿನ ಅಧಿವೇಶನಕ್ಕೂ ಮುನ್ನ, ಚೀನಾದ ಅತ್ಯಂತ ಶ್ರೀಮಂತ ವ್ಯಕ್ತಿಗಳು ಶ್ರೀಮಂತರಾಗುತ್ತಲೇ ಇದ್ದಾರೆ. ದೇಶದಲ್ಲಿ ಆರ್ಥಿಕ ಅಸಮಾನತೆಗಳು ಹೆಚ್ಚಾಗುತ್ತಿವೆ ಎಂದು ವರದಿಯೊಂದು ಎಚ್ಚರಿಸಿದೆ. ಚೀನಾದ 5.12 ಮಿಲಿಯನ್ ಕುಟುಂಬಗಳ ಒಟ್ಟು ಆಸ್ತಿ ಆರು ಮಿಲಿಯನ್ ಯುವಾನ್ (824,000 ಯುಎಸ್ ಡಾಲರ್) ಆಗಿದೆ. ಇದು 2024ರಲ್ಲಿದ್ದ ಆಸ್ತಿಗಿಂತ ಹೆಚ್ಚು ಎಂದು ಹುರುನ್ ರಿಸರ್ಚ್ ಇನ್ಸ್ಟಿಟ್ಯೂಟ್ ಪ್ರಕಟಿಸಿದ ವರದಿ ತಿಳಿಸಿದೆ.

ಇನ್ನು ಕುಸಿಯುತ್ತಿರುವ ಆರ್ಥಿಕತೆಗೆ ಬಲ ತುಂಬಲು ಅಧ್ಯಕ್ಷ ಕ್ಸಿ ಜಿನ್ ಪಿಂಗ್, ಫೆ.17 ರಂದು ಇ-ಕಾಮರ್ಸ್ ದೈತ್ಯ ಅಲಿಬಾಬಾ ಸಂಸ್ಥಾಪಕ ಜ್ಯಾಕ್ ಮಾ ಸೇರಿದಂತೆ ದೇಶದ ಕಾರ್ಪೊರೇಟ್ ದಿಗ್ಗಜರ ಜೊತೆಗೆ ಸಭೆ ನಡೆಸಿದ್ದರು.

# ಮಣಿಪುರ: ಸರ್ಕಾರಕ್ಕೆ ಶಸ್ತ್ರಾಸ್ತ್ರ ಮರಳಿಸಿದ ಸಾರ್ವಜನಿಕರು

ಇಂಫಾಲ: ಕಲಹಪೀಡಿತ ಮಣಿಪುರದಲ್ಲಿ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸುವಂತೆ ನೀಡಲಾದ ಸೂಚನೆಯ ಬೆನ್ನಲ್ಲೇ ಇದೀಗ ಐದು ಜಿಲ್ಲೆಗಳಲ್ಲಿ ಸಾರ್ವಜನಿಕರು ತಮ್ಮ ಬಳಿ ಇದ್ದ 33 ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ಚುರಾಚಂದ್ಪುರ, ತೌಬಾಲ್, ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ ಮತ್ತು ಬಿಷ್ಣುಪುರ ಜಿಲ್ಲೆಗಳಲ್ಲಿ ಶಸ್ತ್ರಾಸ್ತ್ರಗಳನ್ನು ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಣಿಪುರ ಹಿಂಸಾಚಾರ ಭುಗಿಲೆದ್ದ ಬಳಿಕ ಪೊಲೀಸ್ ಠಾಣೆಗಳಿಂದ ಲೂಟಿ ಮಾಡಿದ್ದ ಅಕ್ರಮ ಶಸ್ತ್ರಾಸ್ತ್ರಗಳ ಶರಣಾಗತಿ ಗಡುವನ್ನು ಇತ್ತೀಚೆಗೆ ಮಾರ್ಚ್ 6ರವರೆಗೆ ರಾಜ್ಯಪಾಲ



ಅಜಯ್ ಕುಮಾರ್ ಭಲ್ಲಾ ವಿಸ್ತರಿಸಿದ್ದರು. ಇದಕ್ಕೂ ಮುನ್ನ ಫೆಬ್ರವರಿ 20ರಂದು ಭಲ್ಲಾ ಅವರು ಲೂಟಿ ಮಾಡಿದ ಮತ್ತು ಅಕ್ರಮವಾಗಿ ಹೊಂದಿರುವ ಶಸ್ತ್ರಾಸ್ತ್ರಗಳನ್ನು ಏಳು ದಿನಗಳೊಳಗೆ ಸ್ವಯಂಪ್ರೇರಿತವಾಗಿ ಮರಳಿಸುವಂತೆ ತಿಳಿಸಿದ್ದು, ಯಾವುದೇ ಕ್ರಮಕ್ಕೆ ಮುಂದಾಗುವುದಿಲ್ಲ ಎಂದು ಭರವಸೆ ನೀಡಿದ್ದರು.

ಮುಖ್ಯ ಕಾರ್ಯದರ್ಶಿ ಪಿ.ಕೆ.ಸಿಂಗ್ ಕೂಡ ಸಾರ್ವಜನಿಕರು ಸ್ವಯಂಪ್ರೇರಣೆಯಿಂದ ಬಂದೂಕು, ಶಸ್ತ್ರಾಸ್ತ್ರಗಳನ್ನು ಮರಳಿಸಲು ಏಳು ದಿನದ ಗಡುವು ಸಾಕು ಎಂದಿದ್ದರು. ಮೇ 2023ರಿಂದ ಇಂಫಾಲ್ ಕಣಿವೆ ಮೂಲದ ಮೈತಿ ಮತ್ತು ಕುಕಿ ಸಮುದಾಯಗಳ ನಡುವೆ ಉಂಟಾದ ಜನಾಂಗೀಯ ಹಿಂಸಾಚಾರದಲ್ಲಿ 250ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದು, ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ.ರಾಜಕೀಯ ಅನಿಶ್ಚಿತತೆಯಿಂದ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದಾದ ನಂತರ ಕೇಂದ್ರ ಸರ್ಕಾರ ಫೆಬ್ರವರಿ 13ರಂದು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿತ್ತು.

# ಛತ್ತೀಸ್ಗಢದಲ್ಲಿ ಗುಂಡಿನ ಸದ್ದು: ನಕ್ಸಲರು, ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ



ಧಮ್ತಾರಿ: ಖಲ್ಲಾರಿ ಪೊಲೀಸ್ ಠಾಣೆ ವ್ಯಾಪ್ತಿಯ ಮಂದಗಿರಿ ಗ್ರಾಮದ ಅರಣ್ಯದಲ್ಲಿ ನಕ್ಸಲರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ನಡೆದಿದೆ. ಧಮ್ತಾರಿ ಪೊಲೀಸರು ಮತ್ತು ಡಿಆರ್ಜಿ ತಂಡ ಜಂಟಿ ಕಾರ್ಯಾಚರಣೆ ನಡೆಸಿ ನಕ್ಸಲೀಯರ ಶಿಬಿರಗಳನ್ನು ಧ್ವಂಸಗೊಳಿಸಿದ್ದಾರೆ.

ಧಮ್ತಾರಿ ಎಸ್ಪಿ ಆಂಜನೇಯ ಅವರು ಘಟನೆಯನ್ನು ದೃಢಪಡಿಸಿದ್ದಾರೆ. "ಧಮ್ತಾರಿ ಜಿಲ್ಲೆಯಲ್ಲಿ ಮಾವೋವಾದಿ ವಿರೋಧಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಖಲ್ಲಾರಿ ಪೊಲೀಸ್ ಠಾಣೆ ವ್ಯಾಪ್ತಿಯ ಮಂಡಗಿರಿ ಗ್ರಾಮದ ಅರಣ್ಯದಲ್ಲಿ ಮಾವೋವಾದಿಗಳು ಬೀಡು ಬಿಟ್ಟಿರುವ ಬಗ್ಗೆ ಇಂದು ಮಾಹಿತಿ ದೊರೆತಿದೆ.

ನಂತರ, ಡಿಆರ್ಜಿ ಮತ್ತು ಜಿಲ್ಲಾ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ತೆರಳಿದರು. ಭದ್ರತಾ ಸಿಬ್ಬಂದಿ ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿ ಮಾವೋವಾದಿಗಳು ಗುಂಡು ಹಾರಿಸಲು ಪ್ರಾರಂಭಿಸಿದರು. ಇದಕ್ಕೆ ಸಿಬ್ಬಂದಿಗಳು ಮಾವೋವಾದಿಗಳಿಗೆ ಪ್ರತ್ಯುತ್ತರ ನೀಡಿದ್ದಾರೆ.

ಭದ್ರತಾ ಸಿಬ್ಬಂದಿಯ ಹಾರಿಸಿದ ಗುಂಡುಗಳು ತಾಗಿ ಎರಡ್ಮೂರು ನಕ್ಸಲರು ಗಾಯಗೊಂಡಿರುವ ಶಂಕೆ ಇದೆ. ಎನ್ಕೌಂಟರ್ ಬಳಿಕ ಈ ಪ್ರದೇಶದಲ್ಲಿ ತೀವ್ರ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಪೊಲೀಸರಿಗೆ ಮಾಹಿತಿ ನೀಡುತ್ತಿದ್ದಾರೆ ಎಂಬ ಅನುಮಾನದಿಂದ ನಕ್ಸಲರು ಇಬ್ಬರು ನಾಗರಿಕರನ್ನು ಕೊಲೆ ಮಾಡಿದ ಘಟನೆ ಛತ್ತೀಸ್ಗಢದ ದಂತೇವಾಡದಲ್ಲಿ ಇತ್ತೀಚೆಗೆ ನಡೆದಿತ್ತು. ಬಮನ್ ಕಶ್ಯಪ್ (29) ಮತ್ತು ಅನಿಸ್ ರಾಮ್ ಪೊಯಮ್ (38) ಕೊಲೆಯಾದವರು. ಇವರು ಬರ್ಸೂರ್ ಪೊಲೀಸ್ ಠಾಣಾ ವ್ಯಾಪ್ತಿಯ ತೊಡ್ಮ ಗ್ರಾಮದವರು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದರು.

ಈ ಕುರಿತು ಮಾಹಿತಿ ಸಿಕ್ಕ ಬಳಿಕ ಪೊಲೀಸ್ ತಂಡ ದಂತೇವಾಡ - ಬಿಜಾಪುರ್ ಗ್ರಾಮದ ಗಡಿಯಲ್ಲಿ ದಟ್ಟ ಅರಣ್ಯದಲ್ಲಿರುವ ಗ್ರಾಮಕ್ಕೆ ಆಗಮಿಸಿತ್ತು. ಸಾವನ್ನಪ್ಪಿದ ಕಶ್ಯಪ್ ಈ ಪ್ರದೇಶದಲ್ಲಿ ಶಿಕ್ಷಾ ದೂತ್ (ತಾತ್ಕಲಿಕ ಶಿಕ್ಷಕ)ಆಗಿ ಸರ್ಕಾರಿ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಮಾವೋವಾದಿಗಳ ಪೂರ್ವ ಬಸ್ತಾರ್ ವಿಭಾಗದ ಆಮದ್ಯೆ ಪ್ರದೇಶ ಸಮಿತಿಯ ಕರಪತ್ರಗಳು ಸ್ಥಳದಲ್ಲಿ ಪತ್ತೆಯಾಗಿತ್ತು. ಅದರಲ್ಲಿ ಇವರು ಪೊಲೀಸ್ ಮಾಹಿತಿದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ನಕ್ಸಲರು ಬರೆದಿದ್ದರು.


## ಪೊಲೀಸರ ಮುಂದೆ ನಕ್ಸಲ್ ಶರಣು

ಛತ್ತೀಸ್‌ಗಢ: 8 ಲಕ್ಷ ರೂಪಾಯಿ ಬಹುಮಾನ ಘೋಷಿತ, ಮೋಸ್ಟ್ ವಾಂಟೆಡ್ ನಕ್ಸಲ್ ದಿನೇಶ್ ಮೊಡಿಯಂ ತನ್ನ ಹೆಂಡತಿ ಮತ್ತು ಮಗುವಿನೊಂದಿಗೆ ಬಿಜಾಪುರ್ ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದಾನೆ.

ಹಲವು ಪ್ರಕರಣದಲ್ಲಿ ಬೇಕಾಗಿದ್ದ ಈತ ಬಸ್ತಾರ್‌ನಲ್ಲಿ ನಕ್ಸಲೀಯರ ದೊಡ್ಡ ನಾಯಕ, ಗಂಗಾಳೂರು ಏರಿಯಾ ಸಮಿತಿ ಕಾರ್ಯದರ್ಶಿ ಹಾಗೂ ಪಶ್ಚಿಮ ಬಸ್ತಾರ್ ವಿಭಾಗದ ಡಿವಿಸಿಎಂ ಆಗಿದ್ದ. ಈತನಿಗಾಗಿ ಪೊಲೀಸರು ಹಲವು ದಿನಗಳಿಂದ ಹುಡುಕಾಟ ನಡೆಸಿದ್ದರು.

100ಕ್ಕೂ ಹೆಚ್ಚು ಕೊಲೆಯಲ್ಲಿ ಭಾಗಿಯಾಗಿ: ದಿನೇಶ್ ಮೊಡಿಯಂ ಗಂಗಾಳೂರು ಪ್ರದೇಶದಲ್ಲಿ ತೀವ್ರ ತರಹದ ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದು, ಈತ 100ಕ್ಕೂ ಹೆಚ್ಚು ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿದ್ದಾನೆ. ಈ ಕೊಲೆ ಹೊರತಾಗಿ ಈತ ಅನೇಕ ನಕ್ಸಲ್ ಚಟುವಟಿಕೆಗಳಲ್ಲೂ ಭಾಗಿಯಾಗಿದ್ದ ಎಂದು ಬಿಜಾಪುರ ಎಸ್‌ಪಿ ಜಿತೇಂದ್ರ ಯಾದವ್ ಮಾಹಿತಿ ನೀಡಿದ್ದಾರೆ.

ದಂಪತಿಗಳ ಶರಣಾಗತಿ : ಡಿವಿಸಿಎಂ ದಿನೇಶ್ ಮೊಡಿಯಂ ಮತ್ತು ಈತನ ACM ಪತ್ನಿ ಕಲಾ ತಾತಿ ಕೂಡ ಗಂಗಾಳೂರು ಪ್ರದೇಶ ಸಮಿತಿ ಸದಸ್ಯೆಯಾಗಿದ್ದು, ನಕ್ಸಲ್ ಸಂಘಟನೆಯೊಂದಿಗೆ ಹಲವು ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಸರ್ಕಾರದ ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ನೀತಿಯಿಂದ ಪ್ರೇರಣೆಗೊಂಡು ಇವರು ಶರಣಾಗಿದ್ದಾರೆ. ಈ ದಂಪತಿ ವಿರುದ್ಧ ಕಾನೂನಾತ್ಮಕ ಕ್ರಮವನ್ನು ಕೈಗೊಳ್ಳಲಾಗುವುದು. ಪ್ರಮುಖವಾಗಿ ದಿನೇಶ್ ಮೊಡಿಯಂನನ್ನು ಪ್ರಮುಖ ಪ್ರಕರಣದಲ್ಲಿ ವಿಚಾರಣೆ ನಡೆಸಲಾಗುವುದು. ಈ ವಿಚಾರಣೆಯಿಂದ ಅನೇಕ ವಿಚಾರಗಳು ಹೊರಬೀಳುವ ಸಾಧ್ಯತೆ ಇದೆ ಎಂದು ಎಸ್‌ಪಿ ತಿಳಿಸಿದ್ದಾರೆ. ಬಿಜಾಪುರ್‌ನಲ್ಲಿ ಫೆ.25ರಿಂದ ಫೆ.28ರ ವರೆಗೆ ಒಟ್ಟು 14 ನಕ್ಸಲರು ಶರಣಾಗಿದ್ದಾರೆ. ಪಿಎಲ್‌ಜಿಎ, ಭೈರಮಗಢ ಮತ್ತು ಗಂಗಾಳೂರು ಪ್ರದೇಶ ಸಮಿತಿ ನಕ್ಸಲರು ಶರಣಾಗಿದ್ದಾರೆ ಎಂದು ಪೊಲೀಸರು ವಿವರಿಸಿದರು.



# ನಿಫಾ: ಕೇರಳದಲ್ಲಿ ಮುಂಜಾಗ್ರತಾ ಕ್ರಮ

ಕೊಯಿಕ್ಕೋಡ್: ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಬಾವಲಿಗಳ ಮೇಲೆ ನಡೆಸಿದ ಸಂಶೋಧನೆಯ ನಂತರ ನಿಫಾ ವೈರಸ್ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಜಾರಿಗೊಳಿಸಿದೆ. ವಿಶೇಷವಾಗಿ ಬಾವಲಿಗಳ ಸಂತಾನೋತ್ಪತ್ತಿ ಅವಧಿಯಲ್ಲಿ ವೈರಸ್ ಹರಡುವುದನ್ನು ನಿಯಂತ್ರಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇರಳ ಸರ್ಕಾರಕ್ಕೆ ಸಲಹೆ ನೀಡಿದೆ.ಕೊಯಿಕ್ಕೋಡ್ನ ಉತ್ತರ ಭಾಗದಲ್ಲಿರುವ ಪೆರಂಬ್ರಾ ಮತ್ತು ಕುಟ್ಯಾಡಿ ಪ್ರದೇಶಗಳ ಸಮೀಪವಿರುವ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ಪ್ರಕರಣಗಳು ವರದಿಯಾಗಿದ್ದವು.




ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವೈರಾಲಜಿ ಅಧ್ಯಯನವು, ಈ ಪ್ರದೇಶದಲ್ಲಿ ಬಾವಲಿಗಳಲ್ಲಿ ನಿಫಾ ವೈರಸ್ ಹರಡುವಿಕೆ ವ್ಯಾಪಕವಾಗಿದೆ ಎಂದು ತೋರಿಸಿದೆ. 2024ರಲ್ಲಿ ಮಲಪ್ಪುರಂನಲ್ಲಿ ನಿಫಾ ಸೋಂಕಿನಿಂದ ಮಗು ಸಾವನ್ನಪ್ಪಿತ್ತು. ಬಾವಲಿಗಳಿಂದ ಮನುಷ್ಯರಿಗೆ ವೈರಸ್ ಹರಡುತ್ತಿದ್ದು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ವೈರಸ್ ವ್ಯಾಪಕವಾಗಿ ಹರಡಿದೆ ಎಂದು ಹೇಳುವ ಮೂಲಕ ಸಂಶೋಧಕರು ಗಮನಸೆಳೆದಿದ್ದಾರೆ. ಸಂತಾನವೃದ್ಧಿ ಋತುವಿನಲ್ಲಿ ಮಾನವನಿಗೆ ಬಾವಲಿಗಳಿಂದ ಈ ವೈರಸ್ ಹೆಚ್ಚಾಗಿ ಹರಡುತ್ತಿದೆ ಎಂದು ಹೇಳಿದ್ದಾರೆ.

ಸೋಂಕಿನ ಹರಡುವಿಕೆಯನ್ನು ನಿಯಂತ್ರಿಸಬೇಕು ಮತ್ತು ಸಮುದಾಯ ಮತ್ತು ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ವೈರಸ್ ಹರಡುವಿಕೆಯು ಹೆಚ್ಚಾಗಿ ಕುಟುಂಬಗಳು ಮತ್ತು ಆಸ್ಪತ್ರೆಗಳಲ್ಲಿ ಸಂಭವಿಸುತ್ತವೆ. ಹೀಗಾಗಿ, ಇವುಗಳನ್ನು ವೈರಸ್ ಹರಡುವಿಕೆಯ ಪ್ರಮುಖ ಕೇಂದ್ರಗಳೆಂದು ಪರಿಗಣಿಸಲಾಗಿದೆ.


ಈ ಬಗ್ಗೆ ನಿಫಾ ಸಂಶೋಧನಾ ಸಂಸ್ಥೆಯ ನೋಡಲ್ ಅಧಿಕಾರಿ ಡಾ. ಟಿ. ಎ. ಎಸ್ ಅನೀಶ್ ಮಾತನಾಡಿ, ವೈರಸ್ ಹರಡುವಿಕೆಯನ್ನು ಕಡಿಮೆ ಮಾಡಲು ಆಸ್ಪತ್ರೆಗಳು ಮುನ್ನೆಚ್ಚರಿಕೆಯ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಸೋಂಕು ಮತ್ತಷ್ಟು ಹರಡುವುದನ್ನು ತಡೆಯಲು ಆಸ್ಪತ್ರೆಗಳು ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಜಾರಿಗೊಳಿಸಬೇಕಾಗಿದೆ. ಹೆಚ್ಚಿನ ಜ್ವರ, ಕೆಮ್ಮು ಮತ್ತು ವಾಂತಿಯಂತಹ ರೋಗಲಕ್ಷಣಗಳು ಪತ್ತೆಯಾದರೆ, ವೈರಸ್ ಹರಡುವಿಕೆಯನ್ನ ತಡೆಗಟ್ಟುವ ನಿಟ್ಟಿನಲ್ಲಿ ಸೋಂಕಿತ ವ್ಯಕ್ತಿಗಳನ್ನು ತಕ್ಷಣವೇ ಕ್ವಾರಂಟೈನ್ ಮಾಡಬೇಕು ಎಂದು ಹೇಳಿದ್ದಾರೆ.

ಮುಂಜಾಗ್ರತಾ ಕ್ರಮಗಳ ಬಗ್ಗೆ ಈಗಾಗಲೇ ಆಸ್ಪತ್ರೆಯ ಅಧಿಕಾರಿಗಳಿಗೆ ತಿಳಿಸಲಾಗಿದೆ. ಸೋಂಕು ಪತ್ತೆಯಾದರೆ, ಕೂಡಲೇ ಆಸ್ಪತ್ರೆಯಲ್ಲಿ ವೃತ್ತಿಪರರು ಕಾರ್ಯ ನಿರ್ವಹಿಸಬೇಕು, ಅಲ್ಲಿ ಹೆಚ್ಚಿನ ಮುನ್ನೆಚ್ಚರಿಕೆಗಳಿಗೆ ಮಾರ್ಗಸೂಚಿಗಳನ್ನು ನೀಡಲಾಗುತ್ತದೆ ಎಂದಿದ್ದಾರೆ.

ಪೂಕೊಡೆ ಪಶುವೈದ್ಯಕೀಯ ಕಾಲೇಜಿನ ಡಾ. ದೀಪ್ ಅವರು ಹಣ್ಣಿನ ಋತುವಿನಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಿದ್ದಾರೆ. "ಇದು ಮಾವು ಮತ್ತು ಹಲಸಿನ ಹಣ್ಣಿನಂತಹ ಹಣ್ಣುಗಳ ಕಾಲವಾಗಿದೆ. ಈ ಪ್ರದೇಶಗಳಲ್ಲಿ ಬಾವಲಿಗಳ ಉಪಸ್ಥಿತಿಯು ಹೆಚ್ಚಾಗಿರುವುದರಿಂದ ಹಣ್ಣುಗಳನ್ನು ಸೇವಿಸುವಾಗ ಎಚ್ಚರಿಕೆ ವಹಿಸುವುದು ಮುಖ್ಯ" ಎಂದು ಅವರು ಹೇಳಿದ್ದಾರೆ.

ಕೇರಳದವರನ್ನ ಭಯಭೀತರನ್ನಾಗಿಸಿದ್ದ ನಿಫಾ ವೈರಸ್ ಮೇ 2018 ರಲ್ಲಿ ಪೆರಂಬ್ರಾ ಪ್ರದೇಶದಲ್ಲಿ ಮೊದಲು ಪತ್ತೆಯಾಯಿತು. ಎರಡು ತಿಂಗಳೊಳಗೆ ಸೋಂಕಿನಿಂದ 18 ಜನರು ಸಾವನ್ನಪ್ಪಿದ್ದರು. ಜೂನ್ 4, 2019 ರಂದು ಕೊಚ್ಚಿಯಲ್ಲಿ ಒಂದು ಪ್ರಕರಣ ವರದಿಯಾಗಿತ್ತು. ಅಲ್ಲಿ 23 ವರ್ಷದ ವಿದ್ಯಾರ್ಥಿಗೆ ಸೋಂಕು ದೃಢಪಟ್ಟಿತ್ತು. ತದನಂತರ ಅವರು ಚೇತರಿಸಿಕೊಂಡಿದ್ದರು.

# ಐಆರ್‌ಸಿಟಿಸಿ, ಐಆರ್‌ಎಫ್‌ಸಿಗಳಿಗೆ ನವರತ್ನ ಸ್ಥಾನಮಾನ







ನವದೆಹಲಿ: ಭಾರತೀಯ ರೈಲ್ವೆ ಕ್ಯಾಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ) ಮತ್ತು ಭಾರತೀಯ ರೈಲ್ವೆ ಹಣಕಾಸು ನಿಗಮ (ಐಆರ್‌ಎಫ್ಸಿ) ಗಳ ದರ್ಜೆಯನ್ನು 'ನವರತ್ನ ಕೇಂದ್ರ ಸಾರ್ವಜನಿಕ ವಲಯದ ಉದ್ಯಮ' ಸ್ಥಾನಮಾನಕ್ಕೆ ಉನ್ನತೀಕರಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಎರಡೂ ಕಂಪನಿಗಳ ನಿವ್ವಳ ಲಾಭ ಮತ್ತು ನಿವ್ವಳ ಮೌಲ್ಯದಂತಹ ಪ್ರಮುಖ ನಿಯತಾಂಕಗಳ ಕಾರ್ಯಕ್ಷಮತೆ ಹೆಚ್ಚಾಗಿರುವುದರಿಂದ ಇವು ನವರತ್ನ ದರ್ಜೆ ಪಡೆಯಲು ಬೇಕಾದ ಅರ್ಹತಾ ಮಾನದಂಡಗಳನ್ನು ಪೂರೈಸಿವೆ ಎಂದು ಸರ್ಕಾರ ತಿಳಿಸಿದೆ. ಹೊಸ ನವರತ್ನ ಸ್ಥಾನಮಾನವು ಈ ಕಂಪನಿಗಳಿಗೆ ಹಣಕಾಸು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಹೆಚ್ಚಿನ ಸ್ವಾಯತ್ತತೆಯನ್ನು ನೀಡಲಿದೆ.

ಐಆರ್‌ಸಿಟಿಸಿ ಮತ್ತು ಐಆರ್‌ಎಫ್ಸಿ ಇವೆರಡೂ ಈಗ ಸಿಪಿಎಸ್‌ಇಗಳಲ್ಲಿ ಕ್ರಮವಾಗಿ 25 ಮತ್ತು 26 ನೇ ನವರತ್ನ ಕಂಪನಿಗಳಾಗಿ ಸ್ಥಾನ ಪಡೆದುಕೊಂಡಿದ್ದು, ಇದು ಭಾರತೀಯ ರೈಲ್ವೆ ಕಂಪನಿಗಳಿಗೆ ಪ್ರಮುಖ ಮೈಲಿಗಲ್ಲಾಗಿದೆ ಎಂದು ಸಾರ್ವಜನಿಕ ಉದ್ಯಮಗಳ ಇಲಾಖೆಯ ಪ್ರಕಟಣೆ ತಿಳಿಸಿದೆ.

ನವರತ್ನ ಸ್ಥಾನಮಾನಕ್ಕೆ ಬಡ್ತಿಯು ಎರಡೂ ಕಂಪನಿಗಳಿಗೆ ಹೆಚ್ಚಿನ ಆರ್ಥಿಕ ಸ್ವಾಯತ್ತತೆಯನ್ನು ನೀಡಲಿದೆ. ಅಂದರೆ ಈ ಕಂಪನಿಗಳು ಇನ್ನು ಮುಂದೆ ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ 1,000 ಕೋಟಿ ರೂ. ಗಳವರೆಗೆ ಹೂಡಿಕೆ ಮಾಡಲು ಸಾಧ್ಯವಾಗಲಿದೆ. ಈ ಮೂಲಕ ಮುಂದಿನ ಬೆಳವಣಿಗೆಯ ಯೋಜನೆಗಳಲ್ಲಿ ಕಂಪನಿಗಳು ತ್ವರಿತವಾಗಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಲಿದೆ.

ಕೇಂದ್ರ ಸರ್ಕಾರವು ಸಿಪಿಎಸ್‌ಇಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸುತ್ತದೆ. ಅವು: ಮಹಾರತ್ನ, ನವರತ್ನ ಮತ್ತು ಮಿನಿರತ್ನ. ಈ ಪಿಎಸ್ ಯುಗಳನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸುವುದು ಮತ್ತು ಅವುಗಳಲ್ಲಿ ಹೆಚ್ಚಿನ ದಕ್ಷತೆ ತರುವುದು ಈ ವರ್ಗೀಕರಣದ ಗುರಿಯಾಗಿದೆ.

ರೈಲ್ವೆ ಸಚಿವಾಲಯದ ಅಡಿಯಲ್ಲಿ ಬರುವ ಐಆರ್‌ಸಿಟಿಸಿ ಮಾರ್ಚ್ 31, 2024 ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ 4,270.18 ಕೋಟಿ ರೂ.ಗಳ ವಾರ್ಷಿಕ ವಹಿವಾಟು ನಡೆಸಿ, 1,111.26 ಕೋಟಿ ರೂ.ಗಳ ನಿವ್ವಳ ಲಾಭ ಗಳಿಸಿದ್ದು, 3,229.97 ಕೋಟಿ ರೂ.ಗಳ ನಿವ್ವಳ ಮೌಲ್ಯವನ್ನು ಹೊಂದಿದೆ.

ರೈಲ್ವೆ ಸಚಿವಾಲಯದ ಅಡಿ ಬರುವ ಐಆರ್‌ಎಫ್ಸಿ ಇದೇ ಅವಧಿಯಲ್ಲಿ 26,644 ಕೋಟಿ ರೂ.ಗಳ ವಹಿವಾಟು ನಡೆಸಿ, 6,412 ಕೋಟಿ ರೂ.ಗಳ ನಿವ್ವಳ ಲಾಭ ಗಳಿಸಿದೆ ಮತ್ತು 49,178 ಕೋಟಿ ರೂ.ಗಳ ನಿವ್ವಳ ಮೌಲ್ಯವನ್ನು ಹೊಂದಿದೆ ಎಂದು ಸಾರ್ವಜನಿಕ ಉದ್ಯಮಗಳ ಇಲಾಖೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

# ತೋಳಗಳಿಗೆ ರೇಡಿಯೋ ಕಾಲರ್ ಕಟ್ಟಿ ಸಂಶೋಧನೆ

ಮಧ್ಯಪ್ರದೇಶ: ಮಧ್ಯಪ್ರದೇಶದಲ್ಲಿ ದೇಶದಲ್ಲಿಯೇ ಅತಿ ಹೆಚ್ಚು ತೋಳಗಳಿವೆ. ಇಲ್ಲಿನ ವೀರಾಂಗಣ ರಾಣಿ ದುರ್ಗಾವತಿ ಹುಲಿ ಮೀಸಲು ಪ್ರದೇಶವು (ನೌರಾದೇಹಿ) ಭಾರತೀಯ ತೋಳಗಳ ನೈಸರ್ಗಿಕ ಆವಾಸಸ್ಥಾನವಾಗಿದೆ. ಮಧ್ಯಪ್ರದೇಶಕ್ಕೆ ತೋಳಗಳ ರಾಜ್ಯ ಸ್ಥಾನಮಾನ ಬರಲು ಇದೂ ಕಾರಣ. ಇದೀಗ, ಜಬಲ್ಪುರ ಮೂಲದ ರಾಜ್ಯ ಅರಣ್ಯ ಸಂಶೋಧನಾ ಸಂಸ್ಥೆಯು ತೋಳಗಳ ಸಂಶೋಧನೆ ನಡೆಸಲು ಮುಂದಾಗಿದೆ.

ಹುಲಿಗಳು ಮತ್ತು ಚಿರತೆಗಳಂತಹ ಬೇಟೆ ಪ್ರಾಣಿಗಳು ಇರುವ ಜಾಗದಲ್ಲಿ ತೋಳಗಳ ಜೀವನ, ಅವುಗಳ ಆಹಾರ, ಆವಾಸಸ್ಥಾನ ಮತ್ತು ಅವುಗಳ ದಿನಚರಿ ಹೇಗಿರಲಿದೆ ಎಂಬುದನ್ನು ತಿಳಿದುಕೊಳ್ಳುವುದು ಈ ಸಂಶೋಧನೆಯ ಉದ್ದೇಶವಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಗುರುತಿಸಿದ ತೋಳಗಳಿಗೆ ರೇಡಿಯೋ ಕಾಲರ್: ಸಂಶೋಧನೆಗಾಗಿ ಮೂರು ತೋಳಗಳನ್ನು ಗುರುತಿಸಿ ಅವುಗಳ



ಕೊರಳಿಗೆ ರೇಡಿಯೋ ಕಾಲರ್ ಕಟ್ಟಿ ಸಂಶೋಧನೆ ನಡೆಸಲಾಗುವುದು. ಈ ಯೋಜನೆಯು 2023 ರಲ್ಲಿ ಪ್ರಾರಂಭವಾಯಿತು. ಮುಂದಿನ 2 ವರ್ಷಗಳ ಅವಧಿಯನ್ನು ಹೊಂದಿದೆ. ಸಂಶೋಧನೆಗಾಗಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದಿಂದ ಅನುಮತಿ ಕೋರಲಾಗಿದೆ. ಅನುಮತಿ ದೊರೆತ ತಕ್ಷಣ, ತೋಳಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗುವುದು ಎಂದಿದೆ.

ನೌರಾದೇಹಿ ಪ್ರದೇಶವು ಭಾರತೀಯ ತೋಳ ಮತ್ತು ಬೂದು ತೋಳಗಳ ನೈಸರ್ಗಿಕ ಆವಾಸಸ್ಥಾನ. ಇಲ್ಲಿ ಹುಲಿಗಿಂತ ಮೊದಲು ತೋಳಗಳು ವಾಸಿಸುತ್ತಿದ್ದವು. 1975 ರಲ್ಲಿ ತೋಳಗಳ ನೈಸರ್ಗಿಕ ಆವಾಸಸ್ಥಾನ ಎಂದು ಗುರುತಿಸಲಾಯಿತು. ಸುಮಾರು 1197 ಚದರ ಕಿ.ಮೀ ವಿಸ್ತೀರ್ಣದ ವನ್ಯಜೀವಿ ಅಭಯಾರಣ್ಯದಲ್ಲಿ ಬೂದು ತೋಳವೂ ಸೇರಿಕೊಂಡಿದೆ.

2022 ರಲ್ಲಿ ದೇಶಾದ್ಯಂತ ತೋಳಗಳ ಗಣತಿ ನಡೆಸಲಾಯಿತು. ಇದರಲ್ಲಿ 772 ಸಂಖ್ಯೆ ಹೊಂದುವ ಮೂಲಕ ಮಧ್ಯಪ್ರದೇಶವು ಅತಿ ಹೆಚ್ಚು ತೋಳಗಳನ್ನು ಹೊಂದಿರುವ ರಾಜ್ಯ ಎಂದೆನಿಸಿಕೊಂಡಿತು. ಬಳಿಕ ರಾಜಸ್ಥಾನದಲ್ಲಿ 532 ಮತ್ತು ಗುಜರಾತ್‌ನಲ್ಲಿ 494 ತೋಳಗಳಿವೆ. ಇತರ ರಾಜ್ಯಗಳಲ್ಲಿ ಇವುಗಳ ಸಂಖ್ಯೆ ಕಡಿಮೆಯಿದೆ. ಭಾರತೀಯ ವನ್ಯಜೀವಿ ಸಂಸ್ಥೆ ನಡೆಸಿದ ಗಣತಿಯಲ್ಲಿ ದೇಶದಲ್ಲಿ ಒಟ್ಟು 3170 ತೋಳಗಳು ಕಂಡುಬಂದಿವೆ. ಅದರಲ್ಲಿ ಸುಮಾರು 20 ಪ್ರತಿಶತ ಮಧ್ಯಪ್ರದೇಶದಲ್ಲಿವೆ.

ಅಧಿಕಾರಿಗಳು ಹೇಳೋದೇನು: ನೌರಾದೇಹಿ ಹುಲಿ ಮೀಸಲು ಪ್ರದೇಶದ ಉಪ ನಿರ್ದೇಶಕಿ ಡಾ.ಎ ಎ ಅನ್ಸಾರಿ ಹೇಳುವಂತೆ, ಮಧ್ಯಪ್ರದೇಶ ಸರ್ಕಾರದ ಆದೇಶದ ಮೇರೆಗೆ ರಾಜ್ಯ ಅರಣ್ಯ ಸಂಶೋಧನಾ ಸಂಸ್ಥೆ ತೋಳಗಳ ಅಧ್ಯಯನಕ್ಕಾಗಿ ಸಂಶೋಧನಾ ಯೋಜನೆ ಹಾಕಿಕೊಂಡಿದೆ. 2 ವರ್ಷಗಳಲ್ಲಿ ನಡೆಸಲಾಗುವ ಈ ಅಧ್ಯಯನದಲ್ಲಿ ಮೂರು ತೋಳಗಳಿಗೆ ರೇಡಿಯೋ ಕಾಲರ್ ಕಟ್ಟಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಅವುಗಳು ಹೇಗೆ ಬೇಟೆಯಾಡುತ್ತವೆ. ಯಾವ ಪ್ರಾಣಿ ಇಷ್ಟ. ಯಾವಾಗ ಮತ್ತು ಎಷ್ಟು ದಿನಕ್ಕೊಮ್ಮೆ ಬೇಟೆಯಾಡುತ್ತವೆ. ಅವುಗಳ ಆವಾಸಸ್ಥಾನ, ಗುಂಪುಗಳಲ್ಲಿ ಹೇಗೆ ವಾಸಿಸುತ್ತವೆ, ಅವುಗಳ ದಿನಚರಿ ಏನು. ಇದನ್ನೆಲ್ಲಾ ಅಧ್ಯಯನ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಬಸ್‌ಗೆ ಕಲ್ಲು ತೂರಾಟ: ಓರ್ವ ಸಾವು, ಹಲವರಿಗೆ ಗಾಯ

ಭೋಪಾಲ್: ರಾಜ್ಯದ ರೇವಾ ಪಟ್ಟಣದ ಚೋರ್ಹಟಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಲಿಸುತ್ತಿದ್ದ ಬಸ್ಸಿನ ಮೇಲೆ ಅಪರಿಚಿತ ದುಷ್ಕರ್ಮಿಗಳು ಕಲ್ಲು ತೂರಿರುವ ಘಟನೆ ನಡೆದಿದೆ. ಕಲ್ಲೇಟಿಗೆ ಓರ್ವ ಸಾವನ್ನಪ್ಪಿದ್ದು, ಅನೇಕರು ಗಾಯಗೊಂಡಿದ್ದಾರೆ.



ಪೊಲೀಸರ ಪ್ರಕಾರ, ವೃತ್ತಿಯಲ್ಲಿ ಫಿಸಿಯೋಥೆರಪಿಸ್ಟ್ ಆಗಿರುವ ವ್ಯಕ್ತಿ ಸಾವನ್ನಪ್ಪಿದ್ದಾರೆ. ಖಾಸಗಿ ಬಸ್ಗಳ ನಡುವಿನ ಪೈಪೋಟಿಯೇ ಘಟನೆಗೆ ಕಾರಣ ಎಂದು ತಿಳಿದು ಬಂದಿದೆ.

"ಬೈಕ್ನಲ್ಲಿ ಬಂದ ಮೂವರು ಅಪರಿಚಿತರು ಚಲಿಸುತ್ತಿದ್ದ ಬಸ್ಗೆ ಹಾನಿ ಮಾಡುವ ಉದ್ದೇಶದಿಂದ ವಿಂಡ್ಸ್ಕ್ರೀನ್ ಮೇಲೆ ಕಲ್ಲೆಸೆದಿದ್ದಾರೆ" ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ನಗರ) ಅನಿಲ್ ಸೋಂಕರ್ ತಿಳಿಸಿದರು.ರೇವಾದಿಂದ ಇಂದೋರ್ಗೆ ತೆರಳುತ್ತಿದ್ದ ಬಸ್ ಸಂಜೆ 7 ಗಂಟೆಗೆ ಸಂಚಾರ ಆರಂಭಿಸಿದಾಗ ಘಟನೆ ಸಂಭವಿಸಿದೆ. ಪೊಲೀಸರು ದುಷ್ಕರ್ಮಿಗಳಿಗೆ ಹುಡುಕಾಟ ಆರಂಭಿಸಿದ್ದು, ಶೀಘ್ರದಲ್ಲೇ ಬಂಧಿಸಲಾಗುವುದು. ಸಿಸಿಟಿವಿ ದೃಶ್ಯಾವಳಿಗಳನ್ನು ವಶಕ್ಕೆ ಪಡೆಯಲಾಗಿದೆ. ಸ್ಥಳೀಯ ಬಸ್ ನಿರ್ವಾಹಕರೂ ಸೇರಿದಂತೆ ಇತರ ಪ್ರಯಾಣಿಕರನ್ನು ವಿಚಾರಣೆಗೆ ಒಳಪಡಿಸಲಾಗಿದೆ" ಎಂದು ಅವರು ಹೇಳಿದ್ದಾರೆ.

ಸಾವನ್ನಪ್ಪಿದ ಸಂತ್ರಸ್ತ ಹೀರಾಲಾಲ್ ಇಂದೋರ್ ನಿವಾಸಿಯಾಗಿದ್ದು, ರೇವಾ ಜಿಲ್ಲೆಯ ಸಿರ್ಮೌರ್ನಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ರಜೆ ಹಿನ್ನೆಲೆಯಲ್ಲಿ ತಮ್ಮ ಕುಟುಂಬವನ್ನು ಭೇಟಿಯಾಗಲು ಇಂದೋರ್ಗೆ ಪ್ರಯಾಣಿಸುತ್ತಿದ್ದರು ಎಂಬ ಮಾಹಿತಿ ಲಭ್ಯವಾಗಿದೆ.

# ಸ್ನೇಹಿತೆ ಲವ್ ಪ್ರಪೋಸಲ್ ಮುಂದಿಡಲು ಹೋಗಿ ಲವಲ್ಲಿ ಬಿದ್ದೆ

ಕನ್ನಡ ಚಿತ್ರರಂಗದ ಅದ್ಭುತ ನಿರ್ದೇಶಕ ತರುಣ್ ಸುಧೀರ್ ಮತ್ತು ನಟಿ ಸೋನಲ್ ಮದುವೆಯಾಗಿ ವರ್ಷ ಕಳೆದಿಲ್ಲ ಆದರೆ ಟ್ವಿಸ್ಟ್ ಮೇಲೆ ಟ್ವಿಸ್ಟ್ ಸ್ಟೋರಿಗಳು ಸಿಗುತ್ತಿದೆ. ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಮಜಾ ಟಾಕೀಸ್ ಕಾರ್ಯಕ್ರಮದಲ್ಲಿ ಪ್ರಜ್ವಲ್ ದೇವರಾಜ್ ಫ್ಯಾಮಿಲಿ ಆಗಮಿಸಿದ್ದರು. ಇದೇ ಸಮಯದಲ್ಲಿ ನಟಿ ಸೋನಲ್ ತಮ್ಮ ಸಿನಿಮಾ ಪ್ರಚಾರ ಮಾಡಲು ಆಗಮಿಸಿದ್ದರು. ಪ್ರಜ್ವಲ್ ಮತ್ತು ಸೋನಲ್ ಒಂದೇ ಸಿನಿಮಾ ಮಾಡಿದ್ದರೂ ಕೂಡ ಒಟ್ಟಿಗೆ ಭೇಟಿ ಮಾಡಿರಲಿಲ್ಲ. ಹೀಗಾಗಿ ಮಜಾ ಮನೆಯಲ್ಲಿ ತರುಣ್ ಬಗ್ಗೆ ಸಾಕಷ್ಟು ವಿಚಾರಗಳನ್ನು ಚರ್ಚೆ ಮಾಡಿದ್ದಾರೆ.

ಸೋನಲ್ ಮತ್ತು ತರುಣ್ ಸ್ನೇಹಿತರಾಗಿದ್ದು ಮದುವೆಯಾಗಿರುವುದು. ಇದು ಇಂಡಸ್ಟ್ರಿಯ ಹಲವರು ಅರೇಂಜ್ ಮಾಡಿರುವ ಮದುವೆ ಎನ್ನಬಹುದು. ಏಕೆಂದರೆ ಸ್ನೇಹಿತರಾಗಿದ್ದ ಸಮಯದಲ್ಲಿ ಲವ್ ಮಾಡುತ್ತಿದ್ದಾರಾ ಎಂದು ಇಂಡಸ್ಟ್ರಿಯಲ್ಲಿ ಗಾಸಿಪ್ ಹಬ್ಬಿತ್ತು. ಮದುವೆ ಸೆಟ್ ಆದ್ಮೇಲೆ ಲವ್ ಆಗಿದೆ ಅಂತ ತಿಳಿದು ಬಂತು. ಈ ಗ್ಯಾಪ್‌ನಲ್ಲಿ ಸೋನಲ್ ಸ್ನೇಹಿತೆಗೆ ತುರಣ್ ಮೇಲ್ ಕ್ರಶ್ ಆಗಿತ್ತಂತೆ. ಈ ಸ್ಟೋರಿಯನ್ನು ಸೃಜನ್ ಲೋಕೇಶ್ ಪ್ರಶ್ನೆ ಮಾಡಿದ್ದಾರೆ. ಆಗ ಸೋನಲ್ ಇಡೀ ಸ್ಟೋರಿ ರಿವೀಲ್ ಮಾಡಿದ್ದಾರೆ.

'ನನ್ನ ಸ್ನೇಹಿತೆರೆ ತರುಣ್ ಸುಧೀರ್ ಮೇಲೆ ಲವ್ ಆಗಿತ್ತು. ತರುಣ್ ಮನೆಯಲ್ಲಿ ಹುಡುಗಿ ಹುಡುಕುತ್ತಿದ್ದರು ಅಂತ ಆಕೆಗೆ ಗೊತ್ತಿತ್ತು...ಹೀಗಾಗಿ ರಾಬರ್ಟ್ ಸಿನಿಮಾ ಸಮಯದಿಂದ ನನ್ನ ಹಿಂದೆ ಬಿದ್ದಳು. ಸೋನಲ್ ನೋಡು ನನಗೆ ತರುಣ್‌ನ ಸೆಟ್ ಮಾಡಿಕೊಂಡು ಕ್ಯೂಟ್ ಆಗಿದ್ದಾರೆ ಎನ್ನುತ್ತಿದ್ದಳು. ಆಯ್ತು ಮಾತನಾಡುತ್ತೀನಿ ಎಂದು ಹೇಳಿ ಸುಮ್ಮನಾದೆ ಏಕೆಂದರೆ ಹೇಗ್ ಮಾತನಾಡುವುದು ಏನ್ ಅಂತ ಮಾತನಾಡುವುದು ಹೇಳಿ? ಅದೇ ಸಮಯಕ್ಕೆ ನಿಮ್ಮ ತರುಣ್ ನಡುವೆ ಏನಾದರೂ ನಡೆಯುತ್ತಿದ್ಯಾ ಎಂದು ಪ್ರಶ್ನೆ ಮಾಡುತ್ತಿದ್ದರು. ಎಲ್ಲರೂ ರೇಗಿಸುತ್ತಿರುವಾಗ ನಮ್ಮಿಬ್ಬರ ನಡುವೆ ಏನೂ ಇರಲಿಲ್ಲ. ನಿರ್ದೇಶಕರು ಅನ್ನೋ ಗೌರವಕ್ಕೆ ಒಂದು ಮೆಸೇಜ್ ಮಾಡಿದೆ..ಎಲ್ಲರೂ ಈ ರೀತಿ ಮಾತನಾಡಿಕೊಳ್ಳುತ್ತಿದ್ದಾರೆ ಆದರೆ ನಾನು ಏನೂ ಹೇಳಿಲ್ಲ ನೀವು ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳಬೇಡಿ ಅಂತ ಹೇಳಿದೆ. ಆ ಸಮಯದಲ್ಲಿ ತರುಣ್ ತಲೆ ಉಪಯೋಗಿಸಿ 'ನೋಡಿ ಯೂನಿವರ್ಸ್ ನಮಗೆ ಏನೂ ಹೇಳುವುದಕ್ಕೆ ಪ್ರಯತ್ನ ಪಡುತ್ತಿದೆ' ಎಂದು ಸಂಬಂಧ ಮುಂದುವರೆಸಿದ್ದರು. ಇವತ್ತಿಗೂ ನನ್ನ ಸ್ನೇಹಿತೆ ಬೇಸರ ಮಾಡಿಕೊಂಡು ನಾನು ಜಾನು ಅಂತ ಕರೆಯಬೇಕಿತ್ತು ಆದರೆ ಜೀಜು ಅಂತ ಕರೆಯುವ ಪರಿಸ್ಥಿತಿ ಬಂದಿದೆ ಅಂತಿದ್ದಾಳೆ.

ಹಿಂದೂ ಸಂಪ್ರದಾಯದಂತೆ ಮೊದಲಿಗೆ ಮದುವೆ ನಡೆದಿತ್ತು. ಸೋನಲ್ ಅವರ ಹುಟ್ಟುಹಬ್ಬದಂದೇ ಮದುವೆಯಾಗಿದ್ದು ವಿಶೇಷವೇ. ಕೊನೆಗೆ ಜೋಡಿ ಮಂಗಳೂರಿನಲ್ಲಿ ಕ್ರೈಸ್ತ ಸಮುದಾಯದಂತೆ ಮದುವೆ ಮಾಡಿಕೊಂಡಿತು. ಇದಕ್ಕೆ ಕಾರಣ ಸೋನಲ್ ಅವರು ಕ್ರೈಸ್ತ ಸಮುದಾಯಕ್ಕೆ ಸೇರಿದವರು. ಈ ದಂಪತಿ ತಮ್ಮ ವೈವಾಹಿಕ ಜೀವನವನ್ನು ಸಂತಸದಿಂದ ಕಳೆಯುತ್ತಿದ್ದಾರೆ. ಇದರ ನಡುವೆಯೇ, ಮದುವೆಗೂ ಮುನ್ನ ನಡೆದ ಸ್ವಾರಸ್ಯಕರ ಘಟನೆಯನ್ನು ಸೋನಲ್ ಅವರು ಹಂಚಿಕೊಂಡಿದ್ದಾರೆ.

ಕ್ರೈಸ್ತ ಸಮುದಾಯದಲ್ಲಿ ಸಾಮಾನ್ಯವಾಗಿ ಎಲ್ಲಾ ಸೆಲಬ್ರೇಷನ್‌ಗಳಲ್ಲಿ ಡ್ರಿಂಕ್ಸ್ ಇರಲೇಬೇಕು. ಅದೇ ರೀತಿ ಮದುವೆಗೆ ಮುನ್ನ ನಡೆದ ಅರಿಶಿಣ ಶಾಸ್ತ್ರದ ಸಂದರ್ಭದಲ್ಲಿ ಮೊದಲ ಬಾರಿಗೆ ಅತ್ತೆ ಮನೆಗೆ ಹೋದಾಗ ತರುಣ್ ಪೇಚಿಗೆ ಸಿಲುಕಿದ ಪ್ರಸಂಗವನ್ನು ರೋಚಕವಾಗಿ ಸೋನಲ್ ಹೇಳಿದ್ದಾರೆ. 'ಅರಿಶಿಣ ಶಾಸ್ತ್ರ ಇರುವಂತೆ ನಮ್ಮಲ್ಲಿ ರೋಸ್ ಶಾಸ್ತ್ರ ಇರುತ್ತದೆ. ಕಾಯಿಯ ಹಾಲನ್ನು ಹಚ್ಚುವ ಶಾಸ್ತ್ರ ಅದು. ಅದಕ್ಕಾಗಿ ತರುಣ್ ಅವರನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲಾಗಿತ್ತು. ಪಟಾಕಿ ಎಲ್ಲಾ ಸಿಡಿಸಿ ತುಂಬಾ ಚೆನ್ನಾಗಿ ಬರಮಾಡಿಕೊಂಡರು. ಅದನ್ನು ನೋಡಿ ತರುಣ್ ಫುಲ್ ಖುಷ್ ಆಗಿ ಸೋ ನೈಸ್ ಎಂದರು. ಅಷ್ಟಾಗುತ್ತಿದ್ದಂತೆಯೇ ನಮ್ಮಲ್ಲಿ ಬಾರ್ ಓಪನ್ ಆಗಿಬಿಡ್ತು. ಎಲ್ಲರೂ ಫುಲ್ ಡ್ರಿಂಕ್ಸ್ ತಗೊಂಡು ಡಾನ್ಸ್ ಶುರು ಮಾಡಿಕೊಂಡರು. ನನ್ನಮ್ಮ, ಅಣ್ಣ ಎಲ್ಲರೂ ಡಾನ್ಸ್ ಮಾಡಿದರು. ಇದನ್ನು ನೋಡಿ ತರುಣ್ ಫುಲ್ ಸುಸ್ತಾಗಿ ಬಿಟ್ಟರು' ಎಂದು ಸೋನಲ್ ಹೇಳಿದ್ದಾರೆ.

ನಾನು ಮೊದಲೇ ನಮ್ಮ ಮನೆಯವರಿಗೆ ಹೇಳಿದ್ದೆ. ದಯವಿಟ್ಟು ಸ್ವಲ್ಪ ಸಮಾಧಾನದಿಂದ ಇರಿ, ಅವರಿಗೆ ಇವೆಲ್ಲಾ ಅಭ್ಯಾಸ ಇಲ್ಲ ಎಂದು. ಆದರೆ ಯಾರೂ ಕೇಳಲೇ ಇಲ್ಲ. ಎಲ್ಲರೂ ಡ್ರಿಂಕ್ಸ್ ತೆಗೆದುಕೊಂಡು ಬಿಟ್ಟರು. ಇದನ್ನು ನೋಡಿ ತರುಣ್ ಪೆಚ್ಚು ಬಿದ್ದರು ಎಂದು ಅಮದು ನಡೆದ ಘಟನೆಯನ್ನು ಸೋನಲ್ ಸ್ವಾರಸ್ಯಕರವಾಗಿ ಹೇಳಿದ್ದು, ಅದರ ವಿಡಿಯೊ ಅನ್ನು, ಬಿಂದು ಗೌಡ ಎನ್ನುವವರು ಶೇರ್ ಮಾಡಿದ್ದಾರೆ. ಇನ್ನು ತರುಣ್ ಅವರು ನಿರ್ದೇಶಕರಾಗಿ ಸಾಕಷ್ಟು ಹೆಸರು ಮಾಡುತ್ತಿದ್ದರೆ, ಸೋನಲ್ ಅವರು, ಎಕ್ಕ ಸಕ್ಕ ಎಂಬ ತುಳು ಸಿನಿಮಾ ಮೂಲಕ ಎಂಟ್ರಿ ಕೊಟ್ಟರು. ಬಳಿಕ ಯಮುನಕ್ಕ ಸೇರಿದಂತೆ ಕೆಲವು ತುಳು ಚಿತ್ರಗಳಲ್ಲಿ ನಟಿಸಿದ್ದಾರೆ. 2018ರಲ್ಲಿ ಅಭಿಸಾರಿಕೆ ಎನ್ನುವ ಚಿತ್ರದ ಮೂಲಕ ಕನ್ನಡ ಚಿತ್ರರಂಗ ಎಂಟ್ರಿ ಕೊಟ್ಟರು. 2019ರಲ್ಲಿ ಯೋಗರಾಜ್ ಭಟ್ ನಿರ್ದೇಶನದ ಪಂಚತಂತ್ರ ಸಿನಿಮಾದಲ್ಲಿ ನಾಯಕಿಯಾಗಿ ಕಾಣಿಸಿಕೊಂಡರು. ಬಳಿಕ ತರುಣ್ ನಿರ್ದೇಶನದ ರಾಬರ್ಟ್ ಚಿತ್ರದಲ್ಲಿ ಸೋನಲ್ ಪ್ರಮುಖ ಪಾತ್ರದಲ್ಲಿ ನಟಿಸಿದರು. ಆನಂತರ ಶುಗರ್ ಫ್ಯಾಕ್ಟರಿ, ಬನಾರಸ್, ಗರಡಿ, ಮದುವೆ ದಿಬ್ಬಣ, ಡೆಮೊ ಪೀಸ್, ಶಂಭೋ ಶಿವ ಶಂಕರ್ ಸಿನಿಮಾಗಳಲ್ಲಿ ನಟಿಸಿದರು. ಬಳಿಕ ಉಪೇಂದ್ರ ನಟನೆಯ ಬುದ್ಧಿವಂತ 2, ರೋಲೆಕ್ಸ್ ಹಾಗೂ ಮಾರ್ಗರೆಟ್ ಲವ್ ಆಫ್ ರಾಮಾಚಾರಿ ಚಿತ್ರದಲ್ಲಿ ಸೋನಲ್ ಅಭಿನಯಿಸಿದ್ದಾರೆ.



# ದೇಶದ ಮಹಾನ್ ಶ್ರೀಮಂತನ ಬುಟ್ಟಿಗೆ ಬಿದ್ದಿದ್ದ ಐಶ್ವರ್ಯಾ ರೈ!

ಅಮಿತಾಬ್ ಬಚ್ಚನ್ ಅವರ ಸೊಸೆ ಮತ್ತು ಅಭಿಷೇಕ್ ಅವರ ಪತ್ನಿ ಐಶ್ವರ್ಯಾ ರೈ ಮಾಜಿ ಮಿಸ್ ವರ್ಲ್ಡ್ ಆಗಿದ್ದಾರೆ. ಇಂದಿಗೂ ಅವರ ಸೌಂದರ್ಯದ ಬಗ್ಗೆ ಜಗತ್ತಿನಾದ್ಯಂತ ಚರ್ಚೆಗಳು ನಡೆಯುತ್ತವೆ. ಬಾಲಿವುಡ್‌ಗೆ ಎಂಟ್ರಿ ಕೊಟ್ಟ ನಂತರ ಸಲ್ಮಾನ್ ಖಾನ್ ಮತ್ತು ವಿವೇಕ್ ಒಬೆರಾಯ್ ಅವರೊಂದಿಗೆ ಹೆಸರು ತಳುಕು ಹಾಕಿಕೊಂಡಿತು. ಆದರೆ ಭಾರತದ ಅತ್ಯಂತ ಶ್ರೀಮಂತ ಕುಟುಂಬದ ವ್ಯಕ್ತಿಯೊಂದಿಗೆ ಅವರ ಸಂಬಂಧದ ಬಗ್ಗೆ ಸುದ್ದಿ ಎಲ್ಲರ ಕಿವಿ ನೆಟ್ಟುವಂತೆ ಮಾಡಿತ್ತು.

ಸುಮಾರು 21 ವರ್ಷಗಳ ಹಿಂದೆ ಐಶ್ವರ್ಯಾ ಗ್ಲಾಮರ್ ಜಗತ್ತಿನಲ್ಲಿ ಮಿಂಚುತ್ತಿದ್ದಾಗ ಒಂದು ವದಂತಿ ಎಲ್ಲರನ್ನು ಬೆಚ್ಚಿ ಬೀಳಿಸಿತ್ತು. ತಾಲ್ ನಟಿ ಮುಖೇಶ್ ಅಂಬಾನಿಯವರ ಕಿರಿಯ ಸಹೋದರ ಅನಿಲ್ ಅಂಬಾನಿ ಅವರೊಂದಿಗೆ ಹೆಸರು ತಳುಕು ಹಾಕಿಕೊಂಡರು. ಅವರು ಈಗಾಗಲೇ ನಟಿ ಟೀನಾ ಮುನಿಮ್ ಅವರನ್ನು ವಿವಾಹವಾಗಿದ್ದರು.



ಐಶ್ವರ್ಯಾ ರೈ ಬಚ್ಚನ್ ಮತ್ತು ಅನಿಲ್ ಅಂಬಾನಿ ನಡುವೆ ಸಂಬಂಧವಿದೆ ಎಂಬ ಸುದ್ದಿ ನಿಜಕ್ಕೂ ಆಘಾತಕಾರಿಯಾಗಿತ್ತು. ಐಶ್ವರ್ಯಾ ಕೂಡ ಈ ವಿಚಿತ್ರ ವದಂತಿಗಳಿಂದ ಬೆಚ್ಚಿಬಿದ್ದಿದ್ದರು. ಭಾರತದ ಶ್ರೀಮಂತ ಕುಟುಂಬದಲ್ಲಿ ಒಬ್ಬರಾದ ಅಂಬಾನಿ ಅವರೊಂದಿಗೆ ತಮ್ಮ ಹೆಸರು ತಳುಕು ಹಾಕಿಕೊಳ್ಳುತ್ತದೆ ಎಂದು ಅವರು ನಂಬಲು ಸಾಧ್ಯವಾಗಲಿಲ್ಲ. ಸಂದರ್ಶನವೊಂದರಲ್ಲಿ ಈ ಬಗ್ಗೆ ಕೇಳಿದಾಗ ಅವರು ಶಾಕ್ ಆದರು.

**ಸರ್ಪ್ರೈಸ್ ಆದ ಐಶ್ವರ್ಯಾ ರೈ:**

ಅನಿಲ್ ಅಂಬಾನಿ ಜೊತೆ ಡೇಟಿಂಗ್ ಮಾಡುವ ವದಂತಿಗಳ ಬಗ್ಗೆ ಕೇಳಿದಾಗ ಐಶ್ವರ್ಯಾ ಸಿಟ್ಟಿನಿಂದ, ನನ್ನ ಹೆಸರನ್ನು ಯಾಕೆ ಪದೇ ಪದೇ ಬಳಸುತ್ತಾರೆ ಎಂದು ನಾನು ಯೋಚಿಸುತ್ತೇನೆ. ಇದರ ಬಗ್ಗೆ ನನಗೆ ತಿಳಿದಾಗ ತುಂಬಾ ಬೇಸರವಾಯಿತು. ನಾನು ಅವರನ್ನು ಅಪರೂಪಕ್ಕೆ ಭೇಟಿಯಾಗಿದ್ದೇನೆ. ಕೊನೆಯ ಬಾರಿಗೆ ನಾವು ಭರತ್ ಶಾ ಅವರ ಹುಟ್ಟುಹಬ್ಬದ ಪಾರ್ಟಿಯಲ್ಲಿ ಭೇಟಿಯಾಗಿದ್ದೆವು. ನಾವು ಟೀನಾ ಮತ್ತು ಇತರರೊಂದಿಗೆ ಒಂದು ಟೇಬಲ್ ಮೇಲೆ ಕುಳಿತಿದ್ದೆವು. ನನಗೆ ಆಶ್ಚರ್ಯವಾಗಿದೆ. ಅವರೊಂದಿಗೆ ನನಗೆ ಕೋಟಿ ರೂಪಾಯಿಗಳ ಪ್ರಿ-ನಪ್ ಕಾಂಟ್ರಾಕ್ಟ್ ಇದೆ ಎಂದು ತಿಳಿದು ನನಗೆ ಆಘಾತವಾಯಿತು. ಹಲೋ, ಅವರು ನನ್ನ ಬಗ್ಗೆ ಮಾತನಾಡುತ್ತಿದ್ದಾರೆಯೇ?" ಎಂದು ಪ್ರಶ್ನಿಸಿದರು.

2004 ರಲ್ಲಿ ಇಟೈಮ್ಸ್ ಜೊತೆಗಿನ ಸಂದರ್ಶನದಲ್ಲಿ ಐಶ್ವರ್ಯಾ ಅವರನ್ನು ಕೇಳಲಾಯಿತು, ನಿಮ್ಮ ಮತ್ತು ಅನಿಲ್ ಅಂಬಾನಿ ನಡುವೆ ಪ್ರಿ-ನ್ಯೂಪ್ ಒಪ್ಪಂದಕ್ಕೆ ಸಹಿ ಹಾಕಲಾಗಿದೆಯೇ? ಐಶ್ವರ್ಯಾ ಅವರು ಇಂತಹ ಯಾವುದೇ ಕರಾರಿಗೆ ಸಹಿ ಹಾಕಿಲ್ಲ ಎಂದು ಹೇಳುವ ಮೂಲಕ ಆಶ್ಚರ್ಯಚಕಿತರಾದರು. ಅವರು ಇದೇ ಸಂದರ್ಶನದಲ್ಲಿ, "ಇದು ನನ್ನ ಬಗ್ಗೆಯೂ ಇದೆಯೇ?" ಎಂದು ಕೇಳಿದರು.



# ಸಾಯಿ ಪಲ್ಲವಿ ಬಳಸೋ ಎರಡೇ ಎರಡು ಮೇಕಪ್ ಪ್ರಾಡಕ್ಟ್!



ಸಾಯಿ ಪಲ್ಲವಿ ನ್ಯಾಚುರಲ್ ಬ್ಯೂಟಿ. ಕಥೆ ಇಷ್ಟ ಆದ್ರೆ ಮಾತ್ರ ಸಿನಿಮಾಗಳನ್ನ ಮಾಡ್ತಾರೆ. ಇತ್ತೀಚೆಗೆ ಅವರ ಟೈಮ್ ಚೆನ್ನಾಗಿ ನಡೀತಿದೆ. ಎರಡು ಸಿನಿಮಾಗಳು ಮಾಡಿದ್ರೆ, ಆ ಎರಡು ಸಿನಿಮಾಗಳು ಬ್ಲಾಕ್ ಬಸ್ಟರ್ ಹಿಟ್ ಆದವು

ಶಿವಕಾರ್ತಿಕೇಯನ್ ಜೊತೆ ಮಾಡಿದ ಅಮರನ್ ಸಿನಿಮಾ ಅದ್ಭುತವಾದ ರೆಸ್ಪಾನ್ಸ್ ಪಡೆದುಕೊಂಡಿದೆ. ಅಷ್ಟೇ ಅಲ್ಲ 300 ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿದೆ ಈ ರಿಯಲ್ ಲೈಫ್ ಸ್ಟೋರಿ.

ಇನ್ನು ತೆಲುಗಿನಲ್ಲಿ ನಾಗಚೈತನ್ಯ ಜೊತೆ ನಟಿಸಿದ ತಾಂಡೆಲ್ ಮೂವಿ ಕೂಡ ಸೂಪರ್ ಹಿಟ್ ಆಗಿದೆ.

100 ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿದೆ ಸಿನಿಮಾ. ಹೀಗೆ ಸಕ್ಸೆಸ್ ನಲ್ಲಿ ತೇಲುತ್ತಿರುವ ಸಾಯಿ ಪಲ್ಲವಿ ಸದ್ಯಕ್ಕೆ ಬಾಲಿವುಡ್ ನಲ್ಲಿ ರಾಮಾಯಣ ಸಿನಿಮಾದಲ್ಲಿ ನಟಿಸುತ್ತಿದ್ದಾರೆ ಅಂತ ಹೇಳಲಾಗ್ತಿದೆ.

ಎಲ್ಲಾ ಹೀರೋಯಿನ್ ತರ ಅಲ್ಲ ಸಾಯಿ ಪಲ್ಲವಿ. ಸಿನಿಮಾಗಳ ವಿಚಾರದಲ್ಲಿ ಆಗಲಿ, ಆ ಸಿನಿಮಾಗಳ ಪಾತ್ರಗಳ ವಿಚಾರದಲ್ಲಿ ಆಗಲಿ ತುಂಬಾ ಸ್ಟ್ರಿಕ್ಟ್ ಆಗಿ ಇರ್ತಾರೆ. ಅಷ್ಟೇ ಅಲ್ಲ ಎಕ್ಸ್ ಪೋಸಿಂಗ್ ವಿಚಾರದಲ್ಲಿ ತುಂಬಾ ಸ್ಟ್ರಿಕ್ಟ್ ಆಗಿ ಇರ್ತಾರೆ.

ಮುಖಕ್ಕೆ ಬಣ್ಣ, ತುಟಿಗೆ ಲಿಪ್ ಸ್ಟಿಕ್ ಹಾಕಿಕೊಂಡು, ಚಿಕ್ಕ ಡ್ರೆಸ್ ಹಾಕಿಕೊಳ್ಳೋದು ಅವರಿಗೆ ಅಭ್ಯಾಸ ಇಲ್ಲ. ತುಂಬಾ ಸಿಂಪಲ್ ಆಗಿ ನ್ಯಾಚುರಲ್ ಆಗಿ ಇರೋದು ಸಾಯಿ ಪಲ್ಲವಿಗೆ ಅಭ್ಯಾಸ. ಅವಶ್ಯಕತೆ ಇಲ್ಲ ಅಂದ್ರು ಬಣ್ಣಗಳನ್ನ ಹಚ್ಚಿಕೊಳ್ಳೋಕೆ ಇಷ್ಟ ಪಡೋದಿಲ್ಲ.

ಸಾಯಿ ಪಲ್ಲವಿ ತನ್ನ ಮೇಕಪ್ ಬಗ್ಗೆ ತುಂಬಾ ಸಲ ಮಾತನಾಡಿದ್ದಾರೆ. ಈ ಹಿಂದೆ ಒಂದು ಇಂಟರ್‌ವ್ಯೂನಲ್ಲಿ ತನ್ನ ಮೇಕಪ್ ಬಗ್ಗೆ ಡೀಟೇಲ್ಸ್ ಹೇಳಿದ್ದಾರೆ. ಆ ವಿಡಿಯೋದಲ್ಲಿ ಸಾಯಿ ಪಲ್ಲವಿ ಮೇಕಪ್ ರೂಪದಲ್ಲಿ ತಾನು ಯೂಸ್ ಮಾಡುವ ವಸ್ತುಗಳ ಬಗ್ಗೆ ವಿವರಿಸಿದ್ದಾರೆ. ಅವರು ಏನು ಯೂಸ್ ಮಾಡ್ತಾರೆ ಅಂತ ನಿಮಗೆ ಗೊತ್ತಾ?

ಸಾಯಿ ಪಲ್ಲವಿಗೆ ಮೇಕಪ್ ಗಾಗಿ ಈ ಎರಡು ವಸ್ತುಗಳು ಮಾತ್ರ ಜಾಸ್ತಿ ಯೂಸ್ ಮಾಡ್ತಾರಂತೆ. ಸಾಯಿ ಪಲ್ಲವಿ ತನ್ನ ಮುಖಕ್ಕೆ ಸ್ಪೆಷಲ್ ಆಗಿ ಕ್ರೀಮ್ ಏನು ಹಚ್ಕೋದಿಲ್ಲ. ಆದ್ರೆ ಅವರ ಬ್ಯಾಗ್ ನಲ್ಲಿ ಒಂದು ಐಲೈನರ್, ಮಾಯಿಶ್ಚರೈಸರ್ ಕ್ರೀಮ್ ಇರುತ್ತೆ.

ಈ ಎರಡು ವಸ್ತುಗಳನ್ನ ಮಿಸ್ ಮಾಡ್ದೆ ಬ್ಯಾಗ್ ನಲ್ಲಿ ಕ್ಯಾರಿ ಮಾಡ್ತಾರಂತೆ.


ಆದ್ರೆ ಹೇರ್ ಗೆ ಸಂಬಂಧ ಪಟ್ಟ ಹಾಗೆ ಸಾಯಿ ಪಲ್ಲವಿ ಆಗಾಗ ಡಿಸೈನ್ ಚೇಂಜ್ ಮಾಡ್ಕೊಳ್ತಾ ಇರ್ತಾರಂತೆ. ಸಿನಿಮಾ ಪಾತ್ರಕ್ಕೆ ತಕ್ಕಂತೆ ಸಾಯಿ ಪಲ್ಲವಿ ತನ್ನ ಹೇರ್ ಸ್ಟೈಲ್ ಚೇಂಜ್ ಮಾಡ್ಕೊಳ್ತಾರೆ.

ಆದ್ರೆ ಹೆಚ್ಚಾಗಿ ಅವರ ಹೇರ್ ಸ್ಟ್ರೈಟ್ ಕರ್ಲಿಯಾಗಿ ಇರೋದನ್ನ ನಾವು ನೋಡ್ತಿವಿ. ಸಾಯಿ ಪಲ್ಲವಿ ರಾತ್ರಿ ಶೂಟಿಂಗ್ ಮಾಡುವಾಗ ಮಾತ್ರ ಐಲೈನರ್ ಯೂಸ್ ಮಾಡ್ತಾರೆ. ಕಣ್ಣು ಚೆನ್ನಾಗಿ ಕಾಣಿಸೋದಕ್ಕೆ ಜೊತೆಗೆ ಆಕರ್ಷಕವಾಗಿ ಕಾಣಿಸೋದಕ್ಕೆ ಐಲೈನರ್ ಯೂಸ್ ಮಾಡ್ತಾರಂತೆ.

ಗಾರ್ಗಿ, ವಿರಾಟಪರ್ವಂ ಸಿನಿಮಾಗಳಲ್ಲಿ ಸಾಯಿ ಪಲ್ಲವಿ ಯಾವುದೇ ಮೇಕಪ್ ಹಾಕಿಕೊಂಡಿಲ್ಲ. ಮುಖ ತೊಳೆದುಕೊಂಡು ಒರೆಸಿಕೊಂಡು ಶೂಟಿಂಗ್ ಗೆ ಬಂದಿದ್ದೀನಿ ಅಂತ ಸಾಯಿ ಪಲ್ಲವಿ ತಮಾಷೆಯಾಗಿ ಹೇಳಿದ್ದಾರೆ. ಸಿನಿಮಾ ಪೂರ್ತಿ ಸಾಯಿ ಪಲ್ಲವಿ ತನ್ನ ಮೇಕಪ್ ಗಾಗಿ ಕೇವಲ ಐಲೈನರ್ ಮಾತ್ರ ಯೂಸ್ ಮಾಡಿದ್ರಂತೆ.

ಇನ್ನು ತಾನು ಮಾಡುವ ಡಿಫರೆಂಟ್ ಕ್ಯಾರೆಕ್ಟರ್ ಗಳಿಗೆ ತಕ್ಕ ಹಾಗೆ ಹೇರ್ ಸ್ಟೈಲ್ ಅನ್ನು ತಾನೇ ಚೇಂಜ್ ಮಾಡ್ಕೊಳ್ತಾರಂತೆ. ಮೇಕಪ್ ಹಾಕಿಕೊಳ್ಳೋದಕ್ಕಿಂತ ಪಾತ್ರಕ್ಕೆ ತಕ್ಕಂತೆ ನಟಿಸೋದು ಮುಖ್ಯ ಅಂತ ಅವರು ನಂಬ್ತಾರೆ.

# ದಾಖಲೆ ಬರೆದ ರಶ್ಮಿಕಾ ಮಂದಣ್ಣ



ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದ ದೀಪಿಕಾ ಪಡುಕೋಣೆ ಚಿತ್ರರಂಗಕ್ಕೆ ಬಂದು ಹೊಸ ದಾಖಲೆ ಬರೆದಿದ್ದಾರೆ. ವೃತ್ತಿಜೀವನದಲ್ಲಿ ಚಿಕ್ಕ ಮತ್ತು ದೊಡ್ಡ ಪಾತ್ರಗಳನ್ನು ನಿರ್ವಹಿಸಿ ಇಂದು ಬಾಲಿವುಡ್‌ನ ನಂಬರ್ ಒನ್ ನಾಯಕಿಯಾಗಿ ಮೆರೆದಿದ್ದಾರೆ. ಅವರು ಆಯ್ಕೆ ಮಾಡುವ ಪಾತ್ರಗಳು ಆ ಸ್ಥಾನಕ್ಕೆ ಅವರನ್ನು ಏರಿಸಿವೆ. ದೀಪಿಕಾ ಪಡುಕೋಣೆ ಅವರ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿವೆ. ಅನೇಕ ನಟಿಯರಿಗೆ ಸಾಧ್ಯವಾಗದ ದಾಖಲೆಗಳನ್ನು ದೀಪಿಕಾ ಮಾಡಿದ್ದಾರೆ.ಇದೀಗ ದೀಪಿಕಾ ಪಡುಕೋಣೆ ದಾಖಲೆಯನ್ನು ನಟಿ ರಶ್ಮಿಕಾ ಮಂದಣ್ಣ ಮುರಿದಿದ್ದಾರೆ.

ಕರ್ನಾಟಕದ ರಶ್ಮಿಕಾ ಮಂದಣ್ಣ ಇದೀಗ ಬಾಲಿವುಡ್ ಬಾಕ್ಸ್ ಅಫೀಸ್‌ನ ಹೊಸ ರಾಣಿಯಾಗಿದ್ದಾರೆ. ರಶ್ಮಿಕಾ ಮಂದಣ್ಣ ಬಾಲಿವುಡ್ ಬಾಕ್ಸ್‌ಅಫೀಸ್‌ನಲ್ಲಿ ಅತಿ ಹೆಚ್ಚು 500 ಕೋಟಿ ಚಿತ್ರಗಳನ್ನು ಹೊಂದಿರುವ ಏಕೈಕ ಭಾರತೀಯ ನಟಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸತತ 500 ಕೋಟಿ ರೂಪಾಯಿಗೂ ಹೆಚ್ಚಿನ ಕಲೆಕ್ಷನ್ ಕೊಟ್ಟ ನಾಯಕಿ ಅನ್ನೋ ಹೆಗ್ಗಳಿಕೆಗೆ ರಶ್ಮಿಕಾ ಮಂದಣ್ಣ ಪಾತ್ರರಾಗಿದ್ದಾರೆ. ಕೋವಿಡ್ ನಂತರ ದೀಪಿಕಾ ಅವರ ಐದು 100 ಕೋಟಿ ಸಿನಿಮಾಗಳು ಬಂದಿವೆ. ಆದರೆ 500 ಕೋಟಿ ಸಿನಿಮಾಗಳು ಕೇವಲ ಎರಡೇ. ಪಠಾಣ್ (543.22), ಜವಾನ್ (640.42) . ಕಲ್ಕಿಯ ಹಿಂದಿ ಆವೃತ್ತಿ 292.96 ಕೋಟಿ ಗಳಿಸಿದೆ. ದೀಪಿಕಾ ಪಡುಕೋಣೆ ಅಭಿನಯಿಸಿದ 5 ಚಿತ್ರದಲ್ಲಿ 2 ಚತ್ರ 500 ಕೋಟಿ ರೂಪಾಯಿ ಇನ್ನುಳಿದ 3 ಚಿತ್ರ 100 ಕೋಟಿ ರೂಪಾಯಿಗೆ ಹೆಚ್ಚಿನ ದಾಖಲೆ ಬರೆದಿದೆ.

ಆದರೆ ರಶ್ಮಿಕಾ ಮಂದಣ್ಣ ಬಾಲಿವುಡ್‌ಗೆ ಮೂರು 500 ಕೋಟಿ ಸಿನಿಮಾಗಳನ್ನು ನೀಡಿದ್ದಾರೆ. ಅನಿಮಲ್ (554), ಪುಷ್ಪ 2 (1265.97) ಎರಡು ಚಿತ್ರಗಳು. ಇನ್ನೊಂದು ಛಾವಾ. ಈ ಚಿತ್ರ 447.26 ಕೋಟಿ ಗಳಿಸಿದೆ ಎಂದು ವರದಿಯಾಗಿದೆ. ಈ ವಾರವೇ ಈ ಚಿತ್ರ 500 ಕೋಟಿ ಕ್ಲಬ್‌ಗೆ ಸೇರಲಿದೆ.

ಸಲ್ಮಾನ್ ಖಾನ್ ಅಭಿನಯದ ಸಿಕಂದರ್ ಚಿತ್ರದಲ್ಲಿ ರಶ್ಮಿಕಾ ನಾಯಾಕಿಯಾಗಿ ನಟಿಸುತ್ತಿದ್ದಾರೆ. ಈ ಚಿತ್ರ ಈದ್ ಹಬ್ಬಕ್ಕೆ ಬಿಡುಗಡೆಯಾಗುತ್ತಿದೆ. ಈ ಚಿತ್ರವೂ 500 ಕೋಟಿ ಕ್ಲಬ್ ಸೇರುವ ಸಾಧ್ಯತೆ ಇದೆ. ವಿಶೇಷ ಅಂದರೆ ಬಾಲಿವುಡ್‌ನಲ್ಲಿ ಹೊಸ ದಾಖಲೆ ಬರೆದ ದೀಪಿಕಾ ಪಡುಕೋಣೆ, ಇದೀಗ ದಾಖಲೆ ಮುರಿದ ರಶ್ಮಿಕಾ ಮಂದಣ್ಣ ಇಬ್ಬರೂ ಕರ್ನಾಟಕದವರು ಅನ್ನೋದು ವಿಶೇಷ.




ಅಸ್ಸಾಂನ 8 ವರ್ಷದ ಬಾಲಕಿಯೊಬ್ಬಳು ತನ್ನ ಅಮೋಘವಾದ ನೃತ್ಯದಿಂದ ವಿಶ್ವವೇ ಬೆರಗುಗೊಳ್ಳುವಂತೆ ಮಾಡಿದ್ದಾಳೆ. ಬ್ರಿಟನ್ ಗಾಟ್ ಟಾಲೆಂಟ್ ಶೋದಲ್ಲಿ ಸ್ಪರ್ಧಿಯಾಗಿ ಭಾಗವಹಿಸಿದ ಈಕೆ ತನ್ನ ಅದ್ಭುತವಾದ ನೃತ್ಯ ಪ್ರದರ್ಶನದಿಂದ ಅಲ್ಲಿ ಸೇರಿದ್ದ ಅತಿಥಿಗಳು ಹಾಗೂ ತೀರ್ಪುಗಾರರು ಮೂಗಿನ ಮೇಲೆ ಬೆರಳಿಡುವಂತೆ ಮಾಡಿದ್ದಾಳೆ.

ಈಕೆಯ ಅದ್ಭುತ ನೃತ್ಯದ ವೀಡಿಯೋ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದು, ಅನೇಕರು ಬಾಲಕಿಯ ಸಾಧನೆಗೆ ಶ್ಲಾಘನೆ ವ್ಯಕ್ತಪಡಿಸುತ್ತಿದ್ದಾರೆ. ಉದ್ಯಮಿ ಆನಂದ್ ಮಹೀಂದ್ರಾ ಕೂಡ ಬಾಲಕಿಯ ಅದ್ಬುತ ಪ್ರತಿಭೆಗೆ ಮನಸೋತಿದ್ದು, ತಮ್ಮ ಎಕ್ಸ್ ಖಾತೆಯಲ್ಲಿ ಆಕೆಯ ನೃತ್ಯದ ವೀಡಿಯೋವನ್ನು ಶೇರ್ ಮಾಡುತ್ತಾ ಶ್ಲಾಘನೆ ವ್ಯಕ್ತಪಡಿಸುತ್ತಿದ್ದಾರೆ.

ಕೇವಲ 8 ವರ್ಷ, ವಿಶ್ವ ದರ್ಜೆ, ಉಕ್ಕಿನ ಇಚ್ಛೆಯುಳ್ಳವಳು, ಏಕೆಂದರೆ ಅವಳ ದೇಹದ ಮೇಲೆ ಆ ರೀತಿಯ ಸಾಮರ್ಥ್ಯವೂ ತೀವ್ರವಾದ ಅಭ್ಯಾಸದಿಂದ ಮಾತ್ರ ಬರುತ್ತದೆ. ಅದು ಕೇವಲ 'ಪಿಂಕ್ ಪ್ರಿನ್ಸಸ್ ಮನೆ' ಆಗಿದ್ದರೂ ಸಹ ಆಕೆಯ ಮಹತ್ವಾಕಾಂಕ್ಷೆಯ ಮೇಲೆ ಅಚಲವಾದ ಗಮನ ಕಾಣುತ್ತಿದೆ ಎಂದು ಆನಂದ್ ಮಹೀಂದ್ರ ಬರೆದುಕೊಂಡಿದ್ದಾರೆ. ಅಂದಹಾಗೆ ದೇಹದಲ್ಲಿ ಮೂಳೆಯೇ ಇಲ್ಲವೇನೋ ಎಂದು ನೋಡುಗರಿಗೆ ಭಾಸವಾಗುವಂತೆ ಅದ್ಭುತವಾಗಿ ನೃತ್ಯ ಮಾಡಿದ ಈಕೆಯ ಹೆಸರು ಬಿನಿತಾ ಚೆಟ್ರಿ.

ನನ್ನ ಹೆಸರು ಬಿನಿತಾ ಚೆಟ್ರಿ, ನನಗೆ 8 ವರ್ಷ, ನಾನು ಭಾರತದ ಅಸ್ಸಾಂನಿಂದ ಬಂದಿದ್ದೇನೆ, ಬ್ರಿಟನ್ ಆಟ್ ಟಾಲೆಂಟ್ ಶೋ ನನ್ನ ಕನಸಿನ ವೇದಿಕೆಯಾಗಿದ್ದು, ನಾನು ಅಲ್ಲಿ ವಿಜಯಶಾಲಿಯಾಗಲು ಬಯಸಿದ್ದೇನೆ, ನಾನು ಪಿಂಕ್ ಪ್ರಿನ್ಸಸ್ ಹೌಸನ್ನು ಕೊಳ್ಳಲು ಬಯಸಿದ್ದೇನೆ ಎಂದು ಆಕೆ ವೇದಿಕೆಯಲ್ಲಿ ತನ್ನ ಪ್ರತಿಭಾ ಪ್ರದರ್ಶನಕ್ಕೂ ಮೊದಲು ತೀರ್ಪುಗಾರರಿಗೆ ತನ್ನನ್ನು ಪರಿಚಯಿಸಿಕೊಂಡಿದ್ದಾಳೆ.

ನಂತರ ಆಕೆ ಮಾಡಿದ ನೃತ್ಯ ನೋಡುಗರನ್ನು ಒಂದು ಕ್ಷಣ ತುದಿಗಾಲಲ್ಲಿ ನಿಲ್ಲುವಂತೆ ಮಾಡಿತ್ತು. ಹಿಮ್ಮುಖವಾಗಿ ಪಲ್ಟಿಯ ಜೊತೆ ಕ್ಷಣದಲ್ಲಿ ದೇಹವನ್ನು ಬಳುಕಿಸಿ ಬದಲಿಸುವ ರೀತಿಗೆ ತೀರ್ಪುಗಾರರೇ ಅಚ್ಚರಿಗೊಂಡಿದ್ದರು, ಕೆಲವರು ಈಕೆಗೆ ಎಂಟು ವರ್ಷ ಎಂದರೆ ನಂಬಲಾಗದು ಎಂದು ಉದ್ಘರಿಸಿದರು.

ಹಾಗೆಯೇ ಜಡ್ಜ್‌ಗಳು ಕೂಡ ಆಕೆಯ ಪವರ್‌ಫುಲ್ ಡಾನ್ಸ್‌ಗೆ ಪ್ರತಿಕ್ರಿಯಿಸುತ್ತಾ, 'ನಿನ್ನದು ಹುಲಿಯ ಶಕ್ತಿಯೊಂದಿಗೆ ವೇದಿಕೆಯಲ್ಲಿ ಹಾವಿನಂತೆ ದೇಹವನ್ನು ಬಳುಕಿಸುವ ರೀತಿ, ಭಾರತೀಯ ಸ್ಪರ್ಶದೊಂದಿಗೆ ಸಮಕಾಲೀನ ನೃತ್ಯವನ್ನು ಮಿಶ್ರ ಮಾಡಿದ್ದು ಇಷ್ಟವಾಯ್ತು. ತುಂಬಾ ಬಲಿಷ್ಠ, ತುಂಬಾ ಕಡಿಮೆ, ತುಂಬಾ ಶಕ್ತಿಶಾಲಿಯಾಗಿತ್ತು. ಇದೊಂದು ಅದ್ಭುತ ಪ್ರದರ್ಶನ. ಚೆನ್ನಾಗಿ ಮಾಡಿದ್ದೀರಿ, ನನ್ನ ಡಾರ್ಲಿಂಗ್' ಎಂದು ತೀರ್ಪುಗಾರರು ಬಿನಿತಾ ಚೆಟ್ರಿಯನ್ನು ಕೊಂಡಾಡಿದ್ದಾರೆ. ಅಲ್ಲದೇ ಆಕೆಯನ್ನು ಮುಂದಿನ ಸುತ್ತಿಗೆ ಆಯ್ಕೆ ಮಾಡಿದ್ದಾರೆ ಎಂದು ಘೋಷಿಸಿದ್ದಾರೆ.

**ಅಸ್ಸಾಂ ಸಿಎಂ ಶ್ಲಾಘನೆ**

ಹಾಗೆಯೇ ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಸರ್ಮಾ ಕೂಡ ಬಿನಿತಾ ಚೆಟ್ರಿ ವೈರಲ್ ವೀಡಿಯೋವನ್ನು ಪೋಸ್ಟ್ ಮಾಡಿದ್ದು, ಈ ಪುಟ್ಟ ಹುಡುಗಿಗೆ ನನ್ನ ಶುಭಾಶಯಗಳು, ಆಕೆ ಪಿಂಕ್ ಪ್ರಿನ್ಸಸ್ ಹೌಸ್ ಖರೀದಿಸಲು ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ ಎಂದು ಕಾಮೆಂಟ್ ಮಾಡಿದ್ದಾರೆ. ಅಂದಹಾಗೆ ಬ್ರಿಟಿಷರನ್ನು ಮೆಚ್ಚಿಸಿದ ಪುಟ್ಟ ಬಾಲಕಿಯ ಎನರ್ಜಿಟಿಕ್ ಡಾನ್ಸ್ ವೀಡಿಯೋ ಇಲ್ಲಿದೆ ನೋಡಿ, ನಿಮ್ಮ ಅಭಿಪ್ರಾಯ ಕಾಮೆಂಟ್ ಮಾಡಿ. ಅಮೋಘ ನೃತ್ಯದಿಂದ ಬ್ರಿಟಿಷರು ಬೆರಗಾಗುವಂತೆ ಮಾಡಿದ ಭಾರತೀಯ ಬಾಲೆ

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878